ಪುಸ್ತಕ ಪ್ರಪಂಚ

ನವೆಂಬರ್-ಡಿಸೆಂಬರ್— ೧೯೯೭



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಹೆಚ್ಚುವರಿ ಪುಟಗಳನ್ನು ಅಳವಡಿಸಿ ೯೭ ರ ನವೆಂಬರ್–ಡಿಸೆಂಬರ್
ಸಂಚಿಕೆಯನ್ನು ಅನಿವಾರ್ಯವಾಗಿ ಒಟ್ಟಿಗೆ ಮುದ್ರಿಸಿದೆ.
ಮಾನ್ಯ ಓದುಗರು ಸಹಕರಿಸಬೇಕಾಗಿ ವಿನಂತಿ.

ಸಂ

// ಪುಸ್ತಕ ಪ್ರಪಂಚ
ಮಾಸಿಕ

ಸಂಪುಟ ೪೮ ಸಂಚಿಕೆ ೨-೩

ನವೆಂಬರ್-ಡಿಸೆಂಬರ್-೧೯೯೭

ಮುಖ ಚಿತ್ರ
ಕಯ್ಯಾರ ಕಿಞ್ಞಣ್ಣರೈ
ಕೃಪೆ : ನೇತ್ರರಾಜು

ಪರಿವಿಡಿ

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-೫೭೦ ೦೦೬

ಪಯಸ್ವಿನೀ ದಂಡೆಯ ಪಾರಿಜಾತ: ಕಯ್ಯಾರ ಕಿಞ್ಞಣ್ಣ ರೈ

ಡಾ|| ತಾಳ್ತಜೆ ವಸಂತಕುಮಾರ
ಮುಖ್ಯಸ್ಥರು, ಕನ್ನಡ ವಿಭಾಗ
ಮುಂಬಯಿ ವಿಶ್ವವಿದ್ಯಾನಿಲಯ
ವಿದ್ಯಾಗಿರಿ, ಮುಂಬಯಿ-೪೦೦೦೯೮

ಸೃಜನಶೀಲ ಸಾಹಿತಿಯು ತನ್ನ ಪರಿಸರದ ಶಿಶುವೂ ಹೌದು, ಅದರ ಓರೆಕೋರೆಗಳನ್ನು ತಿದ್ದಿ, ಕಲಾತ್ಮಕವಾಗಿ ರೂಪಿಸಿ ರಸಪುಷ್ಟಗೊಳಿಸುವ ವಾಸ್ತುಶಿಲ್ಪಿಯೂ ಹೌದು. ತನ್ನ ಸುತ್ತಲಿನ ಸೌಂದರ್ಯವನ್ನು ಗ್ರಹಿಸುತ್ತಲೇ ಅದಕ್ಕೆ ನಿತ್ಯತ್ವವನ್ನು ನೀಡುವ ಹೊಸ ದೃಷ್ಟಿಯನ್ನು ಕಲ್ಪಿಸುವ ಪ್ರಸಾದಗುಣದಲ್ಲಿಯೇ ಸಾಹಿತ್ಯದ ಅನನ್ಯತೆಯಿರುತ್ತದೆ. ಹಾಗಿದ್ದಾಗ ಮಾತ್ರವೇ ಸಾಹಿತ್ಯವು ನಿಜವಾದ ಅರ್ಥದಲ್ಲಿ ಸೃಷ್ಟಿಶೀಲವಾಗುತ್ತದೆ; ಸಾಂಸ್ಕೃತಿಕ ಪರಂಪರೆಯೊಂದಕ್ಕೆ ತನ್ನ ಯೋಗದಾನವನ್ನು ನೀಡುತ್ತಾ ಅದನ್ನು ಸಂಪದ್ಭರಿತವನ್ನಾಗಿ ಮಾಡುತ್ತದೆ. ಇದು ಒಂದು ಅವ್ಯಾಹತವಾದ ಪ್ರಕ್ರಿಯೆಯೇ ಆಗಿದೆ. ಎಂದರೆ, ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವ ಜ್ಞಾನವಾಹಿನಿಯಿಂದ ತನ್ನ ಅಳವಿಗೆ ಬರುವಷ್ಟನ್ನು ಮೊಗೆದುಕೊಳ್ಳುವ ಸಾಹಿತಿಯು ಅದಕ್ಕೆ ಪ್ರತಿಯಾಗಿ ತಾನು ಸಂಪಾದಿಸಿದ ಜ್ಞಾನ ಸಂಪತ್ತನ್ನು ಅಲ್ಲಿಗೆ ಸೇರಿಸುತ್ತಲೇ ಹೋಗುವುದರಿಂದ ಆ ಸೆಲೆಯು ಬತ್ತುವುದಿಲ್ಲ. ಈ ಆದಾನ-ಪ್ರದಾನ ವರ್ತುಲದಲ್ಲಿ ಸಂಚರಿಸುತ್ತಾ ಪೋಷಕಾಂಶಗಳನ್ನು ಸ್ವೀಕರಿಸುವ ಸಾಹಿತಿಯು ತಾನೂ ಬೆಳೆಯುತ್ತಾನೆ; ಸಾಹಿತ್ಯವನ್ನೂ ಬೆಳೆಸುತ್ತಾನೆ.

ಸೃಷ್ಟಿಕ್ರಿಯೆಯಲ್ಲಿ ಪರ್ಯಾಪ್ತವಾದ ಮನಸ್ಸು ತನ್ನ ಯುಗದ ಧರ್ಮಕ್ಕೆ ಸ್ಪಂದಿಸುತ್ತಿರುತ್ತದೆ; ಅದನ್ನು ಸಂಸ್ಕರಿಸುವ ಹೊಣೆಯನ್ನೂ ನಿರ್ವಹಿಸುತ್ತಿರುತ್ತದೆ; ಈ ಚೈತನ್ಯದ ಸಂವೇದನೆ-ಸಂವಹನ ವಲಯಗಳಿಗೆ ಮಿತಿಗಳಿವೆಯಾದರೂ ಸಾಹಿತ್ಯವು ಪ್ರತಿಪಾದಿಸುವ ಮೌಲ್ಯಗಳಿಗೆ ಕಾಲ-ದೇಶಗಳ ಪರಿವೆಯಿರಬೇಕಾಗಿಲ್ಲ. ಸಾಹಿತಿಯ ಸಮಕಾಲಿನ ಪ್ರಜ್ಞೆ-ಸಾರ್ವಕಾಲಿಕ ಮೌಲ್ಯಗಳು ಸಮರ್ಪಕ ಬಿಂದುವಿನಲ್ಲಿ ಸಂಧಿಸಿದಾಗ ಸೃಷ್ಟಿಯಾಗುವ ಸಾಹಿತ್ಯವು ಶ್ರೇಷ್ಠ ಶ್ರೇಣಿಯದಾಗುತ್ತದೆ. ಎಲ್ಲ ರೀತಿಯ ಭಾಷಿಕ, ಭೌಗೋಳಿಕ, ಸಾಮಾಜಿಕ ಎಲ್ಲೆಕಟ್ಟುಗಳಾಚೆಗೂ ತನ್ನ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುತ್ತದೆ.

ಈ ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತಿಗಳನ್ನು ಪರಿಗಣಿಸಿದಾಗ, ಡಿ.ವಿ.ಜಿ; ಕುವೆಂಪು; ಬೇಂದ್ರೆ; ಮಾಸ್ತಿ; ಕಾರಂತ; ಗೋಕಾಕ; ಅಡಿಗರಂಥ ಹಲವು ಹೆಸರು

ಗಳು ನಮಗೆ ಹೊಳೆಯುತ್ತವೆ. ಮಂಗಳೂರಿನಲ್ಲಿ ಈ ಬಾರಿ ನಡೆಯಲಿರುವ ೬೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವ ಕಯ್ಯಾರ ಕಿಞ್ಞಣ್ಣರೈಯವರು ನಮ್ಮ ಹಿರಿಯ ಸಾಹಿತಿಯಾಗಿ ಮತ್ತು ಗಡಿನಾಡಿನ ಒಬ್ಬರು ಕನ್ನಡಿಗರಾಗಿ ಪ್ರಸ್ತುತರಾಗುತ್ತಾರೆ.

'ಬೆಂಕಿ ಬಿದ್ದಿದೆ ಮನೆಗೆ' ಎಂದು ಕನ್ನಡಿಗರನ್ನು ಎಚ್ಚರಿಸುವ ಈ ಕವಿಯನ್ನು ನಾನು 'ಗಡಿನಾಡಿನ ಗಾರುಡಿಗ' ಎಂದು ಕರೆಯಬಯಸುತ್ತೇನೆ. ಕವಿ-ವಿದ್ವಾಂಸ ಕಯ್ಯಾರರನ್ನು ನಾಡು ಗುರುತಿಸಿದ್ದು ಸಾಲದು ಎನಿಸುತ್ತದೆ ಎಂದು ನಾನು ೧೯೮೫ರಷ್ಟು ಹಿಂದೆಯೇ ಬರೆದಿದ್ದೆ. ಈ ಅವಗಣನೆಗೆ ಈಗ ಅಲ್ಪ ಪರಿಹಾರವಾದರೂ ಸಿಕ್ಕುತ್ತಿದೆಯೆಂಬ ಸಮಾಧಾನವನ್ನು, ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯು ಅರ್ಹರೊಬ್ಬರ ಪಾಲಾಗಿದೆಯೆಂಬ ಸಂತೃಪ್ತಿಯನ್ನೂ, ವೈಯಕ್ತಿಕವಾಗಿ ಅವರ ಬಗೆಗೆ ನನಗಿರುವ ಗೌರವವನ್ನು ಸಂವಹಿಸುವ ಅವಕಾಶವಾಗಿ—ಲೇಖನವನ್ನು ಬಳಸಿಕೊಳ್ಳುತ್ತಿದ್ದೇನೆ.

ಕವಿ ಕಯ್ಯಾರರ ತಾಯ್ನೆಲ ಕೇರಳ–ಕರ್ನಾಟಕಗಳ ಗಡಿ ಪ್ರದೇಶವಾದ ಕಾಸರಗೋಡು "ಹಸಿರು ಹೊಲ ನೆಲದ, ಗೊನೆ ಹಣ್ಣು ತೋಟದ ಕಲಕಲ ನಿನಾದದಿಂ ನದಿ ಹರಿಯುವ, ಗಿಡ ಬಳ್ಳಿ ಮರ ತುಂಬಿ ಚೆಲು ಚೆಲ್ಲಿದ ಊರು" ಇದು. ಎರಡು ಭಿನ್ನವಾದ, ಆದರೆ ಸಾಂಸ್ಕೃತಿಕವಾಗಿ ಒಂದಕ್ಕೊಂದು ಪೂರಕವಾದ ಸಂಸ್ಕೃತಿಗಳು ಅವರ ಕಲಾಸಕ್ತಿಯನ್ನು ಉದ್ದೀಪಿಸಿದುವು, ಪ್ರತಿಭೆಯನ್ನು ಜಾಗೃತಗೊಳಿಸಿದುವು.

ಕಯ್ಯಾರರು ಕೃಷಿಕ ಕುಟುಂಬದ ದುಗ್ಗಪ್ಪರೈ–ಕಯ್ಯಾರ ದೈಯ್ಯಕ್ಕ ದಂಪತಿಗಳ ಮಗನಾಗಿ ೧೯೧೫, ಜೂನ್ ೬ರಂದು ಜನಿಸಿದರು. ಸೋನೆ ಮಳೆ, ಬೊಬ್ಬುಳಿ ತೆರೆಗಳನ್ನು ದಡಕ್ಕೆ ಹೊಮ್ಮಿಸುವ ಅಬ್ಬರದ ಕಡಲು, ಏರುತಗ್ಗುಗಳ ಭೂಪ್ರಕೃತಿಯ ಮಣ್ಣಿನ ಕಂದನಾಗಿ ಬೆಳೆಯುವ ಭಾಗ್ಯವು ಅವರದಾಯಿತು. "ನಾನು ಜನಿಸಿ ಬಾಳಿದ ಈ ನೆಲದಲ್ಲಿ ಪಯಸ್ವಿನೀ ಎಂಬ ನದಿಯು ಸದಾ ನಿರ್ಮಲ ಜಲಭರಿತೆಯಾಗಿ ಹರಿಯುತ್ತದೆ. ಇದು ಎಲ್ಲರಿಗೂ ಹಾಲನ್ನುಣಿಸಿದಂತೆ ನನಗೂ ಧಾರಾಳವಾಗಿ ಸ್ತನ್ಯವನ್ನು ನೀಡಿದೆ. ಇವಳು ನನ್ನ ಕಾವ್ಯಕಲ್ಪನೆಗೆ ಪ್ರತಿಭಾ ಪಯಸ್ವಿನಿಯಾಗಿ ಹರಸಿದವಳು. ಈ ನೆಲದ, ಈ ನೀರಿನ ಋಣ ನನಗೆ ಹಿರಿದು, ಅದು ತೀರಸಲಾರದ್ದು" ಕೃತಜ್ಞತೆಯ ಗುರುತ್ವದಿಂದ ಬಾಗಿದ ಕವಿಯು ಹೀಗೆ ಬರೆದುಕೊಂಡಿದ್ದಾರೆ. "ನಾಡಿಗೆ, ನುಡಿಗೆ ಕೀರ್ತಿ ತಂದ ಕವಿ ಪಂಕ್ತಿಯಲ್ಲಿ ನಾನು ತೀರಾ ಕೊನೆಯವನು, ಚಿಕ್ಕವನು" ಎನ್ನುವ ಈ ವಿನಯಸಂಪನ್ನತೆಯೇ ಈ ಕವಿಯ ಅನರ್ಘ್ಯಸೊತ್ತಾಗಿ ಬದುಕಿನ ಪಥವನ್ನು ನಿರ್ದೇಶಿಸಿದೆ. ಸಾಫಲ್ಯದತ್ತ ಕೈ ಹಿಡಿದು ನಡೆಸಿದೆ.

ಕಯ್ಯಾರರ ಮಾತೃಭಾಷೆಯು ತುಳು. ಮಲೆಯಾಳಂ, ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತಗಳು ಕಲಿತ ಭಾಷೆಗಳು. ಈ ಅರಳುತ್ತಿದ್ದ ಪ್ರತಿಭೆಗೆ ಎಳವೆಯಲ್ಲಿಯೇ ರಾಷ್ಟ್ರಕವಿ ಗೋವಿಂದ ಪೈಯವರ ಶಿಸ್ತಿನ ಸಂಸ್ಕಾರವೂ ದೊರೆತುದೊಂದು ಯೋಗಾಯೋಗವೆನ್ನಬೇಕು. ಇದು ಕಯ್ಯಾರರ ಕಾವ್ಯ-ವಿದ್ವತ್ತುಗಳೆರಡಕ್ಕೂ ನಿರ್ದಿಷ್ಟ ದಿಕ್ಕು ದೊರೆಯಲು ಸಹಕಾರಿಯಾಯಿತು.

ಸಫಲ ಅಧ್ಯಾಪಕರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಪತ್ರಿಕೋದ್ಯಮಿಯಾಗಿ ಕಯ್ಯಾರರ ಆಸಕ್ತಿಗಳು ಹಲವು ಮುಖಗಳಾಗಿ ಹರಿದಿರುವುದನ್ನು ಕಾಣುತ್ತೇವೆ. ೧೯೪೬ರಲ್ಲಿ ಕೇರಳದ ಪೆರಡಾಲದಲ್ಲಿರುವ ನವಜೀವನ ಹೈಸ್ಕೂಲಿನ ಅಧ್ಯಾಪಕರಾಗಿ ಅವರು ತಮ್ಮ ಶಿಕ್ಷಕ ವೃತ್ತಿಯನ್ನು ಆರಂಭಿಸಿದರು. ಯಕ್ಷಗಾನ–ತಾಳಮದ್ದಳೆಗಳ ಕ್ಷೇತ್ರಗಳಲ್ಲೂ ಅವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಈ ಮೊದಲೇ ಕೆಲಕಾಲ ಮಂಗಳೂರಿನಲ್ಲಿ ನೆಲಸಿದ್ದಾಗ, ಸ್ವದೇಶ ಚಳವಳಿ ಮತ್ತು ಪತ್ರಿಕೋದ್ಯಮಗಳಲ್ಲಿ ದುಡಿದ ಅನುಭವವೂ ಅವರಿಗಿದೆ. ಪತ್ರಿಕೋದ್ಯಮಿಯಾಗಿ ಅವರು, 'ಪ್ರಭಾತ' 'ಸ್ವದೇಶಾಭಿಮಾನ' 'ಹಿಂದೂ' ಹಾಗೂ 'ಮೇಲ್' ಪತ್ರಿಕೆಗಳಿಗೆ ಸೇವೆಯನ್ನು ಸಲ್ಲಿಸಿದ್ದಾರೆ. ಇವುಗಳಲ್ಲದೆ, ಸಮಾಜ ಸೇವಾ ಚಟುವಟಿಕೆಗಳಲ್ಲೂ ಅವರು ಪ್ರವೃತ್ತರೇ ಆಗಿದ್ದರು. ಸ್ಥಳೀಯ ಪಂಚಾಯಿತಿ ಅಧ್ಯಕ್ಷರ ನೆಲೆಯಿಂದಲೂ ಅವರು ತಮ್ಮ ತಾಯ್ನೆಲದ ಏಳಿಗೆಗಾಗಿ ದುಡಿದಿದ್ದಾರೆ.

ಎಳವೆಯಲ್ಲಿ, ನಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಕಯ್ಯಾರರು ಸಂಪಾದಿಸಿದ 'ನವೋದಯ ಪಾಠಮಾಲೆ' ನಮಗೆ ಪಠ್ಯಗಳಾಗಿದ್ದುವು. ೧೯೫೬ರ ಭಾಷಾವಾರು ವಿಂಗಡಣೆಯ ಬಳಿಕ ಕಾಸರಗೋಡು ಕೇರಳಕ್ಕೆ ಸೇರಿತಷ್ಟೆ. ಅಂದಿನಿಂದ ಅವರ ಈ ಪಠ್ಯಗಳು ನಿರ್ಗಮಿಸಿದುವು.

ಏನೇ ಇದ್ದರೂ ಅವರ ಪ್ರಥಮ ಒಲವು ಸಾಹಿತ್ಯ – ಅದರಲ್ಲೂ ಕಾವ್ಯವೇ. ಶ್ರೀಮುಖ, ಐಕ್ಯಗಾನ, ಪುನರ್ನವ, ಚೇತನ, ಕೊರಗ, ಗಂಧವತೀ, ಪಂಚಮಿಗಳು ಅವರ ಮುಖ್ಯ ಕವನ ಸಂಕಲನಗಳು. "ನವ್ಯ ಸಾಹಿತ್ಯದಲ್ಲಿ ಮಣ್ಣಿನ ವಾಸನೆಯು ಗಾಳಿ ಬೀಸುವುದಕ್ಕೂ ಮೊದಲೇ 'ರೈತ ಕವಿ' ಎನಿಸಿಕೊಂಡವರು ಕಯ್ಯಾರರು" ಅವರ ಸಾಹಿತ್ಯ ಕೃಷಿಯೂ ವೈವಿಧ್ಯಪೂರ್ಣವಾದ ಬೆಳೆಗಳನ್ನು ಕೊಟ್ಟಿದೆ. ಹದಿನೈದು ಕವನ ಸಂಕಲನಗಳು, ಎಂಟು ಗದ್ಯ ಲೇಖನಗಳ ಸಂಗ್ರಹಗಳು, ಆರು ವಿಮರ್ಶಾ ಕೃತಿಗಳು, ಒಂದು ನಾಟಕ, ಎಂಟು ಶಿಶು ಸಾಹಿತ್ಯ ಕೃತಿಗಳು ಮೂರು ಅನುವಾದಿತ ಕೃತಿಗಳು....ಕನ್ನಡಕ್ಕೆ ಅವರ ಕೊಡುಗೆಗಳಾಗಿವೆ. ಐದು ಉಪನಿಷತ್ಕಾವ್ಯಗಳ ಸರಳ ಕನ್ನಡ ರೂಪಾಂತರವಾದ 'ಪಂಚಮಿ' ಅವರ ಪ್ರತಿಭೆ - ಪಾಂಡಿತ್ಯಗಳೆರಡಕ್ಕೂ ನಿಕಟವಾಗಿದೆ.

ಇಂಥ ಬಹುಮುಖ ಸೇವೆಗೆ ತಕ್ಕ ಮಾನ್ಯತೆಯೂ ಅವರನ್ನು ಅರಸಿಕೊಂಡು ಬಂದಿದೆ. ಶ್ರೇಷ್ಠ ಅಧ್ಯಾಪಕರೆಂದು ರಾಷ್ಟ್ರಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ತಮಿಳ್ನಾಡು ಮತ್ತು ಕೇರಳ ಸರಕಾರಗಳ ಪ್ರಶಸ್ತಿಗಳು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ–ಇವುಗಳು. ಅವುಗಳಲ್ಲಿ ಕೆಲವು ಮಾತ್ರ. ಈಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯು ಅವುಗಳ ಹಿರಿಮೆಗೆ ಮಹತ್ವದ ಗರಿಯೊಂದನ್ನು ಸೇರಿಸುತ್ತಿದೆ.

"ಒಬ್ಬ ಕವಿಯ ಪ್ರೇರಣೆಗಳನ್ನೂ ಅವನ ಮೇಲಾದ ಪ್ರಭಾವಗಳನ್ನೂ ಪರಿಗಣಿಸುವಾಗ ಇವುಗಳಿಂದ ಯಾವುದೇ ಒಬ್ಬ ಮಹತ್ವದ ಕವಿಯ ಸಾಧನೆಯೂ ಮುಖ್ಯವಾಗುವುದಿಲ್ಲ ಎನ್ನುವುದು ನೆನಪಿಡ

ಬೇಕಾದ ಅಂಶವಾಗಿದೆ. ಈ ಪ್ರೇರಣೆಗಳನ್ನು ಪಡೆದೂ ಅವನು ತನ್ನ ಸ್ವೋಪಜ್ಞತೆಯನ್ನು ಉಳಿಸಿಕೊಳ್ಳಬಹುದು: ಪ್ರಭಾವಗಳನ್ನು ಅರಗಿಸಿಕೊಂಡೂ ತನ್ನ ಸೃಷ್ಟಿಯ ವೈಶಿಷ್ಟ್ಯವನ್ನು ಉಳಿಸಿಕೊಳ್ಳಬಹುದು" ಎನ್ನುವ ಮಾತು ಕಯ್ಯಾರರ ಸಂದರ್ಭದಲ್ಲಂತೂ ನಿಜವೇ ಆಗುತ್ತದೆ.

"ನನ್ನ ಒಂಭತ್ತನೆಯ ವಯಸ್ಸಿನಲ್ಲಿ ನಾನು ಪ್ರಥಮತಃ ಕವನಿಸಿದೆನು. ಆ ಕವನವು ನಂದಳಿಕೆಯವರ 'ಕುಮಾರ ವಿಜಯ' ಯಕ್ಷಗಾನ ಪ್ರಸಂಗದ ಒಂದು ಪದ್ಯದ ಧಾಟಿಯಲ್ಲಿತ್ತು. ಮನೆಯಲ್ಲಿ ಆಗಾಗ ಜರಗುತ್ತಿದ್ದ ತಾಳಮದ್ದಳೆ, ಸುತ್ತುಮುತ್ತಲು ಆಗುತ್ತಿದ್ದ ಬಯಲಾಟಗಳು ಇವುಗಳಿಂದಾಗಿಯೇ ನನ್ನ ಆದಿಯ ಆ ಕವಿತಾ ಕಲ್ಪನೆಗೆ ಪ್ರೇರಣೆಯು ಬಂದಿರಬೇಕು" ಎಂದು ಕಯ್ಯಾರರೇ ಬರೆಯುತ್ತಾರೆ.

ಈ ಚಿಗುರೊಡೆಯುತ್ತಿದ್ದ ಕವಿತಾಸಕ್ತಿ—ಶಕ್ತಿಗಳಿಗೆ ಕ್ರಮಾಗತವಾದ ಶಿಕ್ಷಣವೂ ಪೋಷಕವಾಯಿತು. ವಾಲ್ಮೀಕಿ, ವ್ಯಾಸ, ಕಾಳಿದಾಸ, ಭಾಸ ಮುಂತಾದವರ ಸಂಸ್ಕೃತ ಕೃತಿಗಳು, ಪಂಪ, ರನ್ನ, ಕುಮಾರವ್ಯಾಸರ ಕನ್ನಡ ಕಾವ್ಯ ವಾಹಿನಿ, ವರ್ಡ್ಸ್‌ವರ್ತ್, ಬೈರನ್, ಶೇಕ್ಸ್‌ಪಿಯರರ ಆಂಗ್ಲ ಅಭಿವ್ಯಕ್ತಿ ಕ್ರಮಗಳು ಕಯ್ಯಾರರ ಪ್ರತಿಭೆಗೆ ಸಾಣೆ ಹಿಡಿದುವು, ಅವರ ಕಾವ್ಯ ಮಾರ್ಗವನ್ನು ನಿಷ್ಕರ್ಷಿಸಿದುವು.

ಸಾಕಷ್ಟು ವಿಸ್ತೃತವಾಗಿರುವ ಕಯ್ಯಾರರ ಕಾವ್ಯಪ್ರಪಂಚದ ಪರ್ಯಟನವು ಈ ಲೇಖನದ ಸೀಮಿತ ವ್ಯಾಪ್ತಿಯ ಒಳಗೆ ಸಾಧ್ಯವಾಗುವಂತಿಲ್ಲ. ನನ್ನ ಉದ್ದೇಶವೂ ಅದಲ್ಲ. ಅವರ ಕಾವ್ಯದ ಪ್ರಮುಖ ಒಲವುಗಳನ್ನು ಗುರುತಿಸುವುದರ ಮೂಲಕ ಆಧುನಿಕ ಕಾವ್ಯಜಗತ್ತಿನಲ್ಲಿ ಅವರ ಸ್ಥಾನ ನಿರ್ದೇಶನವಷ್ಟೇ ನನ್ನ ಪ್ರಸ್ತುತ ಲಕ್ಷ್ಯವಾಗಿದೆ. ಇದನ್ನು ನಾನು ಕೆಲವು ಮುಖ್ಯ ನೆಲೆಗಳಾಗಿ ಒಡೆದುಕೊಂಡು ಒಂದು ನಿರ್ದಿಷ್ಟ ಚೌಕಟ್ಟಿಗೆ ಒಳಪಡಿಸಲು ಪ್ರಯತ್ನಿಸಿದ್ದೇನೆ. ಕೆಲವೇ ಕೆಲವು ಕವನಗಳನ್ನು—ಪ್ರಾತಿನಿಧಿಕವಾಗಿ—ಗಮನಿಸುವುದಷ್ಟೇ ಇಲ್ಲಿ ಸಾಧ್ಯವಾಗಿದೆ.

ಕಯ್ಯಾರರು ಕವಿಯಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾಲದಲ್ಲಿ ನವೋದಯ ಕಾವ್ಯ ಸಂಪ್ರದಾಯವು ಪ್ರಬಲವಾದ ಸಾಹಿತ್ಯಿಕ ಚಳವಳಿಯ ಸ್ವರೂಪವನ್ನು ತಾಳಿತ್ತು. ಅದರ ರಮ್ಯ, ಭಾವಪ್ರಧಾನ, ಗೇಯಗುಣ ಪೂರ್ಣವಾದ ಅಭಿವ್ಯಕ್ತಿ ಕ್ರಮವನ್ನು ಕಯ್ಯಾರರು ಸ್ವೀಕರಿಸಿದರು. ಆದರೆ ವಸ್ತುವಿನ ಆಯ್ಕೆಯಲ್ಲಿ ತಮ್ಮ ಸ್ವೋಪಜ್ಞತೆಯನ್ನು ಮೆರೆದರು.

ಈ ಸಂದರ್ಭದಲ್ಲಿ ಪುರಾಣಗಳ ಸಾಂಪ್ರದಾಯಿಕ ಸಿದ್ಧ ಪಾತ್ರಗಳನ್ನು ಅವರು ಕಂಡ ಹೊಸ ದೃಷ್ಟಿಯನ್ನು ಪ್ರಸ್ತಾಪಿಸುವ ಅಗತ್ಯವು ಕಂಡು ಬರುತ್ತದೆ. ಪೂರ್ವ ಕವಿಗಳು ರಚಿಸಿದ ಪ್ರತಿಮೆಗಳನ್ನು ಒಡೆಯದೆಯೂ ಅವುಗಳನ್ನು ಬೇರೊಂದು ದಿಕ್ಕಿನಿಂದ ನೋಡುವ ಸಾಧ್ಯತೆಗಳನ್ನು ಕವಿಯು ಶೋಧಿಸಲು ಹೊರಟ ರೀತಿಯಿದೆಯಲ್ಲ, ಅದು ನನಗೆ ಅನನ್ಯವೆನಿಸುತ್ತದೆ. ಈ ದೃಷ್ಟಿಯಿಂದ ಅವರ 'ಊರ್ಮಿಳಾ' ಕವನವನ್ನು ಪರಿಶೀಲಿಸಬಹುದು ಆದಿಕವಿ ವಾಲ್ಮೀಕಿಯ ಮೇಲಿನ ತಮ್ಮೆಲ್ಲಾ ಗೌರವವನ್ನೂ ಬದಿಗೆ ಸರಿಸಿಟ್ಟು.

"ಆ ಆದಿಕಾವ್ಯವಹ
ರಮ್ಯ ರಾಮಾಯಣವ ನೀವೆಲ್ಲರೋದಿಹಿರಿ
ಪದದರ್ಥ ಭಾವನೆಯ ಸವಿಯ ಬಲ್ಲಿ ಸವಿದಿಹಿರಿ
ಅದರವಸಕ್ತವ್ಯದಪರಾಧ ತಿಳಿದಿದೆಯೆ ?"
(ಊರ್ಮಿಳಾ)

ಎನ್ನುವ ಧೈರ್ಯವನ್ನು ಕವಿಯು ತೋರಿಸುತ್ತಾರೆ. ಇದರ ಹಿಂದೆ ಇರುವ ಅವರ ಮಾನವೀಯ ಕಳಕಳಿಗೆ ಹಲವು ಮಗ್ಗುಲುಗಳೂ ಇವೆ. ಕರುಣೆಯಿಂದಲೇ ಸ್ಫೂರ್ತಿಯನ್ನು ಪಡೆದ ವಾಲ್ಮೀಕಿಯ ಹೃದಯವು ಚಿರತಪಸ್ವಿನಿಯಾಗಿಯೇ ಉಳಿದ ಊರ್ಮಿಳೆಯ ಬಗೆಗೆ ಸಂವೇದನೆಗೊಳಗಾಗಲಿಲ್ಲವೇ ಎನ್ನುವ ಆಶ್ಚರ್ಯ

"ಕರುಳ ಕೊರೆಯುತಿವ ವಿರಹದುರಿಯ
ಬರೆದುಬ್ಬಿಸುವ ಕವಿ
ಆ ಊರ್ಮಿಳಾದೇವಿಯೊಂದುವೊಂದೇ
ಮಾತು
ಸಹ್ಯವೇದನೆಗಾಗಿ ಸಾಂತ್ವನದ ಸವಿಮಾತು
ಒಮ್ಮೆ ಕರುಣಾದೃಷ್ಟಿ—ಅಶ್ರುಧಾರಾವೃಷ್ಟಿ
ಕರೆಸಲಿಲ್ಲಾ !"
(ಅದೇ)

ಎನ್ನುವುದನ್ನೊಂದು ಗಂಭೀರ ಲೋಪವಾಗಿ ಕವಿಯು ಗುರುತಿಸಿದ್ದಾರೆ. ತಮ್ಮ ಕ್ರಾಂತ ದೃಷ್ಟಿಯನ್ನು ಪರಿಚಯಿಸಿದ್ದಾರೆ. ಮಹಾಕಾವ್ಯದ ಅಲಕ್ಷಿತ ಪಾತ್ರವೊಂದಕ್ಕೆ ನ್ಯಾಯ ಸಲ್ಲಿಸಬಯಸುವ ಕವಿ ಸಹಜವಾದ ಕರುಣೆಯೇ ಇಲ್ಲಿ ಕ್ರಿಯಾಶೀಲವಾಗಿದೆ. [ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಕಾವ್ಯದಲ್ಲಂತೂ ಈ ಸಂದರ್ಭವು ಅಪೂರ್ವವಾಗಿ ಚಿತ್ರಿತವಾಗಿರುವುದನ್ನು ಗಮನಿಸುತ್ತೇವೆ.]

"ಬೇಡುವೆಂ ಚಂದ್ರವಂಶದ ಕುಡಿಯ ಕಾಪಾಡು" ಎನ್ನುವ ಕುಂತಿಯು ಕರ್ಣನೊಡನೆ ಮಾಡುವ ಪ್ರಾರ್ಥನೆಯನ್ನು ಕವಿಯು ರಾಜಕೀಯ ಕುತಂತ್ರವಾಗಿ ಕಾಣುವುದಿಲ್ಲ. ಬದಲಿಗೆ ನಿಸ್ವಾರ್ಥಿ ಕರ್ಣನ ನಿಜವಾದ ಸತ್ವವನ್ನು ಲೋಕಮುಖಕ್ಕೆ ಪರಿಚಯಿಸಿದ ಸಂದರ್ಭವಾಗಿ ಪರಿಗಣಿಸುತ್ತಾರೆ.

"ಕವಿದಿದ್ದ ಕತ್ತಲೆಯ ಕೊಳೆ
ತೊಳೆಯಲೆಂದಲ್ತೆ
ದೀಪವಂ ಹಿಡಿದೆತ್ತಿ ತೋರುವುದು
ಸೂರ್ಯನ ಸಮ
ಪ್ರಕಾಶಂಗಿದಿರು ಕೈ ವೆಳಗ ಕಾಣಿಪರೇ"
(ಬೇಡುವೆಂ ಚಂದ್ರವಂಶದ ಕುಡಿಯ ಕಾಪಾಡು)

ಎಂದು ಪ್ರಶ್ನಿಸುತ್ತಾ ಕರ್ಣನಂಥ ವ್ಯಕ್ತಿತ್ವಗಳು ಸ್ವಯಂ ಪ್ರಭೆಯುಳ್ಳವುಗಳೆಂದು ನಿರ್ಧರಿಸುತ್ತಾರೆ. ಪಂಪ–ರನ್ನರ ಪ್ರಭಾವಗಳನ್ನು ಒಪ್ಪಿಕೊಂಡೂ ಕೂಡಾ ಸ್ವತಂತ್ರ ನೆಲೆಯನ್ನು ಇದು ಪಡೆದುಕೊಳ್ಳುತ್ತದೆ.

ಇಂಥ ಪ್ರಯತ್ನಗಳು ಕಯ್ಯಾರರಿಂದಲೇ ಮೊದಲಾದುವೆನ್ನುವುದು ನನ್ನ ಅಭಿಪ್ರಾಯವಲ್ಲ. ಸವೆದ ದಾರಿಯನ್ನೇ ತುಳಿಯುತ್ತಿದ್ದರೂ ಕಯ್ಯಾರರ ನಡಿಗೆಯ ರೀತಿಯು ವಿಶಿಷ್ಟವಾಗಿತ್ತು, ಹೆಜ್ಜೆಯ ಲಯವು ಅಪೂರ್ವವಾಗಿತ್ತೆನ್ನುವುದನ್ನು ಮಾತ್ರವೇ ನನಗೆ ಇಲ್ಲಿ ಸೂಚಿಸಬೇಕಾಗಿದೆ.

"ಚಿರಂತನವಾಗಿ ನಿಲ್ಲುವ, ಕಾವ್ಯಗುಣವುಳ್ಳ ಅನೇಕ ಕವನಗಳನ್ನು ಕಯ್ಯಾರರು ನಮಗೆ ನೀಡಿದ್ದಾರೆ. ನಾವು ನೋಡಬೇಕಾದುದು ಈ ಕವಿಯಲ್ಲಿರುವ ಅಭಿ

ವ್ಯಕ್ತಿಯ ಸರಳತೆ. ಜೀವನದ ಕ್ಲಿಷ್ಟತೆ, ಸಂಕೀರ್ಣತೆಗಳಿಂದ ಅವರ ಮನಸ್ಸು ಮುದುಡಿಕೊಳ್ಳಲಿಲ್ಲ. ಸಮಾಜದೊಡನೆ, ಪರಿಸರದೊಡನೆ ಸದಾ ಸ್ಪಂದಿಸುತ್ತಿದ್ದು.... ಭಾವನಾತ್ಮಕವಾಗಿ ಸುತ್ತಣ ಸನ್ನಿವೇಶವನ್ನು ಪರಿಗ್ರಹಿಸಿದ ರೀತಿಯು ಅವರ ಕಾವ್ಯದಲ್ಲಿ ಹರಿದು ಬಂದಿದೆ" ಎನ್ನುವ ಮಾತಿಗೆ ಸಮರ್ಥ ಉದಾಹರಣೆಯಾಗುವ ಅರ್ಹತೆಯು ಅವರ 'ಕೊರಗ' ಕವನಕ್ಕಿದೆ. ಇದ ಕಯ್ಯಾರರ ಕವನ ಸಂಕಲನವೊಂದರ ಶೀರ್ಷಿಕೆಯೂ ಹೌದು.

ಕಯ್ಯಾರರ ಜೀವಪರವಾದ ನಿಲುವು, ಪ್ರಾಮಾಣಿಕ ದೃಷ್ಟಿ, ಸಹೃದಯ ಸಂವೇದನೆಗಳು ಈ ಕವನದ ಶಕ್ತಿ ಸ್ಥಾನಗಳಾಗಿವೆ. 'ಕೊರಗ' ಪದದ ಶ್ಲೇಷಾರ್ಥವನ್ನೂ ಕವಿಯು ಇಲ್ಲಿ ದುಡಿಸಿಕೊಂಡಿದ್ದಾರೆ. 'ಕೊರಗ' ಹೆಸರಿನ ಬಹಳ ಹಿಂದುಳಿದ ಆದಿವಾಸಿ ಜನಾಂಗದ ನಿಸ್ಪೃಹತೆ, ಪ್ರಕೃತಿ ಸಹಜವಾದ ಬದುಕುಗಳು ಕವಿಯ ಅಂತರ್ಯವನ್ನು ತಟ್ಟಿವೆ. ಆ "ಮುಗ್ಧ ಜನಾಂಗದ ಕುರುಹನ್ನು ಉಳಿಸುವ ಸದಾಶಯ—ಅವರ ಬದುಕಿನ ಬಗೆಗಿನ ಸಹಾನುಭೂತಿ"ಗಳು ಈ ಕವನಕ್ಕೆ ಪ್ರೇರಣೆಯನ್ನು ನೀಡಿವೆ.

ನನ್ನ ದೃಷ್ಟಿಯಲ್ಲಿ, ಯಾವುದೇ ಹಣೆಪಟ್ಟಿಯಿಲ್ಲದ 'ದಲಿತ ಕಾವ್ಯ'ವಾಗಿಯೂ ಈ ಕವನಕ್ಕೆ ಮಹತ್ವವಿದೆ.

"ಇಲ್ಲವೆಂಬುದೆ ಇವನ ಬದುಕು ಭಾಗ್ಯಗಳೆಲ್ಲ
....ಈ ಹಿಂದುಳಿದ ಬಂಧುವನ್ನುದ್ಧರಿಸೆ
ಬಂದ ಗಾಂಧಿಯು ಸಂದ ಗುಂಡಿಗಾಹುತಿಯಾಗಿ
ಆಹುತಿಗೆ ಸಂದರೂ ಇವ ನಿರಂತರ ಕೊರಗ"

(ಕೊರಗ)

ಎನ್ನುವ ನಿರ್ಲಿಪ್ತಿಯ ಲೇಪದೊಳಗೆ ಇಣಿಕಿ ಹಾಕಿದರೆ, ಅಜ್ಞಾನ, ನೋವು, ದಾರಿದ್ರ್ಯ, ಅಲಕ್ಷ್ಯಗಳ ಶೋಷಿತ ಲೋಕವು ಕಣ್ಣಿಗೆ ಬೀಳುತ್ತದೆ. ಈ ಮಾರ್ಗದರ್ಶಿಯ ಕಾರ್ಯವನ್ನು ಕಯ್ಯಾರರ ಕಾವ್ಯವು ಮಾಡಿದೆ. 'ಮಹಾಮೌನಿಯಾದ ಮಿದುಳ'ನ ಅನುಕ್ತ ಸಂದೇಶವೂ ಪರಿಣಾಮಕಾರಿಯಾಗಿದೆ.

ನವೋದಯ ಕಾವ್ಯ ಸಂಪ್ರದಾಯದ ಮಹತ್ವದ ಲಕ್ಷಣವಾಗಿರುವ ಉತ್ಸಾಹದ ಹೊನಲು ಕಯ್ಯಾರರ ಕಾವ್ಯದಲ್ಲೂ ಸ್ಥಾಯಿಯಾಗಿದೆ. ಅದು ದೇಶಭಕ್ತಿ ಪ್ರೇರಿತವಾಗಿ, ಹೊಸತಿನ ಅನ್ವೇಷಣೆಯ ಪ್ರವರ್ತನೆಯಾಗಿ, ಯುಗಾದಿಯ ಮಂಗಲದ ಒಸಗೆಯಾಗಿ, ತುಳುನಾಡಿತಿಯ ದೇಹಸೈಸಿರಿಯ ಪ್ರಶಂಸೆಯಾಗಿ ಅಸಂಖ್ಯ ಪಾತ್ರಗಳಲ್ಲಿ ಹರಿಯುವುದನ್ನು ಕಾಣುತ್ತೇವೆ.

"ಐಕ್ಯವೊಂದೇ ಮಂತ್ರ
ಐಕ್ಯದಿಂದೆ ಸ್ವತಂತ್ರ
ಐಕ್ಯಗಾಗದೆ ರಾಷ್ಟ್ರ ತೇಲುತಿರಲಿ....
ಭಾರತದಿ ಮಮ ಜನ್ಮ
ಸ್ವಾತಂತ್ರ್ಯವೇ ಧರ್ಮ....

(ಐಕ್ಯಗಾನ)

ಎನ್ನುವ ಒಕ್ಕೊರಲಿನ ಉದ್ಘೋಷಕ್ಕೆ ನೀಡುವ ಕರೆಯಲ್ಲಿ ಎಂಥ ಜಡದಲ್ಲೂ ಚೈತನ್ಯವನ್ನು ತುಂಬಬಲ್ಲ ಶಕ್ತಿಯಿದೆ.

ಆದುದರಿಂದ, "ಭಾವನೆಯ ತೀಕ್ಷ್ಣತೆ, ಕಲ್ಪನೆಯ ವೈಭವ, ಭಾಷೆಯ ಸಿರಿ ಅವರಿಗೆ ದೈವದತ್ತವಾಗಿವೆ. ಓಜಸ್ಸು, ಪ್ರಶಾಂತತೆ, ನಾಡು-ನುಡಿಗಳ ನಿಷ್ಠೆಯು ಅವರ ಕಾವ್ಯದಲ್ಲಿ ಎದ್ದು ಕಾಣುತ್ತದೆ" ಎನ್ನುವ ಪ್ರಶಸ್ತಿಯು ಅವರಿಗೆ ಸಲ್ಲತಕ್ಕದ್ದೇ ಆಗಿದೆ.

ಕಯ್ಯಾರರ ಈ ಚಿರಂತನ ಉತ್ಸಾಹವು "ಎನ್ನ ಹೃದಯದ ಸ್ಫೂರ್ತಿ, ಎನ್ನ ಜನತೆಯ ಶಕ್ತಿ, ಎನ್ನ ನಾಡಿನ ಕೀರ್ತಿ ಹೆಚ್ಚಿಸಲ್ಕೆ. ಎಮ್ಮೊಂದಿಗರ ಬದುಕು ಬಾಳಾಗಿ ಬೆಳಗಿಸಲು ಬಲಿತ ಲೇಖನಿಬೇಕು —ರಕ್ತವದಕೆ ಮಸಿ" ಎನ್ನುವ ಆವೇಶದ ಮಟ್ಟಕ್ಕೆ ಹೋಗುವುದನ್ನು ಗುರುತಿಸುತ್ತೇವೆ. ಎಂದರೆ ಇದು ಆಕ್ಷೇಪವಲ್ಲ ಅಜಾನುಬಾಹುವಾದ, ಎತ್ತರದ ಬಾಹ್ಯ ವ್ಯಕ್ತಿತ್ವದ ಒಳಗಿನ ಧೀಮಂತಿಕೆಗೆ, ಸ್ವಾತಂತ್ರ್ಯ ಪೂರ್ವದ ಸಂಸ್ಕಾರವು ರೂಢಿಸಿದ ಆತ್ಮ ಶಕ್ತಿಗೆ, ಉದ್ದಕ್ಕೂ ತಮ್ಮ ಬದುಕನ್ನು 'ನೇಗಿಲಗೆರೆ'ಯಂತೆ ನಡೆಸಿದ ತೃಪ್ತಿಗೆ ಇಂಥ ಉತ್ಸಾಹವು ಸ್ವ-ಭಾವವೇ ಹೌದು ಅದು ಪಡೆದ ಕಾವ್ಯದ ಶರೀರವು ಉತ್ಸಾಹದ ಸೊಡರ್ನೆಯಲ್ಲಿಯೇ ಸದಾ ಮಗ್ನವಾಗಿರುವ ಬತ್ತದ ಕಾರಂಜಿಯೂ ಹೌದು.

ಆಧ್ಯಾತ್ಮಿಕ ಚಿಂತನೆಯೂ ಕಯ್ಯಾರರ ಕಾವ್ಯದಲ್ಲಿ ಎಡೆ ಪಡೆದಿದೆ. "ಸಂಸ್ಕೃತ ಭೂಯಿಷ್ಠವಾದ ಅವರ ಕವನಗಳಲ್ಲಿ ವೇದ, ಪುರಾಣ, ಉಪನಿಷತ್ತುಗಳ ಪ್ರಸ್ತಾಪವು ಬಹಳ ಬಾರಿ ಬರುತ್ತದೆ." ಬರಿಯ ಶಬ್ದ ಶಯ್ಯೆಯಲ್ಲಿ ಮಾತ್ರವಲ್ಲ ಕಾವ್ಯದ ಆಂತರಿಕ ಸತ್ವದಲ್ಲೂ ಅವರ ಈ ಆಧ್ಯಾತ್ಮಿಕ ಒಲವು ಎದ್ದು ಕಾಣುತ್ತದೆ.

"ಅದು ಪೂರ್ಣ, ಇದು ಪೂರ್ಣ, ಉದು ಪೂರ್ಣ ಹಾಡು" ಎನ್ನುವ ಉಪನಿಷದ್ವಾಕ್ಯದ ಕನ್ನಡ ರೂಪಾಂತರದಲ್ಲಾಗಲಿ

"ಗುಹೆಯ ಗಹ್ವರದೊಳಗೆ
ಪ್ರಣವ ಸೂರ್ಯನ ಬೆಳಗೆ
ಧ್ಯಾನಸ್ಥ ಋಷಿಯ ದರ್ಶನವರಳಿಕು
ಪಂಚೇಂದ್ರಿಯದ ಗೇಹ
ಪುಲಕಗೊಂಡಿತು ದೇಹ
ಹೃದ್ವೀಣೆಯಲಿ ಶ್ರುತಿ ವಿಪಂಚಿಸಿತ್ತು
....
ಜೀವಾತ್ಮನ ವಿಕಾಸ
ಪರಮಾತ್ಮನ ಪ್ರಕಾಶ
ಮುಕ್ತಿಯ ಮಹಾಪಥಕೆ ದಾಂದೀಪಗಳು"
(ಪ್ರಣವ)

ಎನ್ನುವ ಪ್ರಣವದ ಓಂಕಾರದ ವಿರಾಟ್ ಸ್ವರೂಪದ ಕಲ್ಪನೆಯಲ್ಲಾಗಲಿ, ಋಗ್ವೇದದಿಂದ ಪ್ರೇರಿತವಾದ "ಮರುದ್ಭಿರಗ್ನ ಆಗಹಿ" ಎನ್ನುವ ಆಮಂತ್ರಣದಲ್ಲಾಗಲಿ ಈ ಆಧ್ಯಾತ್ಮ ಪ್ರವೃತ್ತಿಯು ಹರಳುಗಟ್ಟಿರುವುದನ್ನು ಕಾಣುತ್ತೇವೆ. ಇದು ಆತ್ಮ-ಪರಮಾತ್ಮ ತತ್ತ್ವಗಳ ಜಿಜ್ಞಾಸೆ, ಸಾವಿನಾಚೆಯ ಬದುಕಿನ ಅನ್ವೇಷಣೆ, ಆತ್ಮಸ್ವರೂಪದ ವಿಶ್ಲೇಷಣೆ ಮುಂತಾದ ಚಿಂತನಪರವಾದ ನೆಲೆಗಳನ್ನು ಪಡೆಯುತ್ತದೆ.

ಕಯ್ಯಾರರ ಕಾವ್ಯದ ಇನ್ನೊಂದು ವೈಶಿಷ್ಟ್ಯವು ಅವರ ಜಾನಪದ ಸತ್ವದಲ್ಲಿದೆ. "ಯಕ್ಷಗಾನ, ತಾಳಮದ್ದಳೆ, ಭೂತನರ್ತನ, ಪಾಡ್ದನ, ಓಬೇಲೆ, ಆಟಕಳೆಂಜ, ಪರವ, ಪಂಬದ....ಗದ್ದೆ, ಕೆಸರು, ನೇಗಿಲು....ಇವು ಇವರ ಕಾವ್ಯ ಸ್ಫೂರ್ತಿಯ ಸೆಲೆಗಳು. 'ನೇಗಿಲಿನ ಸಮಕೆ ಲೇಖನಿ ಹಿಡಿದ ಕೈಯಲ್ಲಿ ಗೆರೆ ತಪ್ಪದಿರೆ ಬರೆವೆ' ಎನ್ನುತ್ತಾರೆ! ನೇಗಿಲಿನಿಂದ ಭೌತಿಕ ತೃಪ್ತಿ. ಲೇಖನಿಯಿಂದ ಆಧ್ಯಾತ್ಮಿಕ ಸಿದ್ಧಿ. ಕಯ್ಯಾರರ ಬಹುಪಾಲು ರಚನೆಗಳು ಅಂತಸ್ಸತ್ವದಿಂದ ಸಮೃದ್ಧವಾಗಿ ರಾರಾಜಿಸುತ್ತವೆ" ಎನ್ನುವ ಅಭಿಪ್ರಾಯವು ಅವರ ನೆಲದ, ನೆಲದ

ಕಲೆಯು, ನೆಲದ ಜನದ ಪ್ರೀತಿಗೆ, ಆಪ್ತ ಅನಿಸಿಕೆಗಳಿಗೆ ಧ್ವನಿಯನ್ನು ನೀಡುತ್ತದೆ.

"ಭೂತನರ್ತನ ದುಡಿಯ ನಾದನ
ಯಕ್ಷಗಾನವು ಪಾಡ್ದನ
ನದಿ ನಿನಾದವು ಪಕ್ಷಿಕೂಜನ
ನಿನ್ನ ಪ್ರತಿಭೆಗೆ ಸಾಧನ"

(ರಾಷ್ಟ್ರಕವಿ)

ಗೋವಿಂದ ಪೈಯವರ ಬಗೆಗೆ ಬರೆದ ಸಾಲುಗಳು ಕಯ್ಯಾರರ ಕಾವ್ಯಕ್ಕೂ ಹಿನ್ನೆಲೆಗಳಾಗುತ್ತವೆ.

"ಗದ್ದೆ ಕಳವೆಗಳ ಬಳಸಿ ಕೇಳಿದನು
ನೇಜಿ ಹಾಡು-ಓ ಬೇಲೇ
ನಿದ್ದೆ ಬಿಟ್ಟು ಬಯಲಾಟ ನೋಡಿದನು
ಧಿಮಿತ ಧೀಂಕಿಟದ ಲೀಲೆ
ಪರವ ಪಂಬದರ ನಲಿವ ನಲಿಕೆಯರ
ದುಡಿಯ ಪಾಡ್ದನಗಳಲ್ಲಿ
ಭೂತಕೋಲ ನೇಮವು ನಡಾವಳಿ
ನಡೆಯುತಿರುವ ನೆಲದಲ್ಲಿ"

(ನವೋದಯದ ಋಷಿ)

ಇಂಥ ವಾತಾವರಣದಲ್ಲಿ ಅರಳಿದ ಕಯ್ಯಾರರ ಕಾವ್ಯಕನ್ನಿಕೆಗೆ ಈ ನೆಲದ ಸೊಗಡು ಸಹಜವಾಗಿಯೇ ಮೈಗೂಡಿದೆ.

ಪ್ರಕೃತಿಯ ಮಡಿಲಿನಲ್ಲಿ ಆಡುತ್ತ, ಸುತ್ತಲಿನ ಜಗತ್ತನ್ನ ವಿಸ್ಮಯಭರಿತ—ವಿಸ್ಫಾರಿತ ಕಣ್ಣುಗಳಿಂದ ನೋಡುತ್ತ ಕಯ್ಯಾರರು ಬಾಲ್ಯದಿಂದ ಯೌವನಕ್ಕೆ, ಯೌವನದಿಂದ ಪ್ರೌಢತ್ವಕ್ಕೆ ದಾಟಿದವರು ಈ ಸಾಹಚರ್ಯವು ಅವರ ಕಾವ್ಯದಲ್ಲಿ ಹಾಸುಹೊಕ್ಕಾಗಿರುವ ನಿಸರ್ಗ ವರ್ಣನೆಯಲ್ಲಿ ಪ್ರತಿಫಲಿಸಿದೆ.

ಕಯ್ಯಾರರು ನಿಸರ್ಗವನ್ನು ಮಗುವಿನ ಮುಗ್ಧ ಕುತೂಹಲದಿಂದ ಕಂಡಿದ್ದಾರೆ.

'ಪೊಸದಿಗುಂಪೆ'ಯ ಶುಭ್ರ ಶಿಖರವು ಅವರಿಗೆ ಬದುಕಿನ ಉದಾತ್ತತೆಯ ಸಂಕೇತವಾಗಿ ಕಾಣುತ್ತದೆ. 'ಕಾದ ಕೇಡಿಲ್ಲದಿರುವುದರಿಂದಲೇ ದೃಷ್ಟಿಯನ್ನು ಮರಳಿಸಲಾರದಷ್ಟು ಆಕರ್ಷಣೆಯೂ ಅದರಲ್ಲಿದೆ.'

"ಹಸಿರು ಸೀರೆ ಧರಿಸಿರೆ ನೆಲ ನೀರೆ
ತಾವರೆ ಮೊಗದಲ ಕೇಲ್ನಗೆ ಕೋರೆ
ಹರಿಯುವ ಹೊಳೆ ಕೊರಳಿಗೆ ಹಾರ
ತೃಣಸುಂದರ ಗಿರಿ ಸ್ತನಘನಭಾರ
... .
ನಿಸರ್ಗದೇವಿಯ ನಿಜನಾಟ್ಯ
ದಿವ್ಯದರ್ಶನಕೆ ಶುಭಲಾಸ್ಯ"

(ಕಿರದ್ವಾನ)

ಎನ್ನುವ ಸೌಂದರ್ಯೈಕ ದೃಷ್ಟಿಯು ಪ್ರಕೃತಿಯ ಮೋಹಕತೆಯನ್ನು ಗ್ರಹಿಸುತ್ತದೆ.

ತಮ್ಮ ತಲೆಮಾರಿನ ಬಹುತೇಕ ಕವಿಗಳಂತೆ, ಕಯ್ಯಾರರೂ ಗಾಂಧೀವಾದದಿಂದ ಪ್ರಭಾವಿತರಾದವರು. ಗಾಂಧೀಜಿಯವರಿಗೆ ತಮ್ಮ ಕಾವ್ಯ ಗೌರವವನ್ನು ಸಲ್ಲಿಸಿದವರು. ಅವರದು ಗಾಂಧೀಜಿಯವರನ್ನು ಕಣ್ಣಾರೆ ಕಾಣುವುದೇ ಪರಮ ಸೌಭಾಗ್ಯವೆಂದು ಪರಿಗಣಿಸಿದ್ದ ತಲೆಮಾರಾಗಿತ್ತು. ನನಸಾದ ಈ ಕನಸು-ಸಹಜವಾಗಿಯೇ-ಕಯ್ಯಾರರ ಕಾವ್ಯದ ವಸ್ತುವಾಗಿದೆ.

'ತಮದಿಂದ ಜ್ಯೋತಿಗೆ-ಮೃತ್ಯುವಿಂದ ಅಮೃತಕ್ಕೆ' ವಿಶ್ವವನ್ನೇ ಸಾಗಿಸುವ ಪಣವನ್ನು ತೊಟ್ಟ ಗಾಂಧೀಜಿಯನ್ನು ಅವರು "ಶಾಂತ ಸಾಮ್ರಾಜ್ಯದ ಮಹಾಂತ

ಸ್ವಾತಂತ್ರ್ಯ ಸಾಮ್ರಾಟ"ನಾಗಿ (ಗಾಂಧೀದರ್ಶನ) ಕಂಡಿದ್ದಾರೆ, "ರಾಷ್ಟ್ರ ಸರ್ವಾಂಗದಭ್ಯುದಯದ" (ಗಾಂಧೀಜಿಗೆ) ಹರಿಕಾರನಾಗಿ ಗೌರವಿಸಿದ್ದಾರೆ.

ಕಯ್ಯಾರರು ಬದುಕನ್ನು ಪ್ರೀತಿಸಿದವರು, ಸಾಹಿತ್ಯವನ್ನು ಆರಾಧಿಸಿದವರು. "ನಾನು ನಿರಾಶಾವಾದಿಯಲ್ಲ. ಮುಂದೊಂದು ದಿನ ಶಕ್ತಿಯುತವಾದ ಸಾಹಿತ್ಯವನ್ನು ನಾನು ಸೃಷ್ಟಿಸಲಿದ್ದೇನೆ" ಎನ್ನುವ ಅವರ ಆತ್ಮವಿಶ್ವಾಸವು ಹುಸಿಹೋಗಲಿಲ್ಲ. ಇದೇ ಮಟ್ಟದ ಆಶಾವಾದವನ್ನು ಅವರು ತಮ್ಮ ಕಾವ್ಯದುದ್ದಕ್ಕೂ ಪ್ರತಿಪಾದಿಸಿದ್ದಾರೆ. ಈ ಆಶಾವಾದವೇ ಅವರ ಜೀವನ ಪ್ರೀತಿಯ ಸಶಕ್ತ ವಲಯವೂ ಆಗಿದೆ.

"ಜಗದ ಜೀವನವಿಂತು
ಮಧುಮಧುರ ಬಂಧುರವು
ಇದೆ ಸತ್ಯ ಇದೆ ಶಿವವು
ಇದುವೆ ಸುಂದರವು...."

(ಯಾರೆನುವರು ?)

ಎನ್ನುವ, ಧನಾತ್ಮಕ ದೃಷ್ಟಿಯನ್ನು ಅವರು ಕಾವ್ಯದರ್ಶನವಾಗಿ, ಜೀವನದ ಆದರ್ಶವಾಗಿ ಸ್ವೀಕರಿಸಿದ್ದಾರೆ.

ಅವರು ಕಂಡ ಜಗತ್ತಿನಲ್ಲಿ ಕೆಡುಕೆಂಬುದಿಲ್ಲವೆಂದಲ್ಲ. ಆದರೆ ಅದನ್ನ ಮೀರಿಸುವ, ಅವಿನಾಶಿಯಾದ ಋತದ ಸೌಂದರ್ಯವನ್ನು ಕಾಣುವ ಕಣ್ಣುಗಳನ್ನು ಅವರು ಪಡೆದಿದ್ದಾರೆ. ಆದುದರಿಂದಲೆ ಅವರಿಗೆ ನಾಳೆಗಳಲ್ಲಿ ಭರವಸೆಯಿದೆ. ಜನಮಾನಸದ ಒಳ್ಳೆಯತನದಲ್ಲಿ ಬಹುಭದ್ರವಾಗಿ ಬೇರೂರಿದ ವಿಶ್ವಾಸವಿದೆ.

"ಸಂದೇಹ ಸಂಕಾಲವು ವಿಷಮತೆಯು
ಗೊಂದಲವು
ರಣಪ್ರಮತ್ತರ ಬೊಬ್ಬೆಯಡಗಲಿಹುದು
ಹೊಸ ಜಗದ ನಿರ್ಮಾಣವಾಗಲಿದೆ;
ಮೊಳಗುತಿದೆ
ಕಹಳೆಯದೊ! ಸಮತೆಯನೆ ಸಾರುತಿಹುದು"

(ವಿಶ್ವಗರ್ಭದ ಗೋಳು)

ಎಲ್ಲ ಸಂಕೀರ್ಣತೆ, ವೇದನೆ, ಸಂಕಟಗಳ ಗರ್ಭದಿಂದ ಹೊಸ ಹುಟ್ಟು ಪಡೆಯುವ ಆಶಾಶಿಶುವಿಗೆ ಕವಿಯ ದೃಷ್ಟಿಯಲ್ಲಿ ದೀರ್ಘಾಯುಸ್ಸಿದೆ. ಈ ತುಮುಲ ಕೊನೆಯಾಗಿ ಬಡಬಾಗ್ನಿ ತಣಿದು, ಶಾಂತಿಯು ನೆಲಸುವ ಕ್ಷಣಕ್ಕಾಗಿ, ಮಾನವೀಯತೆಯ ನಿರ್ಮಲ ಗಂಧ ಪ್ರಸಾರಕ್ಕಾಗಿ ಕಾಯುವ ಸಹನೆಯನ್ನು ಕವಿಯು ಹೊಂದಿದ್ದಾರೆ. ಕಾವ್ಯ ಮಾಧ್ಯಮದ ಮೂಲಕ ಸೋತ ಮನಸ್ಸುಗಳನ್ನು ಹುರಿದುಂಬಿಸುವ, ಜೀವನ ಪ್ರೀತಿಯನ್ನು ಪುನರುಜ್ಜೀವಿಸುವ ಕಾರ್ಯವನ್ನು ಕಯ್ಯಾರರು ಬಹು ಶ್ರದ್ಧೆಯಿಂದ ಮಾಡಿದ್ದಾರೆ. ಮಾಡುತ್ತಿದ್ದಾರೆ.

ತಮ್ಮ ಕವನಸಂಕಲನದಿಂದ ಸಂಕಲನಕ್ಕೆ ಕವಿ ಕಯ್ಯಾರರು ಬೆಳೆಯುತ್ತಾ ಬಂದಿದ್ದಾರೆ. ಅವರ ಅನುಭವವು ಮಾಗಿದಂತೆ, ವಿಶ್ವಶಕ್ತಿಯನ್ನು ಅವರು ಪರಿಚಯಿಸಿಕೊಂಡ ರೀತಿಗೂ ಅವರ ಕಾವ್ಯವು ಸಾಕ್ಷಿಯಾಗುತ್ತದೆ. ಅದರ ಅಗಾಧತೆಯ ಮುಂದೆ ಅವರ ತಲೆಯು ತಾನಾಗಿ ಬಾಗುತ್ತದೆ. ಶಿವಕಾರುಣ್ಯದ ಅನಂತ ಮುಖಗಳನ್ನು ಕಂಡ ಕಣ್ಣು ತಣಿಯುತ್ತದೆ. ಎದೆ ತುಂಬಿದ ಧನ್ಯತೆಯೇ ಹಾಡಾಗುತ್ತದೆ.

ಇದೇ ಭಾವವು ಬಲಿತು ತಮ್ಮನ್ನು ಹರಸಿದ ಬದುಕಿನ ಬಗೆಗಿನ ಕೃತಜ್ಞತೆಯ

ರೂಪವನ್ನು ಪಡೆಯುವುದನ್ನು ಇಲ್ಲಿ ಗುರುತಿಸುತ್ತೇವೆ.

"ಎನ್ನ ಬಾಳಿನ ಒಟ್ಟಲಿನಲಿ ಜೇನನೆರೆದು
ಜೀವ ಸವಿಯಾಗಿಸಿದ ಆ ನಲ್ಮೆಗೆ
....
ಸಲಿಸುವೆನು ಕೃತಜ್ಞತೆಯ, ಮಣಿವೆನಗೆ ಹಿಂದು"
(ಧನ್ಯವಾದ)

ಬದುಕಿನ ಕಟು ಅನುಭವಗಳಿಂದ ಅವರ ಮನಸ್ಸು ಕಹಿಯಾಗಿಲ್ಲ. ಬದಲಿಗೆ ಬದುಕು ದಯಪಾಲಿಸಿದ ಸುಖ-ಸಂತೃಪ್ತಿಗಳನ್ನು ಪ್ರಧಾನವಾಗಿ ಕಂಡಿದೆ. ಗುಣಗ್ರಾಹಿತ್ವವನ್ನು ಮೆರೆದಿದೆ.

ಕಯ್ಯಾರರ ಕಾವ್ಯದಲ್ಲಿ ಶಿವತತ್ತ್ವವೂ ಅಡಕಗೊಂಡಿದೆ. ಇದನ್ನು ಅವರು ಲೋಕಸಂಗ್ರಾಹಕ ದೃಷ್ಟಿಯಿಂದ ನೋಡುತ್ತಾರೆ ಎಂದರೆ, ದಿಕ್ಕೆಟ್ಟ ಬದುಕಿನಲ್ಲಿ ದಾರಿ ಕಾಣದೆ ಕಂಗೆಟ್ಟ ಮನುಜ ಕುಲವನ್ನು ನೋಡಿ, ಕೈಕಟ್ಟಿ ಕೂರುವುದು ಕವಿಯ ಜಾಯಮಾನವಲ್ಲ. "ಸಾಹಿತ್ಯವು, ಪಶುಪಂಥವನ್ನು ಮುಂದಿಕ್ಕಿ, ಸತ್ಯಧರ್ಮಕ್ಕೆ ಪಟ್ಟ ಕಟ್ಟಿಸಿ, ಭರತಪುತ್ರರ ಘೋಷವನು ಮುಗಿಲು ಮುಟ್ಟಿಸಿದಾಗಲೇ ಅದಕ್ಕೆ ಸಾಫಲ್ಯ"ವೆನ್ನುವುದನ್ನು ವ್ಯಾಸರ ಸಂಕೇತದ ಮೂಲಕ 'ವೇದವ್ಯಾಸನಿಗೆ' ಕವನದಲ್ಲಿ ಕವಿಯು ಮನಗಾಣಿಸುತ್ತಾರೆ.

ಯಾವುದೇ ಸಾಹಿತ್ಯದ ಒಟ್ಟಂದದ ಮೌಲಿಕತೆಯ ನಿರ್ಧಾರವನ್ನು ಅದು ಪ್ರತಿಪಾದಿಸುವ ಮೌಲ್ಯಗಳಿಗೆ ಸಂವಾದಿಯಾಗಿ ಮಾಡಬೇಕಾಗುತ್ತದೆ. ಕಯ್ಯಾರರು ಪ್ರತಿಪಾದಿಸಿದ ಮೌಲ್ಯಗಳಾದರೂ ಎಷ್ಟು ತೂಕದವುಗಳಾಗಿವೆ! ಒಂದೆಡೆಯಿಂದ ಸತ್ಯ, ಧರ್ಮ, ನಿಯಮ, ನಿಷ್ಠೆ, ವಿಶ್ವಭ್ರಾತೃತ್ವ, ಸಮಾನತೆ, ಸಹೃದಯ ತತ್ತ್ವಗಳ ಓಂಕಾರತ್ವ. ಇನ್ನೊಂದೆಡೆಯಿಂದ ಕತ್ತಲೆಯಿಂದ ಬೆಳಕಿನೆಡೆಗೆ, ಅಜ್ಞಾನದಿಂದ ಅರಿವಿನೆಡೆಗೆ, ಅಂಶದಿಂದ ಪೂರ್ಣದೆಡೆಗೆ ಪದೋನ್ನತಿಯನ್ನು ಪಡೆಯುವ, ಆತ್ಮೋದ್ಧಾರಕ್ಕೆ ಹಂಬಲಿಸುವ ತವಕಗಳು ಈ ನೆಲೆಗಳನ್ನು ನಿರ್ಧರಿಸುತ್ತವೆ.

ಕವಿಯ ಸ್ಥಿತಪ್ರಜ್ಞೆಗೆ ಒಂದು ಉದಾಹರಣೆಯನ್ನು ಕೊಡಬಹುದು. ಅವರಿಗೆ ಮೃತ್ಯುವೆಂಬುದು ಬದುಕಿನ ಕೊನೆಯಲ್ಲ. ಅದು ಒಂದು ಹಂತ ಮಾತ್ರ. ಬದುಕಿನ ಆವರ್ತನದ ಒಂದು ಸಹಜ ಸ್ಥಿತಿ. ಇದುವೇ ನಿಯತಿ. ಆದುದರಿಂದಲೇ ಮೃತ್ಯುವು ಅವರಿಗೆ ಭಯಾವಹವಲ್ಲ. ಬದಲಿಗೆ ಆದರಿಸಬೇಕಾದ ಅತಿಥಿ!

"ನಿನ್ನ ಕರೆ ಬಂದಾಗ ಓಗೊಟ್ಟು ಓಡಿ ಓಡಿ ಬಹೆ
ಸವಿದನಿಯ ಕೇಳಿ ಮೈ ಮರೆಯಲುಂಟು....
....
ಬಾಗಿಲನು ತಟ್ಟಿ ಬರಲಿರುವೆ, ನಾ ಕಾದಿರುವೆ
ಆ ರಸದ ನಿಮಿಷವನೆ ನೆನೆಯುತಿರುವೆ
....
ಇಂದೇ ಬಂದರು ಬಿಡದೆ ಸ್ವಾಗತಿಸುವೆ"
(ಅತಿಥಿ)

'ಜೀವನವನು ಸಾವಿಗಣಿಮಾಡಿ ಬದುಕುವ' ಕೆಲವೇ ಸಾರ್ಥಕ ಜೀವಿಗಳಲ್ಲಿ ಒಬ್ಬರಾಗಿ ಕಯ್ಯಾರರನ್ನು ನಾನು ಗುರುತಿಸುತ್ತೇನೆ. ಬದುಕನ್ನು ತೀವ್ರವಾಗಿ ಪ್ರೀತಿಸುವ ಕವಿಗೆ ಅದರ ಮೋಹವಿಲ್ಲ. ಮೃತ್ಯುವನ್ನು ಆಮಂತ್ರಿಸುತ್ತಾರಾದರೂ ಬದುಕಿಗೆ ವಿಮುಖರಲ್ಲ! ಈ ಸಮದೃಷ್ಟಿಯು

ಚೈತನ್ಯದ ಪಕ್ವಸ್ಥಿತಿಯಲ್ಲಿ ಮಾತ್ರವೇ ಲಭ್ಯವಾಗಬಹುದೇನೋ!

ಇದು ಕಯ್ಯಾರರ ಸಾಹಿತ್ಯ ಕೃಷಿಯ ಒಂದು ವಿಹಂಗಮ ನೋಟ ಮಾತ್ರವೇ ಆಗಿದೆ. ಅಲ್ಲಿ ಪರಿಮಳಿಸುವ ಕಾವ್ಯಕುಸುಮಗಳನ್ನು, ಫಲ ಭಾರದಿಂದ ಬಾಗಿರುವ ಗದ್ಯ ವೃಕ್ಷಗಳನ್ನು ಹತ್ತಿರದಿಂದ ನೋಡಿ ಪರಿಚಯಿಸಿಕೊಳ್ಳಬೇಕಾದ ಅಗತ್ಯವನ್ನಷ್ಟೇ ಇದು ಸೂಚಿಸುತ್ತದೆ.

ಹೊಸಗನ್ನಡ ಸಾಹಿತ್ಯದ ಸರಿಯಾದ ಮೌಲ್ಯಮಾಪನವು ಇನ್ನಷ್ಟೇ ಆಗಬೇಕಾಗಿದೆ. ಈಗೀಗ ಸಮಚಿತ್ತದ ಕೆಲವು ವಿಮರ್ಶಕರು ಆ ಕಾರ್ಯವನ್ನು ಮಾಡುತ್ತಿದ್ದಾರೆ. ಇಲ್ಲವಾದರೆ ನವ್ಯದ ಭರಾಟೆಯ ದಿನಗಳಲ್ಲಿ ನಮ್ಮ ಆಂಗ್ಲ ವಿಮರ್ಶಕರ ಪೂರ್ವಗ್ರಹ ಬದ್ಧ ನಿಲುವುಗಳಿಂದಾಗಿ ಅನೇಕ ನವೋದಯ ಸಾಹಿತಿಗಳಿಗೆ ಅನ್ಯಾಯವೇ ಆಗಿದೆ. ಮಠಾಧಿಪತಿಗಳ ಸೋಗಿನಲ್ಲಿ ಉಪದೇಶಗಳನ್ನು ನೀಡುವ ಇಂತಹವರಿಂದಾಗಿಯೇ ಕೆಲವರ ಸಾಹಿತ್ಯವನ್ನು ನಾವು ನಿರ್ಲಕ್ಷಿಸಿದೆವು. ಈಗ ಮತ್ತೊಮ್ಮೆ ಅವುಗಳತ್ತ ನೋಡುವ ಅವಶ್ಯಕತೆಯಿದೆಯೆನಿಸುತ್ತದೆ. ಕಯ್ಯಾರರಂತಹವರ ಕಾವ್ಯದಲ್ಲಿ ಆವೇಶ ಮತ್ತು ವೈಭವೀಕರಣಗಳಿದ್ದರೆ ಅದು ಸಹಜವೇ ಆಗಿದೆ. ಅವರ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಾವು ಇದಕ್ಕೆ ಕಾರಣಗಳನ್ನು ಗುರುತಿಸಬೇಕಾಗುತ್ತದೆ.

ಈ ಹಿರಿಯ ಚೇತನಕ್ಕೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪದವಿಯು ಉಚಿತವೇ ಆಗಿದೆ. ಈ ಇಳಿವಯಸ್ಸಿನಲ್ಲಿಯೂ ಅವರ ಆರೋಗ್ಯವು ಚೆನ್ನಾಗಿದೆ. ಕಂಠಶ್ರೀಯಂತೂ ಅನುಪಮವಾಗಿದೆ. ನಮ್ಮ ಶ್ರೇಷ್ಠ ವಾಗ್ಮಿಗಳಲ್ಲಿ ಅವರೂ ಒಬ್ಬರಾಗಿದ್ದಾರೆ. ನನ್ನ ಬಾಲ್ಯದಿಂದಲೇ ನಾನು ಪ್ರೀತಿಸುವ, ಗೌರವಿಸುವ ಹಿರಿಯರಾಗಿರುವ ಕಯ್ಯಾರರ ಸಮರ್ಥ ಸಾರಥ್ಯದಲ್ಲಿ ಕನ್ನಡಮ್ಮನ ತೇರು ನಿರ್ವಿಘ್ನವಾಗಿ ಮುಂದೆ ಸಾಗಲಿ, ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ೬೬ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಅರ್ಥಪೂರ್ಣ ಆಯಾಮಗಳನ್ನು ಪಡೆಯಲಿ ಎಂದು ಕನ್ನಡಿಗರೆಲ್ಲರ ಪರವಾಗಿ ಹಾರೈಸುತ್ತೇನೆ.

ಬೆಂಕಿ ಬಿದ್ದಿದೆ ಮನೆಗೆ

ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ!
ಎಲ್ಲರೂ ಎದ್ದೆದ್ದು ಓಡಿ ಬನ್ನಿ!
ಕನ್ನಡದ ಗಡಿ ಕಾಯೆ,
ಗುಡಿ ಕಾಯೆ, ನುಡಿ ಕಾಯೆ
ಕಾಯಲಾರೆನೆ ಸಾಯೆ!
ಓ ಬನ್ನಿ ಬನ್ನಿ!

ಹಾರೆಗುದ್ದಲಿ ಕೊಡಲಿ ನೊಗನೇಗಿಲೆತ್ತುತಲಿ,
ನೆಲದಿಂದ ಹೊಲದಿಂದ ಹೊರಟು ಬನ್ನಿ!
ಕನ್ನಡದ ನಾಡಿಂದ
ಕಾಡಿಂದ ಗೂಡಿಂದ
ಕಡಲಿಂದ ಸಿಡಿಲಿಂದ
ಗುಡುಗಿ ಬನ್ನಿ!

—ಕಯ್ಯಾರ ಕಿಞ್ಞಣ್ಣ ರೈ

ಪ್ರೊ|| ಎಚ್. ಎಂ. ಶಂಕರನಾರಾಯಣರಾವ್ : ಒಂದು ಸಾರ್ಥಕ ಬದುಕು

ಸಿ. ನಾಗಣ್ಣ
ಇಂಗ್ಲಿಷ್ ಪ್ರಾಧ್ಯಾಪಕರು
ಮಹಾರಾಜ ಕಾಲೇಜು, ಮೈಸೂರು.

೧

ಎಂಭತ್ತನಾಲ್ಕು ವರ್ಷಗಳ ತುಂಬು ಜೀವನ ನಡೆಸಿ ಪ್ರೊ|| ಎಚ್‌ಎಂಎಸ್ (೨೧-೧೧-೧೯೧೩ : ೧೭-೯-೧೯೯೭) ಇತ್ತೀಚೆಗೆ ನಿಧನರಾದರು. ಐತಿಹಾಸಿಕ ಪಟ್ಟಣವಾದ ಹರಿಹರದಲ್ಲಿ ಮಧ್ಯಮ ವರ್ಗದ ಸಂಪ್ರದಾಯಸ್ಥ ಕುಟುಂಬವೊಂದರಲ್ಲಿ ಜನಿಸಿ ಬದುಕಿನ ಅನಾನುಕೂಲತೆಗಳನ್ನೆಲ್ಲಾ ಅರಗಿಸಿಕೊಂಡು ನಮ್ಮ ಸಮಾಜದ ಒಬ್ಬ ಗಣ್ಯವ್ಯಕ್ತಿಯಾಗಿ ಅರಳಿದವರು. ತಮ್ಮ ಉನ್ನತ ವ್ಯಾಸಂಗಕ್ಕಾಗಿ ನಲವತ್ತರ ದಶಕದಲ್ಲಿ ಮೈಸೂರು ನಗರವನ್ನು ಆರಿಸಿಕೊಂಡ ಎಚ್‌ಎಂಎಸ್ ತಾವು ನೆಲೆನಿಂತ ಊರಿಗೆ ಹೊಸ ಕಳೆಯನ್ನು ತಂದರು. ದೊಡ್ಡ ಗುರುಪರಂಪರೆಯ ಸಾನ್ನಿಧ್ಯದಲ್ಲಿ ಅವರ ಅಂತರಂಗದ ವಿಕಸನಕ್ಕೆ ಎಡೆಯಾಯಿತು. ಕನ್ನಡದ ಉತ್ತಮೋತ್ತಮ ಕವಿಗಳ ಕಾವ್ಯದ ಕಸುವನ್ನು ಅರ್ಥ ಮಾಡಿಕೊಳ್ಳುವ ಕಡೆ ರಾಯರ ಮನಸ್ಸು ಸದಾ ಉತ್ತರಮುಖಿಯ ಹಾಗೆ ಅತ್ತ ತಿರುಗಿತು. ಕಾವ್ಯ ಒಲಿಯುವುದೇ ಅಪರೂಪ; ಅಂಥ ಅಪರೂಪದ ಕಾವ್ಯದೇವಿ ರಾಯರಿಗೆ ಒಲಿದಿದ್ದ ಬಗೆಯನ್ನು ನಾನು ಅವರ ವಿದ್ಯಾರ್ಥಿಯಾಗಿ ಅನುಭವಿಸಿದ್ದೇನೆ. ಒಂದು ಜನಪದ ಮುಕ್ತಕವನ್ನೇ ನೆಪವಾಗಿ ಇಟ್ಟುಕೊಂಡು ಬೇರೆ ಬೇರೆ ಕಾವ್ಯಗರ್ಭದಲ್ಲಿ ಅಡಗಿದ ಅನರ್ಘ್ಯ ನುಡಿರತ್ನಗಳನ್ನು ಹೆಕ್ಕಿತೆಗೆದು ಚಿತ್ತಾಹ್ಲಾದ ಉಂಟು ಮಾಡುತ್ತಿದ್ದರು. ಅಗಾಧವಾದ ಅವರ ನೆನಪಿನ ಶಕ್ತಿಯನ್ನು ಕಂಡು ನಾವು ಬೆರಗಾಗಿದ್ದೆವು.

ಕನ್ನಡ ಸಾರಸ್ವತಲೋಕದ ಅನೇಕ ಲೇಖಕರ ಕೃತಿಗಳನ್ನು ಪ್ರಕಟಿಸುವ ಗುರುತರವಾದ ಹೊಣೆಯನ್ನವರು ಹೊತ್ತುಕೊಂಡ ಕಥೆ ಸ್ವಾರಸ್ಯಕರವಾಗಿದೆ. ಅಧ್ಯಾಪಕವೃತ್ತಿಗೆ ಹೊಸದಾಗಿ ಪದಾರ್ಪಣ ಮಾಡಿದ ಸಂದರ್ಭದಲ್ಲಿ ಕವಿ ರಾಘವಾಂಕನ ಕುರಿತು ತಾವು ಬರೆದ ಪುಟ್ಟ ಹೊತ್ತಿಗೆಯೊಂದನ್ನು ಪ್ರಕಟಿಸಬೇಕೆಂದಾಗ ದೂರದೃಷ್ಟಿಯುಳ್ಳ ಪ್ರಕಾಶಕರು ದೊರೆಯದೆ ತಮ್ಮ ಪುಸ್ತಕವನ್ನು ತಾವೇ ಪ್ರಕಟಿಸುವ ಹಟ ಹೊತ್ತು ಅದನ್ನು ಹೊರತಂದರು. ತರುವಾಯ 'ಚಂದ್ರಗುಪ್ತ ವಿಜಯ' ಇತ್ಯಾದಿ ಗ್ರಂಥಗಳನ್ನು ಬರೆದರು, ಪ್ರಕಟಿ

ಸಿದರು. ಪರಿಚಿತರು, ಹಿರಿಯರು ಹಾಗೂ ವಾರಗೆಯವರ ಹಸ್ತಪ್ರತಿಗಳಿಗೆ ಪುಸ್ತಕರೂಪ ಕೊಡುವ ಕುತೂಹಲವುಂಟಾಯಿತು; ತತ್ಪರಿಣಾಮವಾಗಿ "ಕನ್ನಡ ಕವಿಕಾವ್ಯ ಮಾಲೆ" ಶಾರದಾ ಮಂದಿರದಲ್ಲಿ ಸ್ಥಾಪಿತವಾಯಿತು. ಪ್ರೊ॥ ಎಚ್‌ಎಂಎಸ್ ತಾವು ಜೀವಿತಾವಧಿಯಲ್ಲಿ ನಾಲ್ಕುನೂರಕ್ಕೂ ಮಿಕ್ಕು ಗ್ರಂಥಗಳನ್ನು ಪ್ರಕಟಪಡಿಸಿದರು ಇದೊಂದು ಅಪರೂಪದ ಸಾಧನೆ. ಕಾರಣ ಅವರು ಕೇವಲ ಒಬ್ಬ ಪ್ರಕಾಶಕರಾಗಿರಲಿಲ್ಲ; ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಅತ್ಯಂತ ಶ್ರೇಷ್ಠ ಮಟ್ಟದ ವಿದ್ಯಾಸಂಸ್ಥೆಯಾಗಿದ್ದ ಶಾರದಾವಿಲಾಸ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿದ್ದರು. ತರುವಾಯ ಆ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಸ್ವತಃ ಲೇಖಕರಾಗಿದ್ದರು. ತುಂಬು ಸಂಸಾರದ ಹೊಣೆ ಹೊತ್ತಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಪತ್ನಿವಿಯೋಗವನ್ನು ಅನುಭವಿಸಬೇಕಾಗಿ ಬಂದರೂ ಆ ದುಃಖವನ್ನು ನುಂಗಿ ನೀಲಕಂಠರಾಗಿದ್ದರು. ಉಳಿದೆಲ್ಲರ ಪಾಲಿಗೆ 'ಶಂಕರ'ರೂ 'ಶುಭ'ಕರರೂ ಆಗಿದ್ದರು. ಆ ಕಾರಣದಿಂದಲೇ ಅವರ ಸಾಧನೆ ಇಂದು ನಮಗೆ ಹೆಮ್ಮೆ ತರುತ್ತದೆ. ಅವರ ಬಗ್ಗೆ ಕೃತಜ್ಞತಾಭಾವವನ್ನು ಮೂಡಿಸುತ್ತದೆ.

ಅವರ ನಡೆನುಡಿ, ವ್ಯಕ್ತಿತ್ವ, ಕಾರ್ಯತತ್ಪರತೆ, ಆದರ್ಶ ಇತ್ಯಾದಿಗಳ ಬಗ್ಗೆ ಅವರ ಒಡನಾಡಿಗಳು ಹಾಗೂ ಕನ್ನಡನಾಡಿನ ಸಾಂಸ್ಕೃತಿಕ ವಲಯದ ಹಿರಿಯರು ಹೇಳಿರುವ ಮಾತುಗಳನ್ನು ನೆನೆಯುವುದು ಸೂಕ್ತವಾಗಿದೆ. ಬಿ. ಶಿವಮೂರ್ತಿ ಶಾಸ್ತ್ರಿಗಳು ಅವರನ್ನು ಕಂಡದ್ದು ಹೀಗೆ:

> ಶಂಕರನಾರಾಯಣ ರಾಯರನ್ನು ನೋಡಿದ ಕೂಡಲೇ ಅವರು ಒಬ್ಬ ದೊಡ್ಡ ಮನುಷ್ಯರೆಂಬುದು ಅರ್ಥವಾಗುತ್ತದೆ. ಅವರು ಎತ್ತರದ ಒಳ್ಳೆಯ ಕಟ್ಟಾಳು, ಸುಂದರ ಮುಖಮುದ್ರೆಯುಳ್ಳವರು, ಪರೋಪಕಾರಿಗಳು, ಮೃದುಭಾಷಿಗಳು, ಹಸನ್ಮುಖಿಗಳು. ಅವರನ್ನು ಹೋಲುವಂತಹ ಜನ ನಾಡಿನಲ್ಲಿ ಕಡಿಮೆ. ....ಲಕ್ಷಗಟ್ಟಲೆ ಹಣವನ್ನು ವೆಚ್ಚಮಾಡಿ, ನೂರಾರು ಗ್ರಂಥಗಳನ್ನು ಪ್ರಕಟಿಸಿ ಅವರು ಕನ್ನಡ ಸಾಹಿತ್ಯಕ್ಕೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಅವರ ಹೆಸರು ಕನ್ನಡ ನಾಡಿನಲ್ಲಿ ಮನೆ-ಮಾತಾಗಿದೆ. ಅವರು ಪ್ರಕಟಿಸುವ ಪುಸ್ತಕಗಳು ಒಳ್ಳೆಯ ಕಾಗದ, ಒಳ್ಳೆಯ ಮುದ್ರಣಗಳಿಂದ ಕೂಡಿರುತ್ತದೆ. ಇದು ಅವರ ಕಾರ್ಯಶ್ರದ್ಧೆಗೆ ನಿದರ್ಶನ.

ಗ್ರಂಥ ಪ್ರಕಟಣೆಯ ವಿಚಾರದಲ್ಲಿ ಎಚ್‌ಎಂಎಸ್ ಹಾಕಿಕೊಂಡ ಗುಣಮಟ್ಟದ ಬಗ್ಗೆ ಪ್ರೊ॥ ದೇಜಗೌ ಹೇಳುತ್ತಾರೆ:

> ಅವರೆಂದೂ ಸಾಮಾನ್ಯಾಭಿರುಚಿಯ ಪೂರೈಕೆಗಾಗಿ ಗ್ರಂಥಗಳನ್ನು ಪ್ರಕಟಿಸಿದವರಲ್ಲ. ವಿದ್ವಜ್ಜನರಿಗೆ, ಪ್ರೌಢ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾಗಿ ಬೇಕಾದ ಶ್ರೇಷ್ಠ ಗ್ರಂಥಗಳನ್ನು ಅವರು ಪ್ರಕಟಿಸಿದ್ದಾರೆ. ಕನ್ನಡದಲ್ಲಿ ವಿದ್ವತ್ತು ಬೆಳೆಯುವುದಕ್ಕೆ ಅವರು ಅಮೂಲ್ಯವಾದ ಸಾಹಿತ್ಯವನ್ನು ನೀಡಿದ್ದಾರೆಂದು ಧಾರಾಳವಾಗಿ ಹೇಳಬಹುದು.

ನಮ್ಮ ಪ್ರೊಫೆಸರರ ಕೈಬರಹದ ಬಗ್ಗೆ ನಮಗೆ ತುಂಬಾ ಅಭಿಮಾನ. ಅಷ್ಟು ಮುದ್ದಾದ ಕೈಬರಹ ಅಪರೂಪ. ನನ್ನದು ಕಾಕಲಿಪಿಯಾದರೆ, ಶಂಕರನಾರಾಯಣ ರಾಯರದು 'ಶಂಕರಲಿಪಿ' ಎಂದು ಪ್ರೊ॥ ಎಸ್. ವಿ. ಪರಮೇಶ್ವರಭಟ್ಟರು ಆಗಾಗ ಹೇಳುತ್ತಿದ್ದರಂತೆ. ಅದರ ವಿಷಯವಾಗಿ ಅವರ ಗುರುಗಳೂ, ಮಿತ್ರರೂ ಆದ ಪ್ರೊ॥ ಕೆ. ವೆಂಕಟರಾಮಪ್ಪನವರು ಹೇಳಿರುವುದನ್ನು ಗಮನಿಸಿ:

> ನಮ್ಮ ರಾಯರ ಕೈಬರೆಹವನ್ನು ನೋಡಿದರೆ ಅವರ ಮನಸ್ಸಿನ ಶುದ್ಧತೆಯನ್ನು ಊಹಿಸಿಕೊಳ್ಳಬಹುದು. ಆ ಬರೆಹದಲ್ಲಿ ಕೊಂಚವೂ ಮೋಡಿಯಿಲ್ಲ. ಅಕ್ಷರ ಸ್ಖಾಲಿತ್ಯಗಳಿಗೆ ಸ್ವಲ್ಪವೂ ಎಡೆಯಿಲ್ಲ. ಆತುರವಾಗಿ ಬರೆಯಲಿ, ಸಾವಧಾನವಾಗಿ ಬರೆಯಲಿ, ಅವರ ಕನ್ನಡ ಇಂಗ್ಲಿಷ್ ಬರೆವಣಿಗೆ ಅಚ್ಚುಮಾಡಿದಂತೆ ರಮ್ಯವೂ ಸುಸ್ಪಷ್ಟವೂ ಖಚಿತವೂ ಆಗಿರುತ್ತದೆ. ಆ ಬರೆವಣಿಗೆಯನ್ನು ಚಿಕ್ಕಮಕ್ಕಳೂ ನಿರಾತಂಕವಾಗಿ ಶ್ರಮವಿಲ್ಲದೆ ಓದಬಹುದು. ಕೈಬರೆಹದ ಒಂದು ಸ್ಪರ್ಧೆಯನ್ನು ಏರ್ಪಡಿಸಿದರೆ ಶ್ರೀ ಶಂಕರನಾರಾಯಣರಾಯರನ್ನು ಮೀರಿಸಬಲ್ಲವರು ಸಿಕ್ಕುವುದು ಕಷ್ಟ

ನಮ್ಮ ಗುರುಗಳ ಕೈಬರೆಹವನ್ನು ನೋಡಬೇಕೆಂದು ಆಸೆ ವ್ಯಕ್ತಪಡಿಸಿದಾಗ ಹರಿಶಂಕರ್ ಒಳಗೆ ಹೋಗಿ ಹಸ್ತಪ್ರತಿಯ ಒಂದು ದೊಡ್ಡ ಕಟ್ಟನ್ನೇ ತಂದು ಮುಂದಿಡುತ್ತಾರೆ. ಬೇರೆ ಬೇರೆ ಅಧ್ಯಾಯಗಳಿಗೆ ಸೀಟಾಗಿ ಜೆಮ್‌ಕ್ಲಿಪ್ ಹಾಕಿದ್ದಾರೆ, ಪುಟದ ಸಂಖ್ಯೆ ಇದೆ, ಪ್ರತಿ ಪುಟದಲ್ಲೂ ಮೇಲುಭಾಗದಲ್ಲಿ ಅಧ್ಯಾಯದ ಶೀರ್ಷಿಕೆ ಇದೆ. ಕಣ್ಣಿಗೆ ಒತ್ತಿಕೊಳ್ಳುವಂಥ ಕೈಬರೆಹ, ಅನುಕರಣೀಯವಾದಂಥ ಶಿಸ್ತು, ಅಚ್ಚುಕಟ್ಟುತನ.

ಶಾರದಾ ಮಂದಿರ ಪ್ರಕಾಶಪಡಿಸಿದ ಗ್ರಂಥಗಳ ಬಗ್ಗೆ ಮಾನ್ಯ ಜಿ. ವರದರಾಜ ರಾವ್ ಅವರ ಅಭಿಪ್ರಾಯ ಮನನಯೋಗ್ಯವಾಗಿದೆ:

> ಅವು ಜನಪ್ರಿಯ ಸಾಹಿತ್ಯ ವರ್ಗಕ್ಕೆ ಸೇರಿದುವಲ್ಲ. ಇಲ್ಲವೇ ಕಣ್ಣಿಗೆ ಕಟ್ಟುವಂತಹ ಬಣ್ಣ ಬಣ್ಣದ ಅಟ್ಟೆಗಳಿಂದ ವಿರಾಜಿಸುವಂತಹುದಲ್ಲ. ಕ್ಷುಲ್ಲಕವೋ, ಕ್ಷುದ್ರವೋ ಆದ ಆಸೆ ಆಕಾಂಕ್ಷೆಗಳನ್ನು ಪೂರೈಸುವ ಅಪಕ್ವ ರಚನೆಗಳಲ್ಲ, ಕಾಲಕ್ಕೆ ತಕ್ಕಂತೆ ತಕ್ಕಡಿ ಹಿಡಿಯುವ ಲಾಭದಾಯಕ ಗ್ರಂಥಮಾಲೆಗಳ ಉದ್ಯಮವೂ ಅಲ್ಲ. ಅವರ ಪ್ರಕಟಣೆಗಳಲ್ಲಿ ಬಹುಪಾಲು ಗಹನವೂ, ಜಟಿಲವೂ, ಶಾಶ್ವತವೂ ಆದ ಕೃತಿಗಳು.

ಪುಸ್ತಕ ಪ್ರಕಾಶನದ ಹೊಣೆ ಹೊತ್ತ ತಮ್ಮ ತಂದೆಯವರು ವಿವಿಧ ಜವಾಬ್ದಾರಿಗಳನ್ನು ಹೇಗೆ ನಿಭಾಯಿಸಿದರೆಂದು ಅವರ ಹಿರಿಯ ಮಗ ಪ್ರಾಧ್ಯಾಪಕ ಹರಿಶಂಕರ್ ದಾಖಲು ಮಾಡುತ್ತಾರೆ:

...ನನ್ನ ತಂದೆಯವರಿಗೆ ಸ್ವಯಂ ಲೇಖಕರಾಗುವ ಯೋಗ್ಯತೆಯಿದ್ದರೂ ಅದನ್ನು ಬದಿಗೊತ್ತಿ ಇತರ ಲೇಖಕರ ಕೃತಿಗಳನ್ನು ಪ್ರಕಟಿಸಿ, ಕನ್ನಡದ ಕಾಯಕವನ್ನು ಕೈಗೊಂಡಿದ್ದಾರೆ. ಬೆಳಿಗ್ಗೆಯಿಂದ ಸಂಜೆಯವರೆಗೆ ಕಾಲೇಜಿನ ಕೆಲಸದ ಜೊತೆಗೆ, ಒಂದಲ್ಲ ಒಂದು ಕೃತಿಯ ಕರಡಚ್ಚನ್ನು ಹಿಡಿದು ಮುದ್ರಣಾಲಯಗಳ ಬಾಗಿಲುಗಳನ್ನು ತುಳಿದಿದ್ದಾರೆ. ಕಣ್ಣಲ್ಲಿ ಕಣ್ಣಿಟ್ಟು ಎಲ್ಲ ಕರಡುಗಳನ್ನೂ ತಿದ್ದಿದ್ದಾರೆ, ಮಾಲೆಯನ್ನು ಬೆಳೆಸಿದ್ದಾರೆ. ಸಹಸ್ರ ಸಹಸ್ರ ರೂಗಳನ್ನು ಲೇಖಕರಿಗೆ ಸಂಭಾವನೆಯಾಗಿ ನೀಡಿದ್ದಾರೆ. ಇದೆಲ್ಲವನ್ನೂ ನಾನು ಆಶ್ಚರ್ಯದಿಂದ ಗಮನಿಸಿದ್ದೇನೆ; ಎಷ್ಟೋ ಬಾರಿ ಇದೆಲ್ಲಾ ಹೇಗೆ ಸಾಧ್ಯ ಎಂದು ಆಲೋಚಿಸಿದ್ದೇನೆ. ಅದೇ ನಮ್ಮ ತಂದೆಯವರ ದುಡಿತದ ಫಲ, ಬಾಳಿನ ರಹಸ್ಯ ಎಂದು ನಾನು ಭಾವಿಸಿದ್ದೇನೆ.

೨

ಈ ಲೇಖನಕ್ಕೆ ಪೂರ್ವತಯಾರಿಯ ನಿಮಿತ್ತವಾಗಿ ಮೊನ್ನೆ ಎಚ್‌ಎಂಎಸ್ ಬದುಕಿ ಬಾಳಿದ ಮನೆಯ ಪರಿಸರವನ್ನು ಗಮನಿಸಬೇಕೆಂಬ ಉದ್ದೇಶದಿಂದ ಮಾನ್ಯರಾದ ಹರಿಶಂಕರ್ ಹಾಗೂ ಗೋಪಿನಾಥರಿಗೆ ತಿಳಿಸಿ ಅಲ್ಲಿಗೆ ಹೋದೆ. ಮಾಗಿದ ಹಣ್ಣು ತೊಟ್ಟು ಕಳಚಿ ಬೇರೆಯಾಗುವಂತೆ ಎಚ್‌ಎಂಎಸ್ ಅದೃಶ್ಯಲೋಕಕ್ಕೆ ಸರಿದ ಕರುಣದ ವಾತಾವರಣ ಮನೆಯಲ್ಲಿ ತಾಂಡವವಾಡುತ್ತಿತ್ತು. ಮನೆ ಮಂದಿಯೆಲ್ಲಾ ನನ್ನ ಸುತ್ತಲೂ ಕುಳಿತುಕೊಂಡು ಎಚ್‌ಎಂಎಸ್‌ರ ಜೀವಿತದಲ್ಲಿ ಆಗಿಹೋದ ಅನೇಕಾನೇಕ ಪ್ರಸಂಗಗಳಲ್ಲಿ ತಮ್ಮ ಪ್ರಕೃತಿಗೆ ಪ್ರಿಯವಾದ ಕೆಲವನ್ನು ಆಯ್ದು ನನ್ನ ಮುಂದಿಟ್ಟರು. ವಾಸ್ತವವಾಗಿ ನಾವು ಕುಳಿತಿದ್ದ ಸ್ವಲ್ಪ ವಿಶಾಲವಾದ ಚೌಕಾಕೃತಿಯ ಕೊಠಡಿ ಒಂದು ಕಾಲದಲ್ಲಿ ಭೋಜನಕ್ಕೆ ಮೀಸಲು. ತಿಂಗಳಿಗೊಂದಾವರ್ತಿ ಕನ್ನಡದ ಉದ್ದಾಮ ಲೇಖಕರು ಹಾಗೂ ರಸಿಕಾಗ್ರಣಿಗಳಿಗೆ ಅಲ್ಲಿ ರಸಕವಳ. ಹೇಗಾದರೂ ಮಾಡಿ ಹದಿನಾಲ್ಕು ಮಂದಿಯನ್ನು ಎಚ್‌ಎಂಎಸ್ ಕಲೆಹಾಕಿ ಅಲ್ಲಿ ಊಟದ ಏರ್ಪಾಟು ಮಾಡುತ್ತಿದ್ದರು. ಪಂಡಿತ ಮಂಡಲಿಯೆಂದಮೇಲೆ ಮಾತಿನ ರೀತಿಯನ್ನು ಊಹಿಸುವುದು ಕಷ್ಟವೆ? ಮಾನ್ಯ ಕೆ. ವೆಂಕಟರಾಮಪ್ಪ, ಪ್ರೊ॥ ದೇಜಗೌ, ಪ್ರೊ॥ ಎಸ್. ವಿ. ರಂಗಣ್ಣ, ಪ್ರೊ॥ ಪರಮೇಶ್ವರಭಟ್ಟರು ಮುಂತಾದ ಮಹನೀಯರು ಸಮಾವೇಶಗೊಂಡಲ್ಲಿ ಸರಸ್ವತಿ ಲಾಸ್ಯವಾಡುವುದಿಲ್ಲವೆ? ವಿದ್ವಜ್ಜನರಿಗೆ ಭೋಜನಕೂಟ ಏರ್ಪಡಿಸಿ ಎಚ್‌ಎಂಎಸ್ ತೃಪ್ತಿಪಡುತ್ತಿದ್ದ ಬಗೆ ಹೀಗಾದರೆ, ಲೇಖಕರಿಗೆ ಸಂಭಾವನೆ ಇತ್ತು ಗೌರವಿಸುತ್ತಿದ್ದ ಅವರ ಮಾದರಿ ಆದರ್ಶಪ್ರಾಯ, ಅನನುಕರಣೀಯ. ಎಂದಿನಂತೆ ಭೂರಿಭೋಜನವನ್ನೇರ್ಪಡಿಸಿ ವೀಳ್ಯತಾಂಬೂಲಾದಿಗಳನ್ನಿತ್ತು ಕಡೆಗೆ ಗರಿಗರಿಯಾದ ನೋಟುಗಳನ್ನು ಸಂಭಾವನೆಯಾಗಿ ಕೊಡುತ್ತಿದ್ದರು.

ಅವರ ಉದಾರ ಮನಸ್ಸಿನ ಬಗೆಗೆ ಅವರ ಪುತ್ರರಾದ ಗೋಪಿನಾಥ್ ಮತ್ತು ಹರಿ

ಶಂಕರ್ ಒಂದು ಪ್ರಸಂಗವನ್ನು ನೆನೆಯುತ್ತಾರೆ:

> ಸ್ವಲ್ಪ ವರ್ಷಗಳ ಹಿಂದೆ ಒಂದು ದಿನ ನಮ್ಮ ತಂದೆ ನಮ್ಮನ್ನೆಲ್ಲಾ ಕರೆದು ಹತ್ತಿರ ಕೂರಿಸಿಕೊಂಡು ತಾವು ತಮ್ಮ ತಮ್ಮನಿಗೆ ಬಿಟ್ಟಿರುವ ೫–೬ ಎಕರೆ ಜಮೀನನ್ನು ಬರೆದುಕೊಡಲು ನಿರ್ಧರಿಸಿರುವುದಾಗಿಯೂ, ಈ ವಿಷಯದಲ್ಲಿ ನಾವು ಯಾವ ವಿಧದಲ್ಲೂ ತಪ್ಪು ತಿಳಿಯಬಾರದೆಂದೂ ತಿಳಿಸಿದರು. ದೇವರ ದಯದಿಂದ ನಮಗೆ ಯಾತರಲ್ಲೂ ಕೊರತೆಯಿಲ್ಲ, ಪಾಪ ಆತನಿಗೆ ಆಸ್ತಿಯನ್ನು ಬಿಟ್ಟು ಕೊಟ್ಟರೆ ನಮಗೇನೂ ಬಾಧಕವಾಗುವುದಿಲ್ಲವೆಂಬುದು ಅವರ ವಾದವಾಗಿತ್ತು. ಅವರ ಇಂಗಿತವನ್ನು ಅರಿತುಕೊಂಡು ನಾವೆಲ್ಲಾ ಸಮ್ಮತಿಸಿದೆವು. ಅದೇ ಆಸ್ತಿ ಈವೊತ್ತು ಹದಿನೈದು ಲಕ್ಷ ರೂಪಾಯಿಗಳಷ್ಟು ಬೆಲೆಬಾಳುತ್ತಿದೆ. ಆದಾಗ್ಯೂ ನಾವು ಅದರ ಬಗ್ಗೆ ಚಿಂತಿಸುತ್ತಿಲ್ಲ. ನಮ್ಮ ತಂದೆಯವರು ತೆಗೆದುಕೊಂಡ ನಿರ್ಧಾರವು ಯಾವಾಗಲೂ ಸೂಕ್ತವಾಗೇ ಇರುವುದರಿಂದ ನಾವು ಅದನ್ನು ಪ್ರಶ್ನಿಸುವ ಪ್ರಸಂಗವೇ ಉದ್ಭವವಾಗದು.

ತಾವು ಹೇಗೆ ಸರಳವಾಗಿ ಬದುಕಿ ಗಹನವಾಗಿ ಆಲೋಚಿಸುತ್ತಿದ್ದರೋ ಹಾಗೆ ಮಕ್ಕಳ ಮೇಲೂ ಅವರ ಮಕ್ಕಳ ಮೇಲೂ ಪ್ರಭಾವ ಬೀರಿರುವುದು ಗಮನಕ್ಕೆ ಬರುತ್ತದೆ. ಮನೆಯ ವಾತಾವರಣದಲ್ಲಿ ಅದೇ ಬಗೆಯ ನಿರಾಡಂಬರತೆ, ಸಜ್ಜನಿಕೆ, ಆದರ, ಆತಿಥ್ಯ ಎದ್ದು ಕಾಣುತ್ತವೆ. ಮೂರನೇ ತಲೆಮಾರಿಗೆ ಸೇರಿದ ಮಕ್ಕಳೂ ಸಹ ಹೊಸ ಜನಾಂಗದವರ ಗತ್ತು, ಗೈರತ್ತು, ಸಡಗರಗಳಿಗೆ ಬಲಿಯಾಗದೆ ದೊಡ್ಡ ಪರಂಪರೆಯ ಸದಸ್ಯರೆಂಬುದನ್ನು ತಮ್ಮ ನಡೆನುಡಿಗಳಲ್ಲಿ ಪ್ರಕಟಪಡಿಸುತ್ತಾರೆ. ಸೊಸೆ ಶ್ರೀಮತಿ ಅನಸೂಯ, ಮಗಳು ಶ್ರೀಮತಿ ನಾಗರತ್ನ, ಅಳಿಯಂದಿರಾದ ಶೇಷಾಚಲ—'ಅಣ್ಣ'ನ ಗುಣಗಾನ ಮಾಡುವಾಗ ಹರಿಶಂಕರ್ ನಮ್ಮ ಪ್ರೊಫೆಸರರ ಬಾನುಲಿ ಸಂದರ್ಶನವೊಂದರ ಧ್ವನಿಮುದ್ರಿಕೆಯನ್ನು ಕೇಳಿಸುತ್ತಾರೆ. ಪ್ರೊಫೆಸರರ ಸಾಧನೆ, ಸಿದ್ಧಿ ಹಾಗೂ ಅವರ ವ್ಯಕ್ತಿತ್ವ ಪೂರ್ಣಪ್ರಮಾಣದಲ್ಲಿ ಪ್ರಕಟವಾಗುವ ಹಾಗೆ ಉಚಿತವಾದ ಪ್ರಶ್ನೆಗಳನ್ನು ಕೇಳಿ ಡಾ|| ಪ್ರಧಾನ್ ಗುರುದತ್ತರು ಉಪಕಾರ ಮಾಡಿದ್ದಾರೆ.

'ಅಣ್ಣ'ನ ವಾಣಿಯನ್ನು ಕೇಳುವಷ್ಟಕ್ಕೇ ಹರಿಶಂಕರ್ ತೃಪ್ತರಾಗುವುದಿಲ್ಲ. ಎಚ್‌ಎಂಎಸ್‌ರವರ ಜೊತೆ ಅಭಿನ್ನವಾಗಿ ಗುರ್ತಿಸಿಕೊಂಡು ಎರಡು ದೇಹ ಒಂದು ಆತ್ಮದಂತೆ ಇದ್ದ ಪ್ರೊ|| ಕೆ. ವೆಂಕಟರಾಮಪ್ಪನವರ ಸಂದರ್ಶನವನ್ನು ಕೇಳಿಸುತ್ತಾರೆ. ಎಚ್‌ಎಂಎಸ್ ತಮ್ಮ ಜೀವಿತದ ಉದ್ದಕ್ಕೂ ಮಾಡಿದ ಕಾಯಕವೇ ಇದು. ತಾವು ಹಿನ್ನೆಲೆಗೆ ನಿಂತು ಇತರರನ್ನು ಮಧ್ಯರಂಗಕ್ಕೆ ತಂದು ನೋಡಿ ಸುಖ ಪಟ್ಟವರು. ಅವರ ಮಕ್ಕಳಿಗೂ ಇದೇ ಗುಣ ರಕ್ತಗತವಾಗಿದೆ. ನಮ್ಮ ಸಂಭಾಷಣೆ ಮುಕ್ತಾಯ ಘಟ್ಟಕ್ಕೆ ಬರುವ ಹೊತ್ತಿಗೆ ಮತ್ತೊಮ್ಮೆ ಎಚ್‌ಎಂಎಸ್‌ರ ಸಂದರ್ಶನ ಕೇಳಿಸಿಕೊಳ್ಳಲು ತವಕಪಡುತ್ತೇನೆ. ಅವರ

ಬದುಕಿನ ಏರಿಳಿತಗಳನ್ನು, ಪ್ರಕಾಶಕರಾಗಿ, ಪ್ರಾಧ್ಯಾಪಕರಾಗಿ, ಲೇಖಕರಾಗಿ ತಾವು ಅರಳಿದ ರೀತಿಯನ್ನು ಒಂದೊಂದೇ ಮಾತಿನಲ್ಲಿ ಅವರು ಬಿಡಿಸಿ ಹೇಳುವಾಗ ಹದಿಹರೆಯದ ಅವರ ಮೊಮ್ಮಕ್ಕಳು ಪುಟಪುಟನೆ ಮನೆಯಲ್ಲಿ ಓಡಾಡುತ್ತಿರುತ್ತಾರೆ. ಮಹಡಿ ಹತ್ತುವ ಒಬ್ಬ ಕುಮಾರನನ್ನು ತಡೆದು ಹರಿಶಂಕರ್ ಥಟ್ಟನೆ "ಇದು ಯಾರ ಧ್ವನಿಯೋ?" ಎಂದು ಕೇಳುತ್ತಾರೆ; ಒಂದು ಚಣ ನಿಂತು ಆತ 'ತಾತನದಲ್ಲವಾ?' ಎನ್ನುತ್ತಾನೆ. ಅವನು ಯೋಚನೆ ಮಾಡುವಷ್ಟರಲ್ಲಿ ಹರಿಶಂಕರ್ 'ಅಷ್ಟು ಬೇಗ ಮರೆತು ಬಿಟ್ಟಿಯಾ?' ಎಂದು ಲಘುವಾಗಿ ಮೂದಲಿಸುತ್ತಾರೆ.

ರೇಡಿಯೋ ಸಂದರ್ಶನ ಮುಂದುವರಿಯುತ್ತಲೇ ಇದೆ. ನನ್ನ ಗುರುಗಳು ಕೂರುತ್ತಿದ್ದ ಕೊಠಡಿ ನೋಡಬೇಕು ಎನ್ನುತ್ತೇನೆ. ಏಕೆಂದರೆ ಕಾಲೇಜು ಬಿಟ್ಟ ನಂತರ ನೇರವಾಗಿ ಮನೆಗೆ ಬಂದು ಒಂದು ಕಡೆ ಕುಳಿತು ಗಂಟೆಗಟ್ಟಲೆ ಹಸ್ತಪ್ರತಿ ತಯಾರಿಸುವ ಕಾಯಕದಲ್ಲಿ ಅವರು ತೊಡಗಿಕೊಳ್ಳುತ್ತಿದ್ದರು. ಇಪ್ಪತ್ತೈದು ವರ್ಷಗಳ ಕಾಲಾವಧಿಯಲ್ಲಿ ಹಲಕೆಲವು ಬದಲಾವಣೆಗಳಾಗಿವೆ. ಮೂಲ ರಚನೆಯಲ್ಲಿ ಏನೂ ವ್ಯತ್ಯಾಸಗೊಳಿಸದೆ ಕಿರಿಯ ತಲೆಮಾರಿನವರಿಗೆ ಒಂದೊಂದು ಕೊಠಡಿ ಏರ್ಪಡಿಸುವ ದೃಷ್ಟಿಯಿಂದ ಅಲ್ಲಲ್ಲಿ ಬ್ಯೂರೋಗಳನ್ನಿಟ್ಟು ಮರೆಮಾಡಿದ್ದಾರೆ. ಒಂದು ಕೊಠಡಿಯಲ್ಲಿ ಒಬ್ಬ ತರುಣ ಓದುತ್ತಾ ಓದುತ್ತಾ ಕಣ್ಣು ಜೋಂಪು ಹತ್ತಿದಾಗ ಹಾಗೆ ಹಾಸಿಗೆ ಮೇಲೆ ಉರುಳಿಕೊಂಡಿದ್ದಾನೆ. ಇನ್ನೊಂದು ಕೊಠಡಿಯಲ್ಲಿ ಹೆಣ್ಣು ಮಗುವೊಂದು ತನ್ನ ಗೆಳತಿಯೊಂದಿಗೆ ಟಿ. ವಿ. ನೋಡುತ್ತಿದೆ. ಈ ಗೆಳತಿ ಬೇರಾರೂ ಅಲ್ಲ ಪ್ರೊ॥ ಎಚ್‌ಎಂಎಸ್‌ರವರ ಶುಶ್ರೂಷೆಯಲ್ಲಿ ಪಾತ್ರವಹಿಸಿದ ವೈದ್ಯ, ಡಿ.ವಿ.ಕೆ. ಮೂರ್ತಿಯವರ ಮೊಮ್ಮಗಳು. ಉಳಿದ ಎಳೆಯರು ಹೊರಗೆ ಕಲ್ಲುಬೆಂಚಿನ ಮೇಲೆ ಕುಳಿತು ಸಂಭಾಷಣೆಯಲ್ಲಿ ತೊಡಗಿದ್ದಾರೆ.

ಪ್ರೊ॥ ಎಚ್‌ಎಂಎಸ್‌ರನ್ನು ಅವರ ಮಿತ್ರರೊಬ್ಬರು ಒಂದು ವೃಕ್ಷಕ್ಕೆ ಹೋಲಿಸಿರುವುದು ಅತ್ಯಂತ ಉಚಿತವಾದದ್ದಾಗಿದೆ. ಅವರ ಸಂಸಾರ ವಿಶಾಲವಾಗಿ ಹಬ್ಬಿದೆ. ಅವರ ಶ್ರಮ, ದುಡಿಮೆಯ ಫಲವಾಗಿ ಮನೆಯಲ್ಲಿ ನೆಮ್ಮದಿಯ ವಾತಾವರಣವಿದೆ. ವಿದ್ಯೆ ತಾಂಡವವಾಡುತ್ತಿದೆ. ವಿನಯ ತಾನೇ ತಾನಾಗಿದೆ. ಒಬ್ಬ ವ್ಯಕ್ತಿ ಇದಕ್ಕಿಂತ ಹೆಚ್ಚಿನದೇನನ್ನು ಸಾಧಿಸಬೇಕು?

'ಕವಿಕಾವ್ಯ ಮಾಲೆ' ತನ್ನ ಪ್ರಕಟಣೆಯ ಇಪ್ಪತ್ತೈದು ವರ್ಷಗಳನ್ನು ಪೂರೈಯಿಸಿದ ಸವಿನೆನಪಿಗಾಗಿ ಹೊರತಂದ ಸ್ಮರಣ ಗ್ರಂಥ "ಬೆಳ್ಳಿ ಶಾರದೆ" ಹಾಗೂ ಪ್ರೊ॥ ಎಚ್‌ಎಂಎಸ್‌ರ ಷಷ್ಟ್ಯಬ್ದಿ ಸಂದರ್ಭದ ಸಂಭ್ರಮಾಚರಣೆಯ ಭಾಗವಾಗಿ ಡಾ॥ ಪ್ರಧಾನ್ ಗುರುದತ್ತರ ಸಂಪಾದಕತ್ವದಲ್ಲಿ ಬೆಳಕು ಕಂಡಿರುವ "ಸ್ನೇಹಾಂಜಲಿ"ಯ ಪುಟಗಳನ್ನು ತಿರುವಿ ಹಾಕಬೇಕೆಂದು ಆಸೆಯಾಗುತ್ತದೆ. ಇರುವುದು ಒಂದೊಂದೇ ಪ್ರತಿ; ಅವಲೋಕನ ಮಾಡಿ ಹಿಂದಿರುಗಿಸಿ, ಎಂದು ಹರಿಶಂಕರ್ ನೆನಪಿಸುತ್ತಾರೆ. "ಬೆಳ್ಳಿ ಶಾರದೆ" ಮತ್ತು 'ಸ್ನೇಹಾಂಜಲಿ' (ಹಾ. ಮಾ. ನಾಯಕರು ಇಟ್ಟ ಚಂದದ ಹೆಸರುಗಳು)ಯನ್ನು ಕೈಗೆತ್ತಿಕೊಳ್ಳುವಾಗ ಗಂಧವನ್ನು ಚಿಮುಕಿಸಿದಂಥ ಹಿತವಾದ ಪರಿಮಳ ಹೊರಸೂಸುತ್ತದೆ.

ಒಪ್ಪ, ಓರಣಕ್ಕೆ ಹೆಸರಾದ ನಮ್ಮ ಗುರುಗಳೇ ಹಾಗೆ ಪರಿಮಳವನ್ನು ಚಿಮುಕಿಸಿದ್ದರೂ ಆಶ್ಚರ್ಯವಲ್ಲ. ಕಾಲದ ನಡಿಗೆಗೆ ಕಮರದೆ ನಿರಂತರವಾಗಿ ಸುಗಂಧ ಸೂಸುವ ಸಾಮರಿಯದ ಕೆಲಸವನ್ನು ಅವರು ಮಾಡಿ ಹೋಗಿದ್ದಾರೆ. ಅವರು ಬೆಳಕಿಗೆ ತಂದ ಗ್ರಂಥಗಳು ತಮ್ಮ ನಿರಾಭರಣ ಸೌಂದರ್ಯದಿಂದ ಕಣ್ಮನ ಸೆಳೆಯುತ್ತವೆ. ರಕ್ಷಾಪುಟಕ್ಕೇ ಲಕ್ಷಾಂತರ ರೂಪಾಯಿ ಖರ್ಚು ಮಾಡುವ ವರ್ತಮಾನದ ಆಡಂಬರದಲ್ಲಿ ಕಣ್ವಾಶ್ರಮದ ಶಕುಂತಲೆಯಂತೆ ಶಂಕರನಾರಾಯಣರಾಯರ ಗ್ರಂಥಮಾಲೆಯ ಪುಸ್ತಕಗಳು ಕುಂದದ ಕಾಂತಿಯಿಂದ ಕಂಗೊಳಿಸುತ್ತವೆ.

ವಾರಾನ್ನ ಉಂಡು ಬೆಳೆದು ಕನ್ನಡ ಕವಿಕುಲಕ್ಕೆ ಮೃಷ್ಟಾನ್ನವಿಟ್ಟು 'ತಮ್ಮ ಬದುಕು ನಮಗೆ ಸಂದೇಶವಾಗುವ ಹಾಗೆ ಬಾಳಿ ಮರೆಯಾದ ಪ್ರೊ|| ಎಚ್‌ಎಂಎಸ್ ಕನ್ನಡ ಸಂಸ್ಕೃತಿಯ ವಿಶಿಷ್ಟ ಕುಸುಮ. ಅವರ ನೆನಪು ಎಂದೆಂದೂ ಪರಿಮಳಯುಕ್ತವೂ, ಚೈತನ್ಯದಾಯಕವೂ ಆಗಿದೆ.

ಹೊರಗಿನಿಂದ ಬಂದು ನಮ್ಮನ್ನು ತುಳಿದವರನ್ನು ಮತ್ತು ತುಳಿಯುತ್ತಿರುವವರನ್ನು ಪೂಜಿಸಿ ಪಾಪಿಗಳಾಗಿದ್ದೇವೆ. ಈಗ ಕ್ಲೈಬ್ಯವನ್ನು ದೂರ ಮಾಡಬೇಕಾದ ಕಾಲ. ನಮ್ಮ ಆಲಸ್ಯವೇ ನಮ್ಮ ಮೃತ್ಯು. ಕನ್ನಡಿಗರು ಮೂಲೆ ಮೂಲೆಗಳಲ್ಲಿ ಉಗ್ರ ಚಳುವಳಿಯನ್ನು ಕೈಗೊಳ್ಳಬೇಕು. ಸಾಹಿತ್ಯ, ಸಂಗೀತ, ರಾಜಕಾರಣ, ಉದ್ಯೋಗ, ಸಮಾಜ ಯಾವ ಹೆಸರಿನಲ್ಲಿ ಪರಾಕ್ರಮಣ ಕಂಡುಬಂದರೂ ಕನ್ನಡಿಗರು ಎದುರಿಸಬೇಕು.

—ಅ ನ ಕೃ

ಕನ್ನಡ ಹೋರಾಟಗಾರ ರಹಮಾನ್ ಖಾನ್

ರಂಗಧಾಮಯ್ಯ
ಬಿ. ಎ
ಸಿಎಫ್‌ಟಿಆರ್‌ಐ ಕಾಲೋನಿ
ಮೈಸೂರು-೧೩

೧೯೮೦ರ ದಶಕ ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದ ಘಟ್ಟ. ಕನ್ನಡಿಗರು ತಮ್ಮ ಸ್ವಂತಿಕೆಯ ಉಳಿವಿಗಾಗಿ ಬೀದಿಗಿಳಿದು ಹೋರಾಟ ಮಾಡಬೇಕಾದ ಪ್ರಸಂಗ. ಗೋಕಾಕ್ ವರದಿಯ ಅನುಷ್ಠಾನವನ್ನು ಕುರಿತು—ಸಾಹಿತಿಗಳು, ಕಲಾವಿದರು, ಸಂಘ-ಸಂಸ್ಥೆಗಳೂ ಒಕ್ಕೊರಲಿನಿಂದ ಆಗ್ರಹಿಸಿ ಯಶಸ್ವಿಯಾದ ದಶಕ. ಈ ಸಮಯದಲ್ಲಿಯೆ ಚಳವಳಿಗಾರರ ಗಮನವನ್ನು ಸೆಳೆದು, ಹೋರಾಟದ ಮುಂಚೂಣಿಯಲ್ಲಿ ಎದೆಯೊಡ್ಡಿ, ಮುಸ್ಲಿಂ ಯುವಕನೊಬ್ಬ ಸರ್ಕಾರಕ್ಕೆ ಸವಾಲಾಗಿ ನಿಂತನು. ಆ ಯುವಕನೇ ದಿವಂಗತ ರಹಮಾನ್ ಖಾನ್. ಖಾನ್ ಕನ್ನಡಪ್ರೇಮಿಯಾಗಿ, ಕನ್ನಡ ಸೇನಾನಿಯಾಗಿ ಗೋಕಾಕ್ ಚಳವಳಿಯಲ್ಲಿ ಕನ್ನಡಕ್ಕಾಗಿ ತನ್ನ ಪ್ರಾಣವನ್ನೇ ಪಣವಾಗಿಟ್ಟ ಧೀರಭಟ.

ಬೆಂಗಳೂರು-ಮೈಸೂರು ಹೆದ್ದಾರಿಯ ನಡುವೆ ಇರುವ ಚೆನ್ನಪಟ್ಟಣ ಒಂದು ಪ್ರಮುಖವಾದ ತಾಲ್ಲೂಕು ಕೇಂದ್ರ. ಕೋಡಂಬಳ್ಳಿ, ಈ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಒಂದು ಪುಟ್ಟ ಗ್ರಾಮ. ಈ ಗ್ರಾಮದ ನಿವಾಸಿಗಳಾದ ಅಬ್ದುಲ್ ಗಫಾರ್ ಖಾನ್ ಮತ್ತು ಬೀಜಾನ್‌ಬೀ ದಂಪತಿಗಳಿಗೆ ಮೂರನೆಯ ಮಗನಾಗಿ ಖಾನ್ ೨೧-೫-೧೯೫೪ರಂದು ಜನಿಸಿದರು. ಮುಸ್ಲಿಂ ಕುಟುಂಬದಿಂದ ಬಂದರೂ, ಖಾನರ ವಿದ್ಯಾಭ್ಯಾಸವೆಲ್ಲ ಕನ್ನಡದಲ್ಲಿಯೇ ಆಯಿತು. ತಮ್ಮ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣಗಳನ್ನು ಕೋಡಂಬಳ್ಳಿ ಮತ್ತು ಚೆನ್ನಪಟ್ಟಣಗಳಲ್ಲಿ ಮುಗಿಸಿದರು. ಈ ಸಮಯದಲ್ಲಿಯೇ ಖಾನ್ ಶಾಲೆಯ ಕನ್ನಡ ಪಂಡಿತರಿಂದ ಪ್ರಭಾವಿತರಾದರು. ಕನ್ನಡದ ಮೇಲಿನ ಆಸಕ್ತಿಯನ್ನು ಬೆಳೆಸಿಕೊಂಡರು. ತಮ್ಮ ವಿದ್ಯಾರ್ಥಿದೆಸೆಯಲ್ಲಿಯೇ ಕೋಡಂಬಳ್ಳಿಯಲ್ಲಿ ಕನ್ನಡ ಸಂಘವೊಂದನ್ನು ಕಟ್ಟಿದರು. ಪ್ರಗತಿಪರ ಹೋರಾಟಗಳ ಕನಸನ್ನು ಕಂಡರು. ಸಾಮಾಜಿಕ ಸೇವೆಯ ತುಡಿತ ಚಿಕ್ಕಂದಿನಲ್ಲಿಯೇ ಮೊಳೆಯತೊಡಗಿತು. ಖಾನ್ ತನ್ನೂರಿನ ರೈತರ ಸಮಸ್ಯೆಗಳಿಗೆ ಸ್ಪಂದಿಸತೊಡಗಿದರು. ಹಿಂದೂಗಳು ನಡೆಸುವ ಸಭೆಸಮಾರಂಭಗಳಲ್ಲಿ ಪಾಲ್ಗೊಂಡರು. ಕೆರೆಯ ಕೋಡಿಯನ್ನು ಎತ್ತರಿಸುವ ಸಲುವಾಗಿ, ತನ್ನೂರಿನ ರೈತರು ಆಲೋಚಿಸುತ್ತಿದ್ದಾಗ; ಅವರ ಮುಂದಾಳಾಗಿ ನಿಂತರು. ಹೀಗೆ ಖಾನ್ ಹಳ್ಳಿಯ ಜನರ ಕಷ್ಟ-ಸುಖಗಳಲ್ಲಿ ಪಾಲ್ಗೊಳ್ಳತೊಡಗಿದರು.

ಖಾನರ ಬದುಕಿನ ದಿಕ್ಕನ್ನೇ ಬದಲಿಸುವಂತಹ ಘಟನೆಯೊಂದು ಇವರ ಜೀವನದಲ್ಲಿ

ನಡೆದುಹೋಯಿತು. ಖಾನರು ಸರ್ವ ಜನಾಂಗದವರನ್ನು ಒಂದೇ ದೃಷ್ಟಿಯಿಂದ ನೋಡುತ್ತಿದ್ದರು. ಆ ಊರಿನ ಹರಿಜನರೂ ಕೂಡ ಈ ದೃಷ್ಟಿಯಿಂದ ಹೊರತಾಗಿರಲಿಲ್ಲ. ಹರಿಜನರು ಹೋಟೆಲನ್ನು ಪ್ರವೇಶಿಸುವಂತೆ ಅವರನ್ನು ಖಾನ್ ಸಂಘಟಿಸಿದರು. ಇದರಿಂದಾಗಿ ಖಾನ್ ಇಡೀ ಊರಿನ ಆಕ್ರೋಶಕ್ಕೆ ಬಲಿಯಾಗಬೇಕಾಯಿತು. ಕೆಲವು ಕಿಡಿಗೇಡಿಗಳು ಇವರಿಗೆ ಪ್ರಾಣ ಬೆದರಿಕೆಯನ್ನೂ ಒಡ್ಡಿದರು. ಆಗ ಅನಿವಾರ್ಯವಾಗಿ ಖಾನ್ ಕುಟುಂಬ ಆ ಊರನ್ನೇ ತ್ಯಜಿಸಬೇಕಾಯಿತು.

ಹುಟ್ಟೂರನ್ನು ಬಿಟ್ಟ ಖಾನ್ ಕುಟುಂಬ ಬೆಂಗಳೂರಿನ ಮತ್ತೀಕೆರೆಯಲ್ಲಿ ನೆಲೆ ನಿಂತಿತು. ಅಲ್ಲಿಯೂ ಖಾನರ ಕನ್ನಡದ ತುಡಿತ ಜಾಗೃತವಾಗಿ ಸಕ್ರಿಯವಾಯಿತು. ಬೆಂಗಳೂರಿನಲ್ಲಿ ಕನ್ನಡಕ್ಕೊಂದು ಸ್ಥಾನವನ್ನು ಕಲ್ಪಿಸಿಕೊಡಲು ಹೆಣಗಿದರು. ಸ್ನೇಹಿತರೊಡಗೂಡಿ ೧೯೭೯ರಲ್ಲಿ 'ಕನ್ನಡ ಸಂಘರ್ಷ ಸಮಿತಿ'ಯನ್ನು ಸ್ಥಾಪಿಸಿದರು. ಇದರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ರಚನಾತ್ಮಕ ಚಟುವಟಿಕೆಗಳನ್ನು ರೂಪಿಸಿಕೊಂಡು ಧರಣಿ, ಸತ್ಯಾಗ್ರಹಗಳ ಹೋರಾಟದ ಗುರಿಯ ನೋಟವನ್ನಿರಿಸಿಕೊಂಡರು. ಆದರೆ ಸಮಿತಿಯ ಚಟುವಟಿಕೆಗಳು ಕೆಲವೇ ದಿನಗಳಲ್ಲಿ ಸ್ಥಗಿತಗೊಂಡಾಗ ಖಾನರು ನಿರಾಶರಾದರು. ಮತ್ತೆ 'ಕನ್ನಡ ಪಕ್ಷ'ದ ಬಾನಂಗಳಕ್ಕೆ ಹಾರಿದರು. ಕನ್ನಡ ಸಂಘರ್ಷ ಸಮಿತಿಯ ಪುನರುತ್ಥಾನಕ್ಕಾಗಿಯೂ ಶ್ರಮಿಸತೊಡಗಿದರು. ಖಾನರ ಇಂತಹ ದೃಢ ನಿರ್ಧಾರದ ಅಂತಃಸತ್ವದಿಂದ, ೧೯೮೨ರಲ್ಲಿ ಸಂಘರ್ಷ ಸಮಿತಿಯು ಪುನಃ ತಲೆ ಎತ್ತಿ ನಿಂತು ತನ್ನ ಚಟುವಟಿಕೆಗಳನ್ನು ಪುನರಾರಂಭಿಸಿತು. ಖಾನ್ ಅವರು ಈ ಸಂಘಟನೆಯ ಪ್ರಧಾನ ಕಾರ್ಯದರ್ಶಿಯಾದರು. ಅನಂತರದ ದಿನಗಳಲ್ಲಿ ಅದರ ಕಾರ್ಯಾಧ್ಯಕ್ಷರಾಗಿ ಕನ್ನಡಪರ ಚಟುವಟಿಕೆಗಳಿಗೆ ಜೀವ ತುಂಬಿದರು. ಕನ್ನಡ ಸಂಘರ್ಷ ಸಮಿತಿಯು, ೧೯೮೦ರ ದಶಕದಲ್ಲಿ ಹೆಚ್ಚು ಜನಪ್ರಿಯವಾಗಿ ಹೋರಾಟದ ಮುಂಚೂಣಿಯಲ್ಲಿ ನಿಂತು ಕನ್ನಡ ನಿಷ್ಠೆಯನ್ನು ಪ್ರದರ್ಶಿಸಿತು.

ಗೋಕಾಕ್ ವರದಿಯ ಅನುಷ್ಠಾನವನ್ನು ಕುರಿತ ಚಳವಳಿಯ ಸಂದರ್ಭದಲ್ಲಿ ಖಾನರಿಗೆ ಸುಮಾರು ೨೬ ವರ್ಷಗಳು. ಮದುವೆಯಾದ ಹೊಸದು. ಆದರೂ, ಕನ್ನಡದ ಅತೀವ ಕಳಕಳಿಯನ್ನು ತುಂಬಿಕೊಂಡ ಮನಸ್ಸು—ಚಳವಳಿ ಮತ್ತು ಹೋರಾಟಗಳಲ್ಲಿ ಬೆರೆತು ಹೋಯಿತು. ಸಾಂಸಾರಿಕ ತಾಪತ್ರಯಗಳು ಅದಮ್ಯ ಉತ್ಸಾಹದ ಕನ್ನಡ ಕಾರ್ಯಕರ್ತ ತರುಣನ ಮುಂದೆ ಗೌಣವಾದುವು. ಹಾಗೆಂದು ಖಾನ್ ತನ್ನ ಕುಟುಂಬ ನಿರ್ವಹಣೆಯ ಜವಾಬ್ದಾರಿಯನ್ನು ಮರೆತವರಲ್ಲ. ಅವರು ಖಾಸಗಿ ಇಂಗ್ಲೀಷ್ ಮಾಧ್ಯಮ ಶಾಲೆಯೊಂದರಲ್ಲಿ ಕನ್ನಡ ಶಿಕ್ಷಕರಾಗಿ ದುಡಿದರು. ಆ ಸಂಸ್ಥೆಯವರು ನೀಡುತ್ತಿದ್ದ ಸಂಬಳ ಅರೆಗಂಜಿಗೂ ಸಾಲುತ್ತಿರಲಿಲ್ಲ. ಬದುಕಿಗೊಂದು ಆರ್ಥಿಕ ನೆಲೆ ಇಲ್ಲದಿದ್ದರೂ, ಖಾನ್ ಅವರು ಅದಮ್ಯ ಉತ್ಸಾಹದಿಂದ ಗೋಕಾಕ್ ಚಳವಳಿಯಲ್ಲಿ ಧುಮುಕಿದರು. ಸರ್ಕಾರದ ವಿರುದ್ಧ ಗುಡುಗಿದರು.

ನವೆಂಬರ್ ೧, ೧೯೮೨ರಂದು, ಕನ್ನಡ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಹಲ

ವಾರು ಸಂಘಟನೆಗಳು ಸೇರಿ ಗೋಕಾಕ್ ವರದಿಯ ಅನುಷ್ಠಾನವನ್ನು ಆಗ್ರಹಿಸಿ ಮೌನ ಮೆರವಣಿಗೆಯೊಂದನ್ನು ವ್ಯವಸ್ಥೆ ಗೊಳಿಸಿದುವು. ಮೈಸೂರು ಬ್ಯಾಂಕ್ ವೃತ್ತ ದಿಂದ ವಿಧಾನಸೌಧದ ಮೂಲೆಯಲ್ಲಿರುವ ಗೋಪಾಲಗೌಡ ವೃತ್ತದವರೆಗೆ ಸತ್ಯಾಗ್ರಹಿ ಗಳು ಮೆರವಣಿಗೆಯಲ್ಲಿ ಸಾಗಿದರು. ಅದೇ ದಿನ ಸಂಜೆ, ಆಗಿನ ರಾಜ್ಯದ ಮುಖ್ಯಮಂತ್ರಿ ಗಳಾಗಿದ್ದ ಗುಂಡೂರಾಯರು ರವೀಂದ್ರ ಕಲಾಕ್ಷೇತ್ರದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಗಳನ್ನು ಪ್ರದಾನ ಮಾಡುವ ಕಾರ್ಯಕ್ರಮ ದಲ್ಲಿ ಪಾಲ್ಗೊಂಡಿದ್ದರು. ನ್ಯಾಯಾಲಯ ದಲ್ಲಿದ್ದ ಗೋಕಾಕ್ ವರದಿಯನ್ನು ಮುಕ್ತ ಗೊಳಿಸುವ ಸಲುವಾಗಿ, ರಹಮಾನ್ ಮತ್ತು ಸಂಗಡಿಗರು ಕಲಾಕ್ಷೇತ್ರದ ಹೊರಗಡೆಯಲ್ಲಿ ನಿಂತು ಉಗ್ರ ಘೋಷಣೆಗಳನ್ನು ಕೂಗಿದರು. ಆವೇಶದ ಖಾನ್ ಪೋಲಿಸರ ಬಿಗಿ ಭದ್ರತೆ ಯನ್ನು ಬೇಧಿಸಿ ಒಳನುಗ್ಗಿದರು. ಅಲ್ಲಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ದರು. ಖಾನರನ್ನು ಸುತ್ತುವರಿದ ಪೋಲಿಸರು ಅವರನ್ನು ಚೆನ್ನಾಗಿ ಥಳಿಸಿ, ಮುಂದಿನ ನಾಲ್ಕೈದು ದಿನಗಳವರೆಗೆ ಸೆರೆಮನೆಯಲ್ಲಿ ಟ್ಟರು.

ಗೋಕಾಕ್ ವರದಿಯನ್ನು ಅನುಷ್ಠಾನ ಗೊಳಿಸುವಂತೆ ಸರ್ಕಾರವನ್ನು ಆಗ್ರಹಿಸಿ, ಚಳವಳಿಗಾರರು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ರೂಪಿಸಿದಾಗ, ಮುಂದಾ ಳಾಗಿ ಅದರಲ್ಲಿ ಭಾಗಿಯಾದರು. ಅವರೊಬ್ಬ ಆದರ್ಶ ಪ್ರಾಮಾಣಿಕ ಹೋರಾಟಗಾರ. ಅವರು ನಿರಶನ ಸಮಯದಲ್ಲಿ ಒಂದು ತೊಟ್ಟು ನೀರನ್ನೂ ಸಹ ಸೇವಿಸುತ್ತಿರಲಿಲ್ಲ. ನಿರಶನ ಸತ್ಯಾಗ್ರಹ ಮೂರನೆಯ ದಿನಕ್ಕೆ ಕಾಲಿಟ್ಟಾಗ ಖಾನ್ ಬಹಳವಾಗಿ ನಿಶ್ಯಕ್ತ ರಾಗಿದ್ದರು. ಅವರ ಕಿವಿಯಲ್ಲಿ ರಕ್ತಸ್ರಾವ ವುಂಟಾಗತೊಡಗಿತು. ಆದರೂ ಅವರು ಸತ್ಯಾಗ್ರಹದಿಂದ ವಿಮುಖರಾಗಲು ಬಯಸ ಲಿಲ್ಲ. ಚಿಂತಾಜನಕ ಸ್ಥಿತಿಯಲ್ಲಿದ್ದ ಖಾನರ ಸ್ಥಿತಿ ಮತ್ತು ಗೋಕಾಕ್ ವರದಿಯ ಅನುಷ್ಠಾನ, ವಿಧಾನ ಸಭೆಯಲ್ಲಿ ಪ್ರಧಾನ ವಿಷಯವಾಗಿ ಚರ್ಚಿತವಾಯಿತು. ಮುಖ್ಯ ಮಂತ್ರಿ ಗುಂಡೂರಾಯರು ಗೋಕಾಕ್ ವರದಿಯ ಜಾರಿಯನ್ನು ಕುರಿತು ಭರವಸೆ ಯನ್ನು ನೀಡಿದರು. ಡಿ. ದೇವರಾಜ ಅರಸ್, ಡಾ. ಸಿದ್ದಯ್ಯ ಪುರಾಣಿಕ ಮುಂತಾದ ಹಿರಿಯರು ಖಾನರಿದ್ದಲ್ಲಿಗೆ ಧಾವಿಸಿ, ಹಣ್ಣಿನ ರಸವನ್ನು ನೀಡಿ ಉಪವಾಸ ಸತ್ಯಾಗ್ರಹಕ್ಕೆ ಮಂಗಳ ಹಾಡಿದರು. ಸತ್ಯಾಗ್ರಹಿಗಳಿಗೆ ತಮ್ಮ ಬೆಂಬಲವನ್ನೂ ಸೂಚಿಸಿದರು.

ಗೋಕಾಕ್ ವರದಿಯ ಜಾರಿಯನ್ನು ಕುರಿತು, ಸರ್ಕಾರ ನಿಧಾನಗತಿಯನ್ನು ಅನುಸರಿಸುತ್ತಿದ್ದಾಗ, ಖಾನರು ಕ್ರುದ್ಧ ರಾದರು. ಸರ್ಕಾರದ ನೀತಿಯನ್ನು ಪ್ರತಿ ಭಟಿಸುವ ಸಲುವಾಗಿ ಮಾರ್ಚ್ ೩೧, ೧೯೮೩ ರಂದು 'ಕನ್ನಡ ಸಂರಕ್ಷಣಾ ಸಮಿತಿ' ಎಂಬ ಬಹುದೊಡ್ಡ ಮೆರವಣಿಗೆಯನ್ನು ಮೈಸೂರು ಬ್ಯಾಂಕ್ ವೃತ್ತದಿಂದ ವಿಧಾನಸೌಧದವರೆಗೆ ವ್ಯವಸ್ಥೆಗೊಳಿಸ ಲಾಯಿತು. ಗೋಪಾಲಗೌಡ ವೃತ್ತದ ಬಳಿಯಲ್ಲಿದ್ದ ಬಿಗಿಯಾದ ಪೋಲೀಸ್ ಪಹರೆಯನ್ನು ದಾಟಿ ವಿಧಾನಸೌಧವನ್ನು ತಲುಪುವುದು ಚಳವಳಿಗಾರರಿಗೆ ಸುಲಭ ವಾಗಿರಲಿಲ್ಲ. ಆಗ ರಹಮಾನ್ ಖಾನ್ ತಮ್ಮ ಕೆಲವು ಸ್ನೇಹಿತರೊಂದಿಗೆ ಪೋಲೀಸ್ ಭದ್ರತೆ ಯನ್ನು ಸೀಳಿಕೊಂಡು ವಿಧಾನಸೌಧದ

ದ್ವಾರದಲ್ಲಿ ನಿಂತರು. ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಗೋಕಾಕ್ ವರದಿಯ ವಿರುದ್ಧ ಹೇಳಿಕೆ ನೀಡುತ್ತಿದ್ದ ತನ್ನ ಮತಬಾಂಧವರಾದ ಮುಸಲ್ಮಾನ ರಾಜಕೀಯ ಧುರೀಣರನ್ನು ತರಾಟೆಗೆ ತೆಗೆದುಕೊಂಡರು. ಇಂತಹ ಸಮಯಗಳಲ್ಲಿ, ಖಾನರ ಕನ್ನಡಾಭಿಮಾನ ಉಗ್ರರೂಪ ತಾಳಿ, ಮಾತಾಗಿ ಹೊರಬಂದು, ಕನ್ನಡ ವಿರೋಧಿಗಳನ್ನು ಖಂಡಿಸುತ್ತಿದ್ದರೇ ಹೊರತು, ಅವರ ಬಗ್ಗೆ ಯಾವುದೇ ದ್ವೇಷ ಭಾವವನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಖಾನರನ್ನು ಹತ್ತಿರದಿಂದ ಬಲ್ಲ ಅವರ ಮಿತ್ರರ ಅಭಿಪ್ರಾಯವೂ ಇದೇ ಆಗಿತ್ತು.

ಮುಂದಿನ ದಿನಗಳಲ್ಲಿ ಗೋಕಾಕ್ ಚಳವಳಿ ಉಗ್ರರೂಪ ತಳೆಯಿತು. ಏಪ್ರಿಲ್ ೧೭ ರಂದು ಡಾ॥ ರಾಜಕುಮಾರ್ ಅವರು ಚಳವಳಿಯ ನೇತೃತ್ವವನ್ನು ವಹಿಸಿದರು. ಚಲನಚಿತ್ರರಂಗದ ಕಲಾವಿದರು, ಸಾಹಿತಿಗಳು ಸಂಘ–ಸಂಸ್ಥೆಗಳು, ಕನ್ನಡ ಕಾರ್ಯಕರ್ತರು ಒಂದಾಗಿ ಚಳವಳಿಯನ್ನು ಸಂಘಟಿಸಿದರು. ಅಲ್ಲಲ್ಲಿ ಹಿಂಸಾಚಾರಗಳು ನಡೆದುವು. ಕೊನೆಗೆ ಗುಂಡೂರಾಯರ ಸರ್ಕಾರ ಚಳವಳಿಗಾರರಿಗೆ ಮಣಿಯಿತು. ಗೋಕಾಕ್ ವರದಿಯ ಪರಿಷ್ಕೃತ ವರದಿಯನ್ನು ಪ್ರಕಟಿಸಿತು. ಈ ವರದಿಯ ಸ್ವರೂಪವನ್ನು ಚರ್ಚಿಸಲು ಸೇರಿದ್ದ ಬಹಳಷ್ಟು ಕನ್ನಡ ಕಾರ್ಯಕರ್ತರು ವರದಿಯ ಪರಿಷ್ಕೃತ ರೂಪದ ಪರವಾಗಿ ಸಮ್ಮತಿಸಿದರು. ಆಗ ಖಾನರ ಸಹನೆ ಜಾರಿತು. ಅವರು ಕೋಪದಿಂದ ಗುಡುಗಿದರು. ಗೋಕಾಕ್ ವರದಿಯ ನೈಜರೂಪದ ಅನುಷ್ಠಾನಕ್ಕೆ ಆಗ್ರಹಿಸಿದರು. 'ಇದಕ್ಕಾಗಿ ನನ್ನ ಕೊನೆಯ ಉಸಿರಿರುವವರೆಗೂ ಹೋರಾಡುತ್ತೇನೆ. ನನ್ನ ದೇಹದ ಹನಿಹನಿ ರಕ್ತವನ್ನು ಕನ್ನಡಕ್ಕಾಗಿ ಅರ್ಪಿಸುತ್ತೇನೆ" ಎಂದು ಆವೇಶಭರಿತರಾಗಿ ನುಡಿದರು. ಖಾನರ ಮಾತುಗಳಿಂದ ಸ್ಫೂರ್ತಿಗೊಂಡ ಅನೇಕ ಕಾರ್ಯಕರ್ತರು ಖಾನರನ್ನು ಬೆಂಬಲಿಸಿದರು.

ಖಾನರು, ಇಂಗ್ಲಿಷ್ ಮಾಧ್ಯಮದ ವ್ಯಾಮೋಹವನ್ನು ಕೈಬಿಡುವಂತೆ ಪೋಷಕರಿಗೆ ಕಿವಿಮಾತು ಹೇಳಿದರು. 'ಕಂದನ ಕಳುಹಿಸಿ ಕನ್ನಡ ಶಾಲೆಗೆ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡು ಬೀದಿಗಿಳಿದರು. ತಮ್ಮ ಮನೆಯ ಮಕ್ಕಳನ್ನು ಕನ್ನಡ ಶಾಲೆಗೆ ಸೇರಿಸಿದರು. ಖಾನರ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗೆ ಸೇರಿಸಬೇಕೆಂಬ ಮನೆಯವರ ಅಭಿಪ್ರಾಯ ಬಲವಾದಾಗ, ಅದನ್ನು ಖಂಡತುಂಡವಾಗಿ ಅಲ್ಲಗಳೆದರು, ಆ ಮಕ್ಕಳನ್ನು ಕನ್ನಡ ಶಾಲೆಗೆ ಸೇರಿಸದೆ, ಮೀರಿ ಆಂಗ್ಲ ಮಾಧ್ಯಮ ಶಾಲೆಗೆ ಸೇರಿಸಿದರೆ ಆ ಮಕ್ಕಳು ನನ್ನವಲ್ಲ ಎಂದು ಗುಡುಗಿದರು! ಯಶವಂತಪುರದಲ್ಲಿ 'ಸಂಗಮ ವಿದ್ಯಾಶಾಲೆ' ಎಂಬ ಕನ್ನಡ ಮಾಧ್ಯಮ ಶಾಲೆಯನ್ನು ತೆರೆದು, ಬಹು ಕಷ್ಟದಿಂದ ಕೆಲವು ವರ್ಷಗಳವರೆಗೆ ನಡೆಸಿದರು.

ನಾಡು-ನುಡಿಯ ಕಳಕಳಿಯನ್ನು ಬಿಂಬಿಸುವ ಕನ್ನಡ ಪರವಾದ ರಾಜಕೀಯ ಪಕ್ಷದ ಅಸ್ತಿತ್ವವನ್ನು ಖಾನರು ಬಯಸುತ್ತಿದ್ದರು. 'ಕನ್ನಡ ದೇಶ' ಪಕ್ಷದಲ್ಲಿ ವಿಶ್ವಾಸವನ್ನಿರಿಸಿ, ಅದರ ಬೆಂಗಳೂರು ನಗರದ ಸಂಚಾಲಕರಾಗಿ ಕಾರ್ಯ ನಿರ್ವಹಿಸಿದರು.

ಅಲ್ಪ ಸಂಖ್ಯಾತರಾದ ಮುಸ್ಲಿಮರು ಮತ್ತು ಕ್ರೈಸ್ತರು ಕನ್ನಡ ಪರವಾದ ನೆಲೆಯಲ್ಲಿ ತಮ್ಮ ಅಸ್ತಿತ್ವವನ್ನು ಕಂಡು ಕೊಳ್ಳಬೇಕೆಂದು ಖಾನ್ ಕರೆ ಇತ್ತರು. ಕ್ರೈಸ್ತ ಮತಕ್ಕೆ ಮತಾಂತರ ಹೊಂದಿದ ಕನ್ನಡಿಗರು, ತಮ್ಮ ಸಂಸ್ಕೃತಿಯನ್ನು ಗೌರವಿಸಬೇಕೆಂದು ತಿಳಿಸಿದರು. ಕರ್ನಾಟಕ ರಾಜ್ಯ ಕ್ಯಾಥೊಲಿಕ್ ಕನ್ನಡ ಸಂಘವು ಯಾವುದೇ ಚಟುವಟಿಕೆಯಲ್ಲಿ ಪಾಲ್ಗೊಳ್ಳ ಬಾರದೆಂದು - ಬೆಂಗಳೂರು ಕೇಂದ್ರದ ಧರ್ಮಾಧಿಕಾರಿಗಳು ಆಜ್ಞೆ ವಿಧಿಸಿದಾಗ, ಖಾನ್ ಅವರು ಕನ್ನಡ ಕ್ರೈಸ್ತರ ನೆರವಿಗೆ ಧಾವಿಸಿದರು. ಕ್ರೈಸ್ತರ ಕನ್ನಡ ಕಾರ್ಯ ಕರ್ತರ ವೇದಿಕೆ'ಯನ್ನು ಸ್ಥಾಪಿಸಿ ಕ್ರೈಸ್ತ ಧರ್ಮೀಯರನ್ನು ಸಂಘಟಿಸಿದರು. ಅವರ ಹಿತಾಸಕ್ತಿಗಳನ್ನು ರಕ್ಷಿಸಿದರು.

ಮುಸ್ಲಿಂ ಬಾಂಧವರನ್ನು ತಮ್ಮ ರಾಜಕೀಯಲಾಭಕ್ಕಾಗಿ ಕನ್ನಡದ ಮೇಲೆ ಎತ್ತಿಕಟ್ಟಿ ಹೇಳಿಕೆ ನೀಡುತ್ತಿದ್ದ ವ್ಯಕ್ತಿ ಗಳನ್ನು ಖಾನ್ ತರಾಟೆಗೆ ತೆಗೆದುಕೊಂಡರು. ಇದರಿಂದಾಗಿ ರಹಮಾನ್ ಖಾನ್ ಸ್ವಜನರ ಆಗ್ರಹಕ್ಕೆ ಒಳಗಾಗಬೇಕಾಯಿತು. ಆದರೂ ಖಾನ್ ಧೃತಿಗೆಡಲಿಲ್ಲ. ನಾಡು, ನುಡಿಯ ಪ್ರೇಮವನ್ನು ತಮ್ಮ ಕುಲಬಾಂಧವರಲ್ಲಿ ಬಿತ್ತಲು ಶ್ರಮಿಸಿದರು. 'ಮಹಮದೀಯರ ಕನ್ನಡ ಸಂಘ'ವನ್ನು ಅಸ್ತಿತ್ವಕ್ಕೆ ತಂದರು. ಮುಸ್ಲಿಮರೂ ಕನ್ನಡದ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ತಮ್ಮ ಕುಲ ಬಾಂಧವರೊಂದಿಗೂ ಕನ್ನಡದಲ್ಲಿಯೇ ವ್ಯವಹರಿಸುವ ಆದರ್ಶವನ್ನು ಪಾಲಿಸಿ ಕೊಂಡು ಬಂದರು.

ಗೋಕಾಕ್ ವರದಿಯನ್ನು ಜಾರಿ ಗೊಳಿಸುವಂತೆ ಒತ್ತಾಯಿಸಿ, ಖಾನ್ ತನ್ನ ಕೆಲವು ಸ್ನೇಹಿತರೊಂದಿಗೆ ರಾಜಭವನಕ್ಕೆ ತೆರಳಿ, ರಾಜ್ಯಪಾಲರಲ್ಲಿ ಮನವಿ ಪತ್ರ ವೊಂದನ್ನು ಸಲ್ಲಿಸಿದರು. ಆ ಪತ್ರಕ್ಕೆ, ತಮ್ಮ ರಕ್ತದಿಂದಲೇ ಸಹಿ ಮಾಡಿ ಕನ್ನಡದ ಉಗ್ರ ನಿಷ್ಠೆಯನ್ನು ತೋರಿದರು.

ಕರ್ನಾಟಕ ಲೋಕ ಸೇವಾ ಆಯೋಗದ ಪರೀಕ್ಷೆಗಳು ಕನ್ನಡದಲ್ಲಿಯೆ ನಡೆಯ ಬೇಕೆಂದು ಆಗ್ರಹಿಸಿದ ಖಾನ್ ಅವರು ಡಾ|| ದೇಜಗೌ, ಡಾ|| ಸಿದ್ದಯ್ಯಪುರಾಣಿಕ ಅವರೊಂದಿಗೆ ಸತ್ಯಾಗ್ರಹ ಪ್ರಾರಂಭಿಸಿದರು. ಆಗ ಪುರಾಣಿಕರು ಲೋಕ ಸೇವಾ ಆಯೋಗದ ಅಧಿಕಾರಿಗಳೊಂದಿಗೆ ಇಂಗ್ಲಿಷಿ ನಲ್ಲಿ ಮಾತನಾಡುತ್ತಿದ್ದಾಗ, ನಾವು ಸತ್ಯಾಗ್ರಹ ಮಾಡುತ್ತಿರುವುದು ಕನ್ನಡ ಕ್ಕಾಗಿ! ಆದ್ದರಿಂದ ಕನ್ನಡದಲ್ಲಿಯೇ ಮಾತ ನಾಡಬೇಕೆಂದು ಒತ್ತಾಯಿಸಿ, ಪುರಾಣಿಕರಿ ಗೊಂದು ಚೀಟಿಯನ್ನು ರವಾನಿಸಿದ್ದರು!

ಖಾನ್ ಕನ್ನಡ ಸಾಹಿತ್ಯ ಪ್ರಿಯರಾಗಿ ಕುವೆಂಪು ಅವರ ಶ್ರೀ ರಾಮಾಯಣದರ್ಶನ ವನ್ನು ಅದ್ಭುತವಾಗಿ ವಾಚಿಸುತ್ತಿದ್ದರು. ಶ್ರೀರಾಮಪುರದ ಮ. ರಾಮಮೂರ್ತಿ ಕನ್ನಡ ಬಳಗದಲ್ಲಿ ಅವರು ಈ ಕೃತಿಯನ್ನು ಹಲವು ತಿಂಗಳುಗಳ ಕಾಲ ಶ್ರದ್ಧಾಭಕ್ತಿ ಗಳಿಂದ ವಾಚಿಸಿದರು. ಬೆಂಗಳೂರಿನ ಶ್ರೀರಾಮಪುರದ ಹರಿಶ್ಚಂದ್ರಘಾಟ್ ರಸ್ತೆಗೆ 'ಮಹಾಕವಿ ಕುವೆಂಪು ರಸ್ತೆ' ಎಂದು ಹೆಸರಿಡಲು ಖಾನ್ ಅವರೇ ಕಾರಣ ರಾಗಿದ್ದರು.

ಜಾತ್ಯತೀತ ವ್ಯಕ್ತಿತ್ವದ ರಹಮಾನ್ ಖಾನರಿಗೆ ಅನ್ಯಮತದ ಗೆಳೆಯರೇ ಹೆಚ್ಚಾಗಿ ದ್ದರು. ಅವರೆಂದೂ ತಮ್ಮ ಮತೀಯ ಆಚರಣೆಗಳಿಗೆ ಅಂಟಿಕೊಂಡಿರಲಿಲ್ಲ. ಇದ

ರಿಂದಾಗಿಯೇ ಸಂಪ್ರದಾಯವಾದಿ ಮುಸ್ಲಿಮರ ಟೀಕೆಯನ್ನು ಖಾನ್ ಎದುರಿಸಬೇಕಾಯಿತು. 'ಪ್ರಗತಿಪರ ಮುಸಲ್ಮಾನರ ವೇದಿಕೆ'ಯ ಕರ್ನಾಟಕ ರಾಜ್ಯಘಟಕದ ಸಂಚಾಲಕರಾಗಿಯೂ ಖಾನ್ ಅವರು ಕೆಲಸ ಮಾಡಿದರು.

ಪ್ರಗತಿಪರ ಆಲೋಚನೆಯ ಖಾನರ ಪ್ರವೇಶದಿಂದ, ಕನ್ನಡ ಚಳವಳಿಗೊಂದು ಹೊಸ ಹುರುಪು ಬಂದಿತ್ತು. ಜಿ. ಕೃಷ್ಣಪ್ಪನವರು ಹೇಳುವಂತೆ—"ಕನ್ನಡ ಸೇವೆಯಲ್ಲಿ ವೈರಿಯುತ್ತಿದ್ದ ಖಾನ್, ಕನ್ನಡದ ಹುಚ್ಚರಾಗಿದ್ದರು. ನಿಸ್ವಾರ್ಥ ಹೋರಾಟಗಾರರಾಗಿದ್ದರು."

ರಹಮಾನ್‌ಖಾನರು ತಮ್ಮ ಪ್ರಾಣವನ್ನೇ ಕನ್ನಡಕ್ಕಾಗಿ ಮುಡುಪಿಟ್ಟಿದ್ದರು. ಕನ್ನಡಕ್ಕಾಗಿ ಹೋರಾಡಿ, ಕೂಗಾಡಿ ತಮ್ಮ ಧ್ವನಿಪೆಟ್ಟಿಗೆಯನ್ನೇ ಕಳೆದುಕೊಂಡರು. ಸರ್ಕಾರಿ ನೌಕರನಾಗಿದ್ದು, ಕನ್ನಡದ ಕೆಲಸಕ್ಕಾಗಿ ತಿಂಗಳುಗಟ್ಟಲೆ ಕಛೇರಿ ಕೆಲಸಕ್ಕೆ ಗೈರುಹಾಜರಾದರು. ತಮ್ಮ ಮೇಲಧಿಕಾರಿಗಳ ಆಕ್ಷೇಪಣೆಗೆ ಗುರಿಯಾದರು. ಕನ್ನಡ ಕೆಲಸದ ಮುಂದೆ ಈ ಸರ್ಕಾರಿ ದಾಸ್ಯ ಕ್ಷುಲ್ಲಕವೆಂದು ಭಾವಿಸಿದರು. ತಮ್ಮ ಕಛೇರಿಯಲ್ಲಿ ಕನ್ನಡ ಸಂಘಟನೆಯೊಂದನ್ನು ಅಸ್ತಿತ್ವಕ್ಕೆ ತಂದರು. ಸಹೋದ್ಯೋಗಿಗಳಲ್ಲಿ ಪ್ರಗತಿಪರ ಕನ್ನಡ ವಿಚಾರಗಳನ್ನು ತುಂಬಿದರು. ಕನ್ನಡದ ಹೆಸರು ಹೇಳಿಕೊಂಡು ತಮ್ಮ ಹಿತಾಸಕ್ತಿಯನ್ನು ಸಾಧಿಸಿಕೊಳ್ಳುತ್ತಿರುವವರೇ ಹೆಚ್ಚಾಗಿರುವ ಈ ಕಾಲದಲ್ಲಿ, ರಹಮಾನ್‌ಖಾನ್ ವಿಶಿಷ್ಟವಾಗಿ ನಿಲ್ಲುತ್ತಾರೆ. ಇಂಥ ಅಪರೂಪ ವ್ಯಕ್ತಿತ್ವದ ಖಾನ್ ಅವರು ಅಕ್ಟೋಬರ್ ೧೩, ೧೯೯೩ರಂದು ನಡೆದ ಅಪಘಾತವೊಂದರಲ್ಲಿ ನಿಧನರಾದರು.

ಇವರ ನೆನಪಿನ ಗೌರವಾರ್ಥ ಬೆಂಗಳೂರಿನ ಯಶವಂತಪುರದ ಪ್ರಮುಖ ರಸ್ತೆಯೊಂದಕ್ಕೆ "ಕನ್ನಡ ಹೋರಾಟಗಾರ ದಿವಂಗತ ರಹಮಾನ್‌ಖಾನ್ ರಸ್ತೆ" ಎಂದು ಹೆಸರಿಡಲಾಗಿದೆ.

ಕನ್ನಡಿಗರೇ ನಾವು ನಮ್ಮ ಆಲಸ್ಯವನ್ನು ಕಳೆಯೋಣ; ಭ್ರಾಮಕ ಕಲ್ಪನೆಗಳನ್ನು ಬಿಟ್ಟುಬಿಡೋಣ; ಮತ್ತು ಮುಂದಿನ ಮಾರ್ಗಕ್ಕೆ ಹತ್ತೋಣ. ಪಾತಾಳಕ್ಕಿಳಿದ ನಮ್ಮ ಕರ್ನಾಟಕ ಆರ್ಯ ಸಂಸ್ಕೃತಿಯನ್ನು ನಾವು ಉದ್ಧರಿಸದೆ ಇನ್ನಾರು ಉದ್ಧರಿಸುವರು.

—ಆಲೂರು ವೆಂಕಟರಾವ್

ನನ್ನ ವಿದ್ಯಾರ್ಜನೆ

ಬ್ರಿಗೇಡಿಯರ್ ಮಹಾದೇವ ಗೋಖಲೆ
(ಸೇನಾನಿವೃತ್ತ)
೨೦೪, ವೃಂದಾವನ, ೨ನೇ ಹಂತ
ಮೈಸೂರು-೫೭೦ ೦೨೦

ಜ್ಞಾನವಯೋವೃದ್ಧರೂ ಬಹುಶ್ರುತರೂ ಆಗಿರುವ ಬ್ರಿಗೇಡಿಯರ್ ಗೋಖಲೆಯವರು "ಪುಸ್ತಕ ಪ್ರಪಂಚ"ದ ಕೋರಿಕೆ ಮನ್ನಿಸಿ ತಾವು ನಡೆದುಬಂದ ದಾರಿ ಕುರಿತ ಆಕರ್ಷಕ ವಿವರಗಳನ್ನು ಬರೆದುಕೊಡಲು ಒಪ್ಪಿದ್ದಾರೆ. ಈ ಲೇಖನ ಮಾಲೆ ಕೇವಲ ಒಬ್ಬ ವ್ಯಕ್ತಿಯ ಚರಿತ್ರೆ ಅಲ್ಲ, ಒಂದು ಜನಾಂಗದ ಇತಿಹಾಸ ಕೂಡ.

ದ. ಕ. ಜಿಲ್ಲೆಯ ಕಾರ್ಕಳ ತಾಲ್ಲೂಕಿನ ದುರ್ಗವೆಂಬ ಹಳ್ಳಿಯಲ್ಲಿ ೮೦ ವರ್ಷಗಳ ಹಿಂದೆ, ಅಂದರೆ ೧೯೧೬ರಲ್ಲಿ, ನನ್ನ ಜನನವಾಯಿತು. ೧೯೨೧ ರಿಂದ ೨೪ ರವರೆಗೆ ಕಲಿಯುವಿಕೆ ಮನೆಯ ಒಂದು ಜಗಲಿಯಲ್ಲಿ ಪ್ರತಿ ಸಂಜೆ ೬ ರಿಂದ ೭–೩೦ರ ತನಕ. ಶಿಸ್ತು ಎಂದರೆ ಅದೇ ಜಗಲಿ, ಅದೇ ಸಮಯ ಶಿಕ್ಷಕರು ಖುದ್ದು ತಂದೆಯವರೇ. ಪಾಠದ ಹೆಸರು "ಬಾಯಿಪಾಠ!" ಅಂದರೆ ಕಾಗದ ಪೆನ್ಸಿಲು ಆಗಲೀ ಸ್ಲೇಟು ಬಳಪ ಆಗಲೀ ಒಂದೂ ಇಲ್ಲ. ಎಲ್ಲವೂ ಬಾಯಿಪಾಠವೇ. ಮಗ್ಗಿಗಳು ೧ ರಿಂದ ೧೬ ರವರೆಗೆ. ರೂಪಾಯಿ, ಆಣೆ, ಪೈಗಳ ಲೆಕ್ಕಗಳು ಧಾನ್ಯದ ಅಳತೆ, (ಮುಡಿ, ಕಳಸಿಗೆ ಇತ್ಯಾದಿ) ತೆಳು ಜಿನಸಿನ ಎಣ್ಣೆ, ತುಪ್ಪ ಇತ್ಯಾದಿ ಅಳತೆ (ಖಂಡಿ, ಮಣ, ಕುತ್ತಿ, ಸೇರು, ಕುಡುತೆ ಇತ್ಯಾದಿ), ೨೭ ನಕ್ಷತ್ರ ನಾಮಗಳು, ತಿಂಗಳ ಹೆಸರುಗಳು, ಸಂವತ್ಸರಗಳ ಹೆಸರುಗಳು, ವಿವಿಧ ಶತಾಬ್ದಿಗಳು, ಬಾಯಿಲೆಕ್ಕ ಮಾಡುವ ಸುಲಭ ಉಪಾಯಗಳು ಇತ್ಯಾದಿ. ಮಂಗಳೂರಿನ 'ಬಾಸೆಲ್ ಮಿಶನ್'ನವರ "ಗಣಿತ ಹಸ್ತಾಮಲಕ" ಈ ಪಾಠದ ಪಠ್ಯ ಪುಸ್ತಕ. ಇದರ ಕ್ರಯ ಒಂದು ಆಣೆ ಮಾತ್ರ. ನಾಲ್ಕುವರೆ ಇಂಚು ಉದ್ದ, ಮೂರುವರೆ ಇಂಚು ಅಗಲದ, ೬೪ ಪುಟಗಳ ಹೊತ್ತಗೆ ಇದು.

ಮುಂದೆ "ಮನೆಯ ಶಾಲೆ"ಯಿಂದ ದೇವಸ್ಥಾನದ "ಅಡುಗೆ ಕೋಣೆ ಶಾಲೆಗೆ" ಅಲ್ಲಿ ೬–೭ ಬೆಂಚುಗಳು. ಒಂದು ಕಪ್ಪು ಹಲಗೆ. ಅಧ್ಯಾಪಕರು ಒಬ್ಬರೇ. ಬೋಧನೆಯ ವಿಷಯಗಳು — ಕನ್ನಡ, ಗಣಿತ, ಚರಿತ್ರೆ ಮತ್ತು ಭೂಗೋಲ ಇಲ್ಲಿ ನಾವು 'ಧೂಲಾಕ್ಷರ'ಗಳನ್ನು ಕಲಿತೆವು. ಕನ್ನಡ ಮತ್ತು ದೇವನಾಗರಿ ಅಕ್ಷರಗಳನ್ನು ಮಳಲಿನ ಮೇಲೆ ಬರೆದು ಅಭ್ಯಾಸಮಾಡಬೇಕು. ಇಲ್ಲಿಯ ವೈಶಿಷ್ಟ್ಯವೆಂದರೆ ಕವಿತೆ

ಗಳನ್ನು, ಮಗ್ಗಿಗಳನ್ನು ಬಾಯಿಪಾಠ ಮಾಡಬೇಕು. ಇದರಲ್ಲಿ ಪರೀಕ್ಷೆ ಇದೆ. ಇನ್ನೊಂದು ವಿಶೇಷವೆಂದರೆ ಪ್ರತಿಯೊಂದು ಕಿಟಕಿಯ ಮೇಲ್ಭಾಗದಲ್ಲಿಯೂ ಒಂದು ಜಾಣ್ನುಡಿ ಚಂದ ಅಕ್ಷರಗಳಲ್ಲಿ ಬರೆದು ಅಂಟಿಸಲಾಗಿತ್ತು. ಉದಾ :

೧. ಆರೋಗ್ಯ ಭಾಗ್ಯವೇ ಭಾಗ್ಯವು
೨. ಸತ್ಯಂವದ, ಧರ್ಮಂಚರ
೩. ಮಾತು ಬಲ್ಲವನಿಗೆ ಜಗಳವಿಲ್ಲ. ಊಟ ಬಲ್ಲವನಿಗೆ ರೋಗವಿಲ್ಲ. ಇತ್ಯಾದಿ.

ಈ ಶಾಲೆಯ ಕಟ್ಟುನಿಟ್ಟಿನ ಶಿಸ್ತು ಎಲ್ಲರೂ ಮೆಚ್ಚುವಂತಹದು.

ಬಳಿಕ ೮ ವರ್ಷ ಬೋರ್ಡಿಂಗ್ ಹೈಸ್ಕೂಲ್ ಕಾರ್ಕಳ. ೪ ಮತ್ತು ೫ ಈ ಎರಡು ಕ್ಲಾಸುಗಳು ಮತ್ತು ೧ ರಿಂದ ೬ ರವರೆಗೆ 'ಫಾರ್ಮ್'ಗಳು. ೬ನೇ ಫಾರ್ಮ್ ಎಂದರೆ ಎಸ್‌ಎಸ್‌ಎಲ್‌ಸಿ. ಕ್ಲಾಸುಗಳಲ್ಲಿ ತಿಂಗಳೊಂದರ ಪಾಠ ಶುಲ್ಕ ಒಂದುಕಾಲು ರೂ. ಫಾರ್ಮ್‌ಗಳಲ್ಲಿ ಮಾಸಿಕ ಶುಲ್ಕ ಎರಡು ಮುಕ್ಕಾಲು ರೂ. ಇಲ್ಲಿ ಪ್ರತಿ ಸಾಯಂಕಾಲ 'ಡ್ರಿಲ್' ಕಡ್ಡಾಯವಾಗಿತ್ತು. ಡ್ರಿಲ್ ಮಾಷ್ಟ್ರು ಸೈನ್ಯದ ಸೇವಾನಿವೃತ್ತ ಅಧಿಕಾರಿ ಮಿಸ್ಟರ್ ಪಿಂಟೊ. ಈ ಶಾಲೆಯ ಕ್ರಮ ಹೀಗೆ. ಒಬ್ಬ ಅಧ್ಯಾಪಕರ ಗೈರುಹಾಜರಿಯಲ್ಲಿ ಇನ್ನೊಬ್ಬರು ಅವರ ಗೈರುಹಾಜರಾದ ಅಧ್ಯಾಪಕರ ವಿಷಯವನ್ನೇ ಕಲಿಸುವರು—ಇಲ್ಲವೇ, 'ಸರ್ವಜ್ಞ ವಚನಗಳು ಅಥವಾ 'ಭರ್ತೃಹರಿ ನೀತಿಶತಕ'ದಿಂದ ಪದ್ಯಗಳು ಅಥವಾ ಕನಕದಾಸರ 'ನಳಚರಿತ್ರೆ' ಮುಂತಾದವನ್ನು ಕಲಿಸುವರು. ವಿದ್ಯಾರ್ಥಿಗಳನ್ನು ಪಾಠದ ಸಮಯದಲ್ಲಿ ಆಟವಾಡಲು ಬಿಡುತ್ತಿರಲಿಲ್ಲ. ಸೈನ್ಸ್ ಕಲಿಸುವ ದತ್ತಾತ್ರೇಯರಾಯರು ಇಂಗ್ಲಿಷನ್ನು ಕೂಡಾ ಪರಿಣಾಮಕಾರಿಯಾಗಿ ಕಲಿಸುತ್ತಿದ್ದರು. ಒಂದು ದಿನ ಅವರು ನನಗೆ ಒಂದು ಪುಸ್ತಕದ ಅಂಗಡಿಯಲ್ಲಿ ಭೇಟಿಯಾದರು. ಕೈಯಲ್ಲಿದ್ದ ಬೆಂಕಿಪೆಟ್ಟಿಗೆಯ ಒಂದು ಕಡ್ಡಿಯನ್ನು ಹೊತ್ತಿಸಿ—

"ದಿಸ್ ಈಸ್ ಎನಫ್ ಟು ಸೆಟ್ ಫೈರ್ ಟು ದಿ ಥೇಮ್ಸ್! ವಾಟ್ ಡಸ್ ದಟ್ ಮೀನ್ ?" (ಇದು ಥೇಮ್ಸ್‌ಗೆ ಬೆಂಕಿ ಹಚ್ಚಲು ಸಾಕು ಇದರ ಅರ್ಥವೇನು ?) ಎಂದರು. ನನ್ನ ಪೆಚ್ಚುಮೋರೆಯನ್ನು ನೋಡಿ ಅದರ ಅರ್ಥವನ್ನು ವಿವರಿಸಿದರು. ಇಲ್ಲಿ ಥೇಮ್ಸ್ ಅಂದರೆ 'ಲಂಡನ್‌ನಗರ' ಎಂದರು.

ಮೂರನೇ ಫಾರ್ಮಿನ ಕನ್ನಡ ಉಪಪಠ್ಯಪುಸ್ತಕದಲ್ಲಿ ಒಂದು ಪಾಠ ಇತ್ತು. ಶಿವಾಜಿ ಮಹಾರಾಜರ ರಾಜ್ಯಾಭಿಷೇಕದ ಸಮಯ ದಾದಾಜಿ ಕೊಂಡದೇವರೆಂಬ ಗುರುಗಳು ಶಿವಾಜಿಗೆ ಮಾಡಿದ ಉಪದೇಶ. "ರಾಜ ಪ್ರಜೆಗಳನ್ನು ಯಾವ ರೀತಿಯಲ್ಲಿ ಆಳಬೇಕು" ಎಂಬ ವಿಷಯಮಾತ್ರವಲ್ಲ, ಇಡೀ ಮಾನವಜೀವನಲ್ಲಿ ಮಾರ್ಗದರ್ಶಕವಾದ ವಿಚಾರಪರವಾದ ತತ್ತ್ವಗಳು ಇದರಲ್ಲಿ ಅಡಕವಾಗಿದ್ದುವು. ಈ ಪಾಠದ ಬೋಧನೆ ನನ್ನ ಮನಸ್ಸಿನ ಮೇಲೆ ಹೆಚ್ಚಾದ ಪ್ರಭಾವ ಬೀರಿತು.

ಆರನೇ ಫಾರ್ಮಿನಲ್ಲಿ ನಮಗೊಂದು ಲೇಖನ ಸ್ಪರ್ಧೆ ಇತ್ತು. ವಿಷಯ—

"ಆತ್ಮೋದ್ಧಾರಕ ಜೀವನವೆಂದರೇನು? ಅದನ್ನು ಹೇಗೆ ಸಾಧಿಸತಕ್ಕದ್ದು ?"

ಈ ಲೇಖನ ಬರೆಯಲು ನಿಗದಿತ ಸಮಯ ೨ ಗಂಟೆ. ನಾನು ಕನ್ನಡದಲ್ಲಿ ಬರೆದೆ. ಇನ್ನೊಬ್ಬ ವಿದ್ಯಾರ್ಥಿ ಇಂಗ್ಲಿಷಿನಲ್ಲಿ ಬರೆದ. ನಮಗಿಬ್ಬರಿಗೂ ಪಾರಿತೋಷಿಕ ಸಿಕ್ಕಿತು. ಆಗ ನನ್ನಲ್ಲಿ ಆಧ್ಯಾತ್ಮಿಕ ವಿಷಯದಲ್ಲಿ ಮೊಳೆತ ಆಸಕ್ತಿ ಇನ್ನೂ ಅಚ್ಚಳಿಯದೆ ಉಳಿದಿದೆ.

೧೯೩೦ನೆಯ ಇಸವಿಯಲ್ಲಿ ಒಂದು ದಿನ ನಮ್ಮ ಶಾಲೆಯ ವಾರ್ಷಿಕ ಇನ್ಸ್‌ಪೆಕ್ಷನ್ ಜಿಲ್ಲಾ ಶಿಕ್ಷಣ ಅಧಿಕಾರಿಯವರಿಂದ ಅವರು ಒಬ್ಬ ಬ್ರಿಟಿಷ್ ಆಫೀಸರ್ ಆದಿನ ನಮ್ಮ ಶಾಲೆಯ ಸ್ವಚ್ಛತೆ, ಶಿಸ್ತು, ಉಪಾಧ್ಯಾಯರುಗಳ ಧೋತ್ರ, ಜರಿಮುಂಡಾಸು, ಎಲ್ಲೆಲ್ಲಿಯೂ ಕ್ರಮಬದ್ಧವಾದ ವ್ಯವಸ್ಥೆ—ಪ್ರತಿಯೊಂದು ಆದರ್ಶಪ್ರಾಯ ಒಂದು ಮಾದರಿ. ಒಂದು ವೇಳೆ ಶಿಕ್ಷಣ ಅಧಿಕಾರಿ ವಿದ್ಯಾರ್ಥಿಗಳೊಡನೆ ಮಾತನಾಡಿದರೆ ನಾವು ಹೇಗೆ ಉತ್ತರಿಸಬೇಕು ಎಂಬುದನ್ನು ನಮಗೆ ಮುಂಚೆಯೇ ಕಲಿಸಿದ್ದರು.

ನಮ್ಮ ಶಾಲೆಯ ಅಧ್ಯಾಪಕರ ಬೋಧನೆಯ ರೀತಿ, ಪಾಂಡಿತ್ಯ, ವ್ಯಕ್ತಿತ್ವ, ನಡತೆ, ಮಾರ್ಗದರ್ಶನ ಇವೆಲ್ಲವೂ ಒಂದುಮಾದರಿ. ಒಂದು ದಿನ ಕನ್ನಡ ಪಂಡಿತ ಪುಟ್ಟಣ್ಣಸಾಮಗರು ಕ್ಲಾಸಿಗೆ ಬಂದು ಹೀಗೆಂದರು:

"ಈಗ ನಾನು ಅಲಂಕಾರ ಶಾಸ್ತ್ರ ಪ್ರಾರಂಭಿಸುತ್ತೇನೆ ಬರೆದುಕೊಳ್ಳಿ. ಅಲಂಕಾರಗಳು ಅರ್ಥಾಲಂಕಾರ ಮತ್ತು ಶಬ್ದಾಲಂಕಾರ ಎಂದು ಎರಡುವಿಧ. ಕಾವ್ಯದಲ್ಲಿ ರಸದಸ್ಥಾನ ಮಹತ್ತ್ವದ್ದು. ರಸವೆಂದರೆ ಭಾವಕ್ಕೆ ಸಂಬಂಧಪಟ್ಟ ಅನುಭವ. ಚಿತ್ತಾಕರ್ಷಣೆಮಾಡುವ ಒಂದು ಮಾಧ್ಯಮ. ಕಾವ್ಯದಲ್ಲಿ ರಸಗಳು ಒಂಭತ್ತು. ಬರೆದುಕೊಳ್ಳಿ—

"ಶೃಂಗಾರವೀರ ಕರುಣಾದ್ಭುತ...." ಇತ್ಯಾದಿ.


ಮುಂದೆ ಪಂಡಿತರು "ಭರತನ ನಾಟ್ಯಶಾಸ್ತ್ರದಿಂದ ಕೆಲವು ಉದ್ಧರಣೆಗಳನ್ನು ನಮ್ಮಿಂದ ಬರೆಸಿದರು. ಆಕಾಲದಲ್ಲಿ ಶಿಕ್ಷಣದ ಶ್ರೇಷ್ಠತೆಯ ಮಟ್ಟ ಹೀಗಿತ್ತು.

ನಮ್ಮ ಹೈಸ್ಕೂಲಿನ ಹೆಡ್‌ಮಾಸ್ತರರು ಶ್ರೀಯುತ ಶ್ರೀನಿವಾಸಕಿಣಿ ಎಂಬುವರು. ಅವರು "ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರಸಾರ" ಎಂಬ ಸಣ್ಣ ಪುಸ್ತಕ ಬರೆದಿದ್ದರು. ಅದೇ ನಮ್ಮ ಪಠ್ಯಪುಸ್ತಕಗಳ ಪೈಕಿ ಒಂದು. ಇವರ ಶಿಸ್ತಿನ ಒಂದು ಉದಾಹರಣೆ ಎಂದರೆ—ಯಾವ ಅಧ್ಯಾಪಕರೂ ವಿದ್ಯಾರ್ಥಿಗಳನ್ನು ಕ್ಲಾಸಿನಲ್ಲಿ ಹೊಡೆಯಬಾರದು. ತಪ್ಪು ಮಾಡಿದ ಹುಡುಗನಿಗೆ ದಂಡಿಸುವ ಕ್ರಮ ಹೀಗೆ: ಅವನನ್ನು ಮುಖ್ಯಾಧ್ಯಾಪಕರ ಮುಂದೆ ಕರಕೊಂಡು ಹೋಗಿ ಅವನು ಮಾಡಿದ ತಪ್ಪನ್ನು ತಿಳಿಸಬೇಕು. ಆಗ ಅವರು ಹುಡುಗನನ್ನು ಶಿಕ್ಷಿಸಲು ನಿರ್ಧರಿಸಿದರೆ ಅವರ ಕಪಾಟಿನ ಮೇಲಿನಿಂದ ಒಂದು ಬೆತ್ತವನ್ನು ತೆಗೆದು ಎಡ ಕೈಯ ಮೇಲೆ ಒಂದು ಏಟು, ಬಲ ಕೈಯ ಮೇಲೆ ಒಂದು ಏಟು ಹೊಡೆದು—"ಇನ್ನು ಮುಂದೆ ಹೀಗೆ ವರ್ತಿಸಬೇಡ" ಎಂದು ಹೇಳಿ ಹಿಂದೆ ಕಳುಹಿಸುವರು.

ಈ ಶಾಲೆಯಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಪ್ರಾಧಾನ್ಯವಿತ್ತು. ಕಿರುಭಾಷಣ ಮಾಡುವುದು, ವಾಗ್ವಾದ ಮಾಡುವ

ಅಭ್ಯಾಸಕ್ಕಾಗಿ ಚರ್ಚಾ ಸಂಘ, ಹಾಡುಗಾರಿಕೆ, ನೃತ್ಯ, ನಾಟಕ ಮುಂತಾದ ವಿಷಯಗಳಿಗೆ ವಿದ್ಯಾರ್ಥಿಗಳನ್ನು ಹುರಿದುಂಬಿಸುತ್ತಿದ್ದರು. ಅಧ್ಯಾಪಕರು ಶಿಕ್ಷಣ ಕಲೆಯಲ್ಲಿ ಪರಿಣತರಾಗಿದ್ದರು. ಅಧ್ಯಾಪನವೆಂದರೆ ಕೇವಲ "ವೃತ್ತಿ"ಯಲ್ಲ, ಅದೊಂದು "ಪ್ರವೃತ್ತಿ" ಅಥವಾ "ಮನೋಧರ್ಮ" ಎಂದು ಅರಿತ ಪ್ರತಿಭಾವಂತ ಗುರುಗಳಿದ್ದರು.

(ಮುಂದುವರಿಯಲಿದೆ)



ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ !
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ !

ನಮ್ಮ ತಪ್ಪನೆನಿತೊ ತಾಳ್ವೆ,
ಅಕ್ಕರೆಯಿಂದೆಮ್ಮನಾಳ್ವೆ;
ನೀನೆ ಕಣಾ ನಮ್ಮ ಬಾಳ್ವೆ,
ನಿನ್ನ ಮರೆಯಲಮ್ಮೆವು—

ತನು ಕನ್ನಡ, ಮನ ಕನ್ನಡ, ಧನ ಕನ್ನಡವೆಮ್ಮವು.

—ಎಂ. ಗೋವಿಂದ ಪೈ

ಸಮಯ

ಎಂ. ಎಸ್. ಲಕ್ಷ್ಮಣಾಚಾರ್
೨೫೪, 'ವಿಶ್ವರೂಪ' (ಮಹಡಿ)
೫ನೇ ಮುಖ್ಯ ರಸ್ತೆ, ೧೪ನೇ ಅಡ್ಡ ರಸ್ತೆ
ಜಯನಗರ; ಮೈಸೂರು-೫೭೦೦೧೪

ಹಿಂದಿನ ರಾತ್ರಿಯೇ ಯಾವಾಗಲೋ ಆ ಕ್ಲಾಕ್ ನಿಂತು ಹೋಗಿತ್ತು. ರಾತ್ರಿಯಲ್ಲೂ ತಂದೆಯವರು ನಿದ್ದೆ ಮಾಡಲೇ ಇಲ್ಲವೆಂದು ನನಗೆ ತಿಳಿದಿತ್ತು. ತಂದೆ ಹೊರಳಾಡುತ್ತಿರುವಾಗ ಆ ಹಳೆಯ ಮಂಚವು ಬಹಳವಾಗಿ ಕಿರ್‌ಪರ್ ಎಂದು ಶಬ್ದ ಮಾಡುವುದೂ ಅವರು ಬಚ್ಚಲು ಮನೆಗೆ ತಡವರಿಸುತ್ತಾ ನಡೆದು ಹೋಗುವುದೂ ಅಲ್ಲಿ ನೀರು ಸುರಿದಂತೆ ಶಬ್ದವಾಗುವುದೂ ಇವೆಲ್ಲಾ ಪಕ್ಕದ ಕೋಣೆಯಲ್ಲೇ ಮಲಗಿದ್ದ ನನಗೆ ಗೊತ್ತಾಗುತ್ತಿತ್ತು. ಅದರೊಂದಿಗೇ ನನ್ನ ನಿದ್ದೆಯೂ ಹಾಳಾಗಿ ಹೋಗಿತ್ತು. ಬಹು ಹಳೆಯದಾದ ಆ ಕ್ಲಾಕ್ ಅರ್ಧ ಗಂಟೆಗೊಮ್ಮೆಯಂತೆ ಬಡಿಯುವಾಗ ತಂದೆಯವರು ಅದನ್ನು ಎಣಿಸುವುದೂ ಕೇಳುತ್ತಿತ್ತು. ಮುದಿಯಾಗಿದ್ದ, ಬಾಡಿ ಬತ್ತತೊಡಗಿದ್ದ ಶರೀರದ, ಕಣ್ಣಿಗೆ ಕಾಣದ ಕೋನಗಳಿಂದ ಅನಿರೀಕ್ಷಿತವಾಗಿ ಹುಟ್ಟುವ ವೇದನೆಗಳಿಂದ ಒದ್ದಾಡಿ ಹೊರಳಾಡಿ ಹಳೆಯ ನೆನವುಗಳಲ್ಲಿ ಏರಿಳಿದು ಮಲಗಿರಬೇಕಾದರೆ ಅವರು ಅನಾವಶ್ಯಕವಾದ ಇನ್ನೊಂದು ದೀರ್ಘವಾದ ಹಗಲನ್ನು ತಪಿಸಿ ಆಗಾಗ್ಗೆ ತುಂಡು ತುಂಡಾಗುತ್ತಿದ್ದ ಗಂಟೆಗಳನ್ನು ಎಣಿಸುತ್ತಿದ್ದರು. ಬಹುದೀರ್ಘವಾದ ಬಾಳಿನಲ್ಲಿನ ಅಂದಂದಿನ ಕಷ್ಟಗಳ ವಿಷಯದಲ್ಲಿ ಯಾವಾಗಲೂ ಸಮಯವನ್ನು ಲೆಕ್ಕಾ ಹಾಕುತ್ತಿದ್ದ ತಂದೆಯವರು ಹೀಗೆ ಮಲಗಿದ್ದಾಗಲೂ ಆ ಸ್ವಭಾವವನ್ನು ಬಿಡುತ್ತಿರಲಿಲ್ಲ. ಆಗಾಗ ಅವರು ಬಚ್ಚಲು ಮನೆಗೆ ಹೋಗುವುದಕ್ಕೆ ಸರಿಯಾಗಿ ಕ್ಲಾಕ್‌ನ ಶಬ್ದ ತಾಳೆಯಾಗುತ್ತಿದ್ದುದನ್ನು ನಾನು ಗಮನಿಸಿದ್ದೆ.

ಬಹು ಹಿಂದೆ ಒಂದು ದಿನ ಆ ಕ್ಲಾಕ್ ಹೀಗೆಯೇ ನಿಂತು ಹೋಗಿತ್ತು.

ಅಂದು ನಾನು ಬೆಳಗ್ಗೆ ಎದ್ದು ನೋಡಿದಾಗ ತಂದೆಯವರ ಮುಖ ವಿಪರೀತವಾಗಿ ಊದಿತ್ತು. ಅವರು ರಾತ್ರಿಯಲ್ಲಿ ನಿದ್ದೆಯೇ ಮಾಡಿರಲಾರರೆಂದು ನನಗೆ ಅನ್ನಿಸಿತು. ಕೋಣೆಯಲ್ಲಿ ಬಹಳವಾಗಿ ಮೂತ್ರದ ವಾಸನೆ ಹೊಡೆಯುತ್ತಿತ್ತು. ನಾನು ಹಾಸಿಗೆಯ ಮೇಲೆ ಹಾಸಿದ್ದ ಬೆಡ್‌ಷೀಟ್ ನೋಡಿದೆ. ಅದು ಒದ್ದೆ ಮುದ್ದೆಯಾಗಿತ್ತು.

"ಒಂದೇ ಸಲ ಅಷ್ಟೇ....ಒಂದೇ ಸಲ...." ತಂದೆ ಸುಮ್ಮನೆ ಸ್ಪಷ್ಟಗೊಳಿಸಲು ಕಷ್ಟಪಡುತ್ತಿದ್ದರು.

ಆಧಾರ: ಶ್ರೀ ಎ. ಸೇತುಮಾಧವನ್ ಅವರ ಮಲಯಾಳಂ ಕಥೆ.

"ಪರವಾಗಿಲ್ಲ, ಬಿಡಪ್ಪ. ಕ್ಲಾಕ್ ಸರಿ ಮಾಡಿಸೋಣ" ನಾನು ಹೇಳಿದೆ.

ಹಾಲ್‌ಗೆ ಹೋಗಿ ನಾನು ಕ್ಲಾಕ್ ಅನ್ನು ದಿಟ್ಟಿಸಿ ನೋಡಿದೆ. ಅದಕ್ಕೆ ಎಷ್ಟು ವಯಸ್ಸಾಗಿತ್ತೋ ಏನೋ? ತಂದೆ ಉತ್ತರ ದೇಶದಲ್ಲಿ ಕೆಲಸದಲ್ಲಿದ್ದ ಕಾಲದಲ್ಲಿ ಅದನ್ನು ಕೊಂಡಿದ್ದರಂತೆ. ಡಯಲ್‌ನಲ್ಲಿದ್ದ ಆ ಹಳೆಯ ರೋಮನ್ ಸಂಖ್ಯೆಗಳು ಬಹಳವಾಗಿ ಮಾಸಿಹೋಗಿದ್ದವು. ಕಿಲುಬು ಹಿಡಿದ್ದ ಅದರ ಹಿತ್ತಾಳೆ ಪೆಂಡ್ಯುಲಂ ಅತ್ತಿಂದಿತ್ತ ಬಲು ಕಷ್ಟದಿಂದ ಚಲಿಸುತ್ತಿತ್ತು.

ಹೋದ ಸಲ ಕ್ಲಾಕ್ ಅನ್ನು ರಿಪೇರಿಗೆಂದು ತೆಗೆದುಕೊಂಡು ಹೋದಾಗ ಆಂಡಪ್ಪನ್ ಹೇಳಿದ್ದನು:

"ಮೇಷ್ಟ್ರೇ, ಇಂತಹ ಜಾಂಬುವಂತನ ಕಾಲದ ಕ್ಲಾಕ್ ಅನ್ನು ನಿವಾಗುವ ಹೊತ್ತಿಗೆ ಹೊತ್ತುಕೊಂಡು ಬರುತ್ತಿದ್ದೀರಿ. ಅದಕ್ಕೋ ಯಾವಾಗಲೂ ಏನಾದರೊಂದು ಕಾಹಿಲೆ. ಒಂದು ಸಲ ಉಬ್ಬಸ, ಒಂದು ಸಲ ಸೆಳವು, ಒಂದು ಸಲ ಬೇಧಿ. ಯಾರನ್ನಾದರೂ ಕರೆಸಿ ಮಂತ್ರ ಹಾಕಿಸಿ ಜಪಿಸಿ ಒಂದು ತಾಯಿತ ಕಟ್ಟಿಸಿದ್ದರೆ ಆಗುತ್ತಿತ್ತು. ಇದನ್ನು ರಿಪೇರಿ ಮಾಡಿ ಮಾಡಿ ನಿಜವಾಗಲೂ ನನ್ನ ಕೈಯೇ ಸೋತು ಹೋಗಿದೆ. ಸರಿಯಾಗಿ ಹೇಳಬೇಕೆಂದರೆ ಪೂರ್ವ ಜನ್ಮದ ಕರ್ಮದಂತೆ ಇದು ನನ್ನ ಬೆನ್ನಿಗಂಟಿಕೊಂಡಿದೆ ಅನ್ನಿಸುತ್ತೆ. ನಿಜವಾಗಲೂ ಇದನ್ನು ನೋಡಿದರೆ ನನಗೆ ಹೆದರಿಕೆ ಆಗುತ್ತೆ. ನನ್ನ ಜೊತೆಯೇ ಇದೂ ಹೋಗುತ್ತೆ ಅನ್ನಿಸುತ್ತೆ.

"ಹಾಗೆಲ್ಲಾ ಹೇಳಬೇಡಪ್ಪ. ಈ ಕ್ಲಾಕ್‌ಗೂ ನನ್ನ ತಂದೆಗೂ ಇರುವ ಸಂಬಂಧ ಹೇಳಿದರೆ ನಿನಗೆ ಅರ್ಥವಾಗುವುದಿಲ್ಲ."

"ನೀವು ಏನೇ ಹೇಳಿದರೂ ಆ ವಸ್ತುವನ್ನು ನೋಡ್ತಾ ಇದ್ದಾಗಲೇ ನನಗೆ ಏನೋ ಒಂದು ತರಹ ಆಗುತ್ತೆ. ಹೋದ ಜನ್ಮದಿಂದ ಚೆದುರಿ ಬಿದ್ದ ಜೀವವಿರುವ ಏನೋ ಒಂದು ವಸ್ತುವಿನಂತೆ. ಈಗ ಅದರ ಜೀವವು ಹಾಗೇ ಶುಷ್ಕವಾಗುತ್ತಾ ಆಗುತ್ತಾ ಏನೋ ಒಂದು ರೂಪ ತಾಳಿದಂತೆ. ನೀವು ನಾನು ಹೇಳಿದ್ದನ್ನು ನಂಬುವುದಿಲ್ಲ ಅಂತ ನನಗೆ ಗೊತ್ತು. ಆದರೂ ನಾನು ಹೇಳುತ್ತೇನೆ. (ಹೇಳದೆ ಇರಲಾರೆ.) ಇದು ಕೇವಲ ಸಾಧಾರಣ ಯಂತ್ರವಲ್ಲ. ಇದು ಸತ್ಯ."

"ಹೋಗಪ್ಪ, ಇಲ್ಲದ್ದೆಲ್ಲಾ ಹೇಳುತ್ತಿದ್ದೀ!" ನಾನು ಇಲ್ಲದ ನಗುವನ್ನು ಬರಿಸಿಕೊಳ್ಳುತ್ತಾ ಹೇಳಿದ್ದೆ.

ಅದನ್ನು ಕೇಳದವನಂತೆ ಆಂಡಪ್ಪನ್ ಹೇಳಿದ್ದನು:

"ಈ ಕ್ಲಾಕ್‌ಗೂ ನಿಮ್ಮ ತಂದೆಗೂ ಇರುವ ಬಂಧನವೇನು ಗೊತ್ತೇ? ಗೊತ್ತಿಲ್ಲದಿದ್ದರೆ ಹೇಳುತ್ತೇನೆ ಕೇಳಿ. ರಾತ್ರಿ ನೀವೆಲ್ಲಾ ನಿದ್ದೆ ಮಾಡುವಾಗ ಎಲ್ಲೆಲ್ಲೂ ಮೌನ ನೆಲೆಸಿದಾಗ ಈ ಜೀವಿಯು ನಿಮ್ಮ ತಂದೆಯೊಂದಿಗೆ ಮೌನವಾಗಿ ಮಾತನಾಡುತ್ತದೆ. ಬಹುಕಾಲದಿಂದ ಬಂದಿರುವ ಅವರಿಬ್ಬರಿಗೆ ಮಾತ್ರವೇ ಅರ್ಥವಾಗುವಂತಹ ಒಂದು ಭಾಷೆ ಅದು. ಅವರು ಗೊಣ ಗೊಣ ಎಂದು ಮಾತನಾಡುವುದೂ, ನಗುವುದೂ, ಪರಸ್ಪರ ಸಂಗ ಬಿಡುವುದೂ, ತಮ್ಮಲ್ಲೇ ಜಗಳವಾಡುವುದೂ ಅದೆಲ್ಲಾ ನಿಮಗೆ ಅರ್ಥವಾಗುವುದಿಲ್ಲ. ಮೇಷ್ಟ್ರೇ ಅದು ಅವರದೇ ಆದ ಭಾಷೆ, ಆ ಕಾಲದ ಭಾಷೆ, ಸಮಯವು ಇಬ್ಬರಿಗೂ ಅಷ್ಟರ ಮಟ್ಟಿಗೆ ಶರಣು ಹೊಡೆದಿದೆ. ಅವರದು ಎಷ್ಟು ದಿನಗಳಿಂದ ಇರುವ ಪರಿಚಯ ಗೊತ್ತೇ?"

ಆಂಡಪ್ಪನ್ ಹೇಳಿದ್ದರಲ್ಲಿ ಅರ್ಥ ಕೂಡ ನನಗೆ ಅರ್ಥವಾಗಿರಲಿಲ್ಲ. ಆದರೆ ನನಗೆ ಒಂದು ವಿಷಯ ಖಚಿತವಾಗಿ ಗೊತ್ತಿತ್ತು. ಈ ಟೌನ್‌ನಲ್ಲಿ ಸಮಯದ ಬಗ್ಗೆ ಹೇಳಬಲ್ಲ ಏಕೈಕ ಮನುಷ್ಯನೆಂದರೆ ಆಂಡಪ್ಪನ್ ಮಾತ್ರ. ಆ ಕರಿಯ ಮುಳ್ಳುಗಳ ತಾಳಗಳನ್ನು ಸರಿಪಡಿಸಿ ಚಲಿಸುವಂತೆ ಮಾಡುವುದರ ಮೂಲಕ ಆಂಡಪ್ಪನ್ ಸಮಯವನ್ನು ನಿಯಂತ್ರಿಸತೊಡಗಿದ್ದು ಎಷ್ಟೋ ಕಾಲದಿಂದಾಗಿತ್ತು. ಆ ತೆಳ್ಳಗೆ ಉದ್ದವಾಗಿರುವ ಬೆರಳುಗಳನ್ನು ಸ್ವಲ್ಪವೇ ಸ್ವಲ್ಪ ಕದಲಿಸಿ ಅವನು ಕಾಲದ ಚಲನೆಯನ್ನೇ ಇದ್ದಕ್ಕಿದ್ದಂತೆ ಹಿಡಿದು ನಿಲ್ಲಿಸುವನು. ಅದೇ ರೀತಿ ಸರ್ರೆಂದು ಮುಂದಕ್ಕೋ ಹಿಂದಕ್ಕೋ ನಡೆಸುವನು.

"ಆಂಡಪ್ಪ .... ಆದರೂ ...." ನಾನು ಸೌಮ್ಯವಾಗಿ ಹೇಳತೊಡಗಿದ್ದೆ.

"ಮೇಷ್ಟ್ರೇ ನೀವು ಏನೂ ಹೇಳಬೇಡಿ" ಆಂಡಪ್ಪನ್ ತೀವ್ರ ಧ್ವನಿಯಲ್ಲಿ ಹೇಳಿದ್ದನು. "ನಾನೊಂದು ಉಪಾಯವನ್ನು ಹೇಳುತ್ತೇನೆ. ಹೋಗುವ ದಾರಿಯಲ್ಲಿ, ನೀವು ಗುರು ಹಿರಿಯರನ್ನು, ಪರದೇವತೆಗಳನ್ನು ನೆನೆಯುತ್ತಾ ಮನಸ್ಸಿನಲ್ಲೇ ಪ್ರಾರ್ಥಿಸುತ್ತಾ ಈ ವಸ್ತುವನ್ನು ಆ ಚರಂಡಿಗೆ ಎಸೆದುಬಿಡಿ. ಹಿಂದೆ ಮುಂದೆ ನೋಡಬೇಡಿ. ಸೇತುವೆಯ ಮೇಲೆ ಹೋಗುತ್ತಿದ್ದಾಗ ಕ್ಲಾಕ್ ಸೈಕಲ್‌ನಿಂದ ಚರಂಡಿಗೆ ಬಿದ್ದುಹೋಯಿತೆಂದು ನಿಮ್ಮ ತಂದೆಯವರಿಗೆ ಹೇಳಿಬಿಡಿ. ಅನಂತರ ಪೇಟೆಯಿಂದ ಒಂದು ಅತಿ ಮುದ್ದಾದ ಹೊಸ ಕ್ವಾರ್ಟ್ಸ್ ಗಡಿಯಾರವನ್ನು ಕೊಂಡುಕೊಳ್ಳಬಹುದು."

"ಆದರೂ ಆಂಡಪ್ಪ...."

"ಮೇಷ್ಟ್ರೇ, ಇನ್ನೂ ಏನೇನೋ ಮಾತನಾಡುತ್ತೀರಲ್ಲಾ? ಸುಮ್ಮನೆ ಸಮಯ ಹಾಳು ಅಷ್ಟೆ. ಈ ವಸ್ತುವನ್ನು ಕಾಣುವಾಗಲೇ ನನಗೆ ಹೆದರಿಕೆಯಾಗುತ್ತೆ. ಇದು ನಾವು ಯಾರೂ ರಿಪೇರಿ ಮಾಡುವಂತಹ ವಸ್ತುವಲ್ಲ. ಬಹು ಹಳೆಯದು. ಹಿಂದಿನ ಜನಕ್ಕೆ ಸೇರಿದ ವಸ್ತು. ನನ್ನ ಹತ್ತಿರ ಇರುವ ಯಾವ ಅಂಗಗಳೂ ಅದಕ್ಕೆ ಸರಿಹೋಗುವುದಿಲ್ಲ ಅದರಿಂದಲೇ ಏನೋ ನನಗೆ ಅದನ್ನು ನೋಡುವಾಗಲೇ ಹೆದರಿಕೆ ಆಗುತ್ತದೆ. ಒಂದು ದಿವಸ ಇದು ಎದ್ದು ನಿಂತು ನನ್ನ ಭುಜದ ಮೇಲೆ ಹತ್ತಿ...."

"ಆಂಡಪ್ಪ, ತಮಾಷೆ ಮಾಡೋದು ಬಿಡು" ನಾನು ಹೇಳಿದ್ದೆ. "ಬೇರೆ ಕ್ಲಾಕ್ ತರಲು ಅಪ್ಪ ಒಪ್ಪುವುದಿಲ್ಲ. ಅವರಿಗೆ ಗಂಟೆ ಹೊಡೆಯುತ್ತಾ ಇರುವುದು ಕೇಳಬೇಕು."

"ಅದಕ್ಕೆ ಗಂಟೆ ಬಾರಿಸುವ ಕ್ವಾರ್ಟ್ಸ್ ಸಿಗುತ್ತಲ್ಲ. ಹೊಡೆಯುವುದು ಮಾತ್ರವಲ್ಲ. ಹಾಡು ಹಾಡುವುದು, ಕೂಗಿ ಕರೆಯುವುದು, ನೆಗೆದು ಕುಣಿಯುವುದು, ಎಲ್ಲಾ ಮಾಡುವಂತಹವೂ ಉಂಟು, ಸರಿಯೇ. ಕುಟುಂಬದ ಘನತೆಗೆ ಸ್ವಲ್ಪ ಕಡಿಮೆ ಎನಿಸಬಹುದು. ಆದರೂ ನಡೆಯಬೇಕಾದ ಕೆಲಸ ನಡೆಯಬೇಡವೇ?"

"ಅದೇನೂ ಬೇಡ ಆಂಡಪ್ಪ. ಅಪ್ಪ ಅದಕ್ಕೆ ಒಪ್ಪುವುದಿಲ್ಲ" ನನ್ನ ಧ್ವನಿ ದೃಢವಾಗಿತ್ತು. "ಹೇಗಾದರೂ ಇದನ್ನು ಸರಿಮಾಡಲು ನೋಡು."

ಆಂಡಪ್ಪನ್ ನನ್ನ ಮುಖವನ್ನು ನೋಡಿದ್ದನು. ಅನಂತರ ನಾನು ಕೊಟ್ಟ ಆ ಪೊಟ್ಟಣದ ಕಡೆಗೂ ನೋಡಿದ್ದನು. ಸ್ವಲ್ಪ ಹೊತ್ತಿಗೆ ಅವನ ಬಿಗಿದ ಹುಬ್ಬು ಸಡಿಲ

ವಾಗಿತ್ತು. ಅವನ ಕಣ್ಣುಗಳು ತಾವೇ ಮುಚ್ಚಿಕೊಂಡಿದ್ದುವು. ಅನಂತರ ಅವನ ಕಣ್ಣುರೆಪ್ಪೆಗಳು ಅರಳಿದಾಗ ಆಂಡಪ್ಪನ ಕಣ್ಣಾಲಿಗಳಲ್ಲಿ ನೀರು ತುಂಬಿರುವುದನ್ನು ನಾನು ಕಂಡಿದ್ದೆ.

"ಅಳುತ್ತಿದ್ದೀಯಾ ಆಂಡಪ್ಪಾ" ನಾನು ಕೇಳಿದ್ದೆ.

"ಈ ಕೆಲಸ ಪ್ರಾರಂಭಿಸಿ ಎಷ್ಟು ದಿನಗಳಾದವು? ಆದರೂ ನನಗೆ ಇದು ಸಾಧ್ಯವಾಗುತ್ತಿಲ್ಲ ಮೇಷ್ಟ್ರೇ!" ಅವನ ಧ್ವನಿ ಗದ್ಗದವಾಗಿತ್ತು. "ಇದರ ಹೊರೆಯಾಗಲಿ ನೋವಾಗಲಿ ಯಾರಿಗೂ ಗೊತ್ತಾಗುವುದಿಲ್ಲ. ಒಂದೊಂದು ಸಲವೂ ಹೊಸ ಜನ್ಮ ಎತ್ತುವಂತಾಗುತ್ತದೆ. ಮೊದಲೆಲ್ಲಾ ನಾನೇ ಕಾಲನಿಯಂತ್ರಕನೆಂದು ಅಹಂಕಾರ ಪಡುತ್ತಿದ್ದೆ. ಆಮೇಲಾಮೇಲೆ ಇದನ್ನು ನಿರ್ವಹಿಸಿಕೊಂಡು ಹೋಗುವಾಗ ಉಂಟಾಗುವ ತೊಂದರೆಗಳನ್ನು ಸಹಿಸಲು ಕಷ್ಟವಾಗುತ್ತಿದೆ."

ಒಡನೆ ನನ್ನ ಮನಸ್ಸು ಕರಗಿತ್ತು.

"ನಿನ್ನ ಕೈಯಲ್ಲಾಗದಿದ್ದರೆ ಬೇಡ ಆಂಡಪ್ಪ. ನಾನು ಅಪ್ಪನಿಗೆ ಏನಾದರೂ ಹೇಳಿ ಒಪ್ಪಿಸುತ್ತೇನೆ."

"ಬೇಡ ಮೇಷ್ಟ್ರೆ" ಆಂಡಪ್ಪನ ಧ್ವನಿ ಭಾರವಾಗಿತ್ತು. "ನಾನು ಇದನ್ನು ರಿಪೇರಿ ಮಾಡಿಕೊಡುತ್ತೇನೆ. ಇದು ನನ್ನದೇ ಆದ ಕೆಲಸ. ಇದಕ್ಕಾಗಿಯೇ ನಾನು ಬದುಕಿದ್ದೇನೆ. ಗುರುಹಿರಿಯರ ಅನುಗ್ರಹದಿಂದಲೇ ಈ ಕೆಲಸ ನಾನು ಮಾಡುತ್ತಿದ್ದೇನೆ. ನಡೆದಷ್ಟು ಕಾಲ ನಡೆಯಲಿ ಅಷ್ಟೆ."

ಆಂಡಪ್ಪನ್ ಹಾಗೆಲ್ಲಾ ಹೇಳಿದ್ದರೂ ಕ್ಲಾಕ್ ಅನ್ನು ಅವನಿಗೆ ಕೊಟ್ಟು ಹಿಂದಿರುಗುವಾಗ ನಾನು ನನ್ನ ಕೆಲಸವನ್ನು ಹೇಗೋ ಸಾಧಿಸಿದ್ದೆನು. ಇನ್ನೊ ಈ ಪೊಟ್ಟಣದೊಂದಿಗೆ ಆಂಡಪ್ಪನ ಬಳಿ ಹೋಗುವುದೇ ಬೇಡ. ಇದು ಕೇವಲ ಚಿಕ್ಕ ಯಂತ್ರದ ಕೆಲಸವಲ್ಲ. ಆಂಡಪ್ಪನ್ ಯಾಕೋ ಹೆದರುತ್ತಿದ್ದಾನೆ. ಅವನಿಗೆ ಇಷ್ಟವಿಲ್ಲದ ಯಾವುದೋ ಒಂದು ಕೆಲಸವನ್ನು ಮಾಡಲು ನಾನು ಅವನನ್ನೇ ಬಲವಂತ ಮಾಡುತ್ತಿರುವಂತೆ ಹೆದರುತ್ತಿದ್ದಾನೆ.

ನಿಜವಾಗಿಯೂ ಆಂಡಪ್ಪನ್‌ಗೆ ಏನೋ ತೊಂದರೆ ಇದೆ. ಅವನಿಗೆ ಇದರ ರಿಪೇರಿ ಮಾಡಲು ಸಾಧ್ಯವಿಲ್ಲವೆಂತಲ್ಲ. ಅವನು ಯಾವುದಕ್ಕೊ ಹೆದರುತ್ತಿದ್ದಾನೆ. ಅವನಿಗೆ ಇದೊಂದು ಜವಾಬ್ದಾರಿಯುತ ಕೆಲಸವಾಗಿದೆ.

ಈಗ ಅದೆಲ್ಲಾ ಮುಗಿದು ಮೂರು ನಾಲ್ಕು ತಿಂಗಳುಗಳೇ ಆಗಿರಬೇಕು. ಅಂದು ಆಂಡಪ್ಪನ್ ಹೇಗೋ ರಿಪೇರಿ ಮಾಡಿಕೊಟ್ಟ ಕ್ಲಾಕ್ ಇಷ್ಟು ದಿನ ನಡೆದಿತ್ತು. ಈಗ ಅದಕ್ಕೆ ನಡೆಯಲು ಸಾಧ್ಯವಾಗುತ್ತಿಲ್ಲ. ಅದು ಬಹಳ ನಿಶ್ಶಕ್ತವಾಗಿದೆ.

ಈಗ ಈ ಕ್ಲಾಕ್ ಅನ್ನು ಮತ್ತೆ ಅವನ ಬಳಿಗೆ ಹೇಗೆ ಒಯ್ಯುವುದು?

ನಾನು ತಂದೆಯವರು ಮಲಗಿದ್ದ ಕೋಣೆಗೆ ಹೋದೆ. ಅವರು ಮಂಚದ ಮೇಲೆಯೇ ಕುಳಿತಿದ್ದರು.

"ಟೈಂ ಎಷ್ಟು ಮಗು?"

"ಆರೂವರೆ?"

"ಓ...." ತಂದೆಯವರು ನಿಟ್ಟುಸಿರೆಳೆದರು. ಟೈಂ ಎಷ್ಟೆಂದು ತಾವೇ ತಿಳಿದುಕೊಳ್ಳುವುದು ತಮಗೆ ನಿಷೇಧಿಸಲ್ಪಟ್ಟಿದೆ ಎಂಬ ವಿಷಯ ಅವರನ್ನೇ ಬಹುವಾಗಿ

ಮಾಡಿಸಿರಬೇಕು. ಸಮಯದ ತುಂಡುಗಳನ್ನು ಅವರಿವರಿಂದ ತಿಳಿದುಕೊಳ್ಳಬೇಕಲ್ಲಾ ?

ಇನ್ನು ಆ ಕ್ಲಾಕ್‌ಗೆ ಮತ್ತೆ ಪ್ರಾಣ ಬರುವವರೆಗೂ ತಂದೆಯವರಿಗೆ ಮನಸ್ಸಮಾಧಾನವಿಲ್ಲೆಂದು ನನಗರ್ಥವಾಯಿತು. ಆಂಡಪ್ಪನೆ ಹೇಳಿದಂತೆ ಅವರು ಪರಸ್ಪರ ಅರ್ಥವಾಗುವಂತೆ ತಮ್ಮದೇ ಭಾಷೆಯಲ್ಲಿ ಏನೇನೋ ಮಾತನಾಡಿ ಮುಗಿಸಿರಬೇಕು.

ಈಗ ಇದ್ದಕ್ಕಿದ್ದಂತೆ ತಮ್ಮಿಬ್ಬರ ಮಧ್ಯೆ ಮಾತು ನಿಂತು ಹೋದುದರ ಸಂಕಟ ತಂದೆಯ ಮುಖದಲ್ಲಿ ಚೆನ್ನಾಗಿ ಕಾಣ ಬರುತ್ತಿತ್ತು.

ಏನೇ ಆದರೂ ಮತ್ತೊಮ್ಮೆ ಅಲ್ಲಿಗೆ ಹೋಗಿ ಕ್ಲಾಕ್ ಕೊಟ್ಟು ನೋಡೋಣ. ಆಂಡಪ್ಪನ್ ಕೈ ಬಿಡಲಾರ.

ನಾನು ತೀರ್ಮಾನಿಸಿದೆ.

ಒಂಭತ್ತು ಗಂಟೆಯಾಗುವ ವೇಳೆಗೆ ಕ್ಲಾಕ್ ಅನ್ನು ಪ್ಯಾಕ್ ಮಾಡಿ ತೆಗೆದುಕೊಂಡು ಟೌನ್‌ಗೆ ಹೊರಡಲನುವಾದಾಗ ಒಳಗಿನಿಂದ ತಂದೆಯವರು ಕೂಗಿದರು!

"ಗಂಟೆ ಎಷ್ಟಾಯಿತು ಮಗು"? ತಂದೆಯವರು ಗಲಿಬಿಲಿಯಿಂದ ತಮ್ಮ ಕೈಗಳನ್ನು ಹಿಸುಕುತ್ತಿದ್ದರು.

"ಒಂಭತ್ತಾಯಿತು, ಅಪ್ಪಾ."

"ಕತ್ತಲೆಯಾದಂತಿದೆ."

"ಬೆಳಗಾಗಿದೆಯಲ್ಲಾ. ಕಿಟಕಿಗಳನ್ನು ತೆರೆದಿಡಲೇ ?"

"ಬೇಡ. ಚಳಿಯಾಗುತ್ತೆ."

"ನಾನು ಟೌನ್ ಹಾಲ್‌ಗೆ ಹೋಗಿ ಬರುತ್ತೇನೆ ಅಪ್ಪಾ."

"ಎಷ್ಟು ಹೊತ್ತಾಗುತ್ತೆ ?"

"ಬೇಗ್ ಬಂದು ಬಿಡುತ್ತೇನಪ್ಪಾ."

"ಅಷ್ಟರೊಳಗೆ ನನಗೆ ಟೈಂ ತಿಳಿಯಬೇಕಾದರೆ"

ನಾನು ಅವರು ಹಾಗೆ ಕೇಳುವರೆಂದು ಊಹಿಸಿಯೇ ಇದ್ದೆ.

"ನಾನು ಕ್ಲಾಕ್ ಅನ್ನು ರಿಪೇರಿಗೆ ತೆಗೆದುಕೊಂಡು ಹೋಗುತ್ತಿದ್ದೇನೆ ಅಪ್ಪಾ." ನಾನು ಸುಮ್ಮನೆ ಹೇಳಿದೆ.

"ಹಾಗೇನೂ" ತಂದೆಯವರು ಸಮಾಧಾನದ ನಿಟ್ಟುಸಿರೆಳೆದು ಹೇಳತೊಡಗಿದರು.

"ನನಗೆ ಆಗಾಗ ಅವರ ಶಬ್ದ ಕೇಳಿಸುತ್ತಿರಬೇಕು. ಅದು ನಡೆಯುತ್ತಿರುವಾಗ ಟಕ್ ಟಕ್ ಎಂಬ ಆ ಶಬ್ದ ಕೇಳಿಸುತ್ತಲೇ ಇರಬೇಕು. ಆ ಶಬ್ದ ನನ್ನ ಹೃದಯದಿಂದಲೇ ಬರುತ್ತಿರುವುದೆಂದು ನನಗೆ ಒಂದೊಂದು ಸಲ ಅನ್ನಿಸುತ್ತದೆ. ಆ ಶಬ್ದ ನಿಂತು ಹೋದರೆ ನನ್ನ ಹೃದಯದಲ್ಲೂ ಶಬ್ದ ಚಲನಗಳು ನಿಂತುಹೋಗುತ್ತವೆ ಎಂದೆನ್ನಿಸುತ್ತೆ."

"ಬಿಡಿ ಅಪ್ಪ, ನಿಮಗೆ ಏನೇನೋ ತೋರುತ್ತೆ."

"ಕ್ಲಾಕ್ ಇರುವುದರಿಂದ ಸಮಯ ಮಾತ್ರ ಗೊತ್ತಾಗುತ್ತೆಂದು ಅಂದುಕೊಳ್ಳಬೇಡ. ಅದರ ಶಬ್ದ ಕೇಳಿಸಿದಾಗ ಸಮಯ ಕಳೆದು ಹೋಗುತ್ತಿದೆಯಲ್ಲಾ ಎಂಬ ಪ್ರಜ್ಞೆ ಚೆನ್ನಾಗಿ ಉಂಟಾಗುತ್ತದೆ."

ಮಾತನಾಡುವುದನ್ನು ನಿಲ್ಲಿಸಿದ ತಂದೆಯವರು ಮತ್ತೆ ಮುಂದುವರಿಸಿದರು!

"ಒಂದೊಂದು ಸಲ ನನಗೆ ಭಯವಾಗುತ್ತೆ. ಒಂದೊಂದು ಬಾರಿ ಕ್ಲಾಕ್ ಹೊಡೆಯುವಾಗಲೂ ನನ್ನ ವಯಸ್ಸು ಹೆಚ್ಚುತ್ತಿದೆಯಲ್ಲಾ ಎಂಬ ಭಯ ನನಗೆ. ಈ ವಯಸ್ಸಿನಲ್ಲಿ ನನಗೆ ಆ ವಿಷಯ ಬಹು

ಮಟ್ಟಿಗೆ ಸಮಾಧಾನವನ್ನುಂಟುಮಾಡಬೇಕು. ಮರಣದೊಂದಿಗೆ ಅಷ್ಟರಮಟ್ಟಿಗೆ ಸಮೀಪಿಸುತ್ತಿದ್ದೇನೆ ಎನ್ನುವಾಗ ನಾನು ಸಮಾಧಾನಪಟ್ಟುಕೊಳ್ಳಬೇಕಲ್ಲವೇ? ಇದು ಬಹುಶಃ ಮಾಯೆಯ ಬಂಧನವಾಗಿರಬೇಕು. ಎಷ್ಟಾದರೂ ಸಾಲದು ಸಾಲದೆಂಬ ಒಂದು ಮೋಹ. ನಾನು ಒಂದು ಕಾಸಿಗೂ ಬೆಲೆಯಿಲ್ಲದವನಾದೆನೆಂಬ ಪ್ರಜ್ಞೆ ಮನಸ್ಸಿನಲ್ಲಿದ್ದರೂ ಸಾಲದು ಸಾಲದೆಂಬ ಮೋಹ ನನಗಿದ್ದೇ ಇದೆ. ಏತಕ್ಕಾಗಿಯೋ ಯಾರಿಗೆ ಗೊತ್ತು? ಅಲ್ಲವೇ? ನೆನಸಿಕೊಂಡು ನೋಡುವಾಗ ತಮಾಷೆ ಎನಿಸುತ್ತಿಲ್ಲವೇ?... ಕೇಳುವವರಿಗೂ ತಮಾಷೆಯೇ"

ತಂದೆ ನಗುವ ಪ್ರಯತ್ನ ಮಾಡುತ್ತಿದ್ದರು. ಸಾಧಾರಣವಾಗಿ ತಂದೆಯವರು ನನ್ನೊಂದಿಗೆ ಹೀಗೆಲ್ಲಾ ಮಾತನಾಡುವವರಲ್ಲ. ತಮ್ಮೊಂದಿಗೆ ತಾವೇ ಮಾತನಾಡಿಕೊಳ್ಳುವುದೇ ಜಾಸ್ತಿ. ಈಗ ಅನಿರೀಕ್ಷಿತವಾಗಿ ಈ ಸಮಯದೊಂದಿಗೆ ಸಂಬಂಧವೇ ತೊರೆಯುವಂತಾಗಿರುವ ಆ ದುಃಖವನ್ನೂ ಅದರ ಆ ಮುಖದಲ್ಲಿ ಕಾಣಬಹುದು.

ಇದ್ದಕ್ಕಿದ್ದಂತೆ ತಾವು ಅನಾಥರಾದಂತೆ ಅವರಿಗೆ ಭಾಸವಾಗಿರಬೇಕು.

ಆಂಡಪ್ಪನ್ ಹೇಳಿದ ಆ ಮಾತನ್ನೂ ಅವರೊಂದಿಗೆ ಹೇಳುವುದಾದರೂ ಹೇಗೆ? ನಾನು ಕಷ್ಟಪಡುತ್ತಲೇ, ಆದರೆ ವಿನಯದಿಂದಲೇ ಹೇಳಲಾರಂಭಿಸಿದೆ.

"ಆಂಡಪ್ಪನ್ ಈ ಕ್ಲಾಕ್‌ನ ಆಯುಸ್ಸು ಮುಗಿದಿದೆ ಎಂದು ಹೇಳುತ್ತಾನೆ. ಇದರ ಒಂದೊಂದೂ ಪಾರ್ಟ್ ಅನ್ನು ಹಲವಾರು ಬಾರಿ ಬದಲಾಯಿಸಿಯಾಗಿದೆ. ಕಳೆದ ಬಾರಿ ತೆಗೆದುಕೊಂಡು ಹೋದಾಗ ಇನ್ನಿದನ್ನು ಈ ಜನ್ಮದಲ್ಲಿ ತನ್ನ ಕೈಯಿಂದ ಮುಟ್ಟುವುದಿಲ್ಲವೆಂದು ಹೇಳಿದ್ದನು."

"ಹಾಗೇನು? ಪರವಾಗಿಲ್ಲವಲ್ಲಾ?" ತಂದೆಯವರು ನಗುತ್ತಾ ಹೇಳಿದರು. "ಏನಂತೆ ಆ ಮಹಾಪುರುಷನಿಗೇ? ಅವನಿಗೆ ಹಾಗೇಕೆ ತೋಚಿತಂತೆ? ವಯಸ್ಸಾಗಿದೆ ಅದಕ್ಕೆ ಎಂದು ತೆಗೆದು ಎಸೆಯಲು ಸಾಧ್ಯವೇನು? ದುಡ್ಡು ಬಿಸಾಕಿದರೆ ಪೇಟೆಯಿಂದ ಹೊಸದೊಂದನ್ನು ಕೊಂಡುಕೊಳ್ಳಲು ಸಾಧ್ಯ. ಆದರೆ ಹಾಗೆ ಮಾಡುವುದು ಸರಿ ಎನ್ನಿಸಿಕೊಳ್ಳುತ್ತೇನು? ಸಾಧ್ಯವಾದಷ್ಟು ದಿನ ಈ ಕ್ಲಾಕ್ ಅನ್ನು ನೋಡೋಣ. ಅದಕ್ಕೆ ಚಿಕಿತ್ಸೆ ಮಾಡೋಣ. ಅದಕ್ಕೆ ಶುಶ್ರೂಷೆ ಮಾಡೋಣ. ಪಾರ್ಟ್‌ಗಳನ್ನು ತೆಗೆದು ಹಾಕಿ, ಬದಲಾಯಿಸಿ ಅಥವಾ ಇನ್ನಾವು ದಾದರೂ ಸೇರಿಸಿ ಹಾಕಿ, ಹಾಗೆ ಏನು ಬೇಕೋ ಹಾಗೆಲ್ಲ ಮಾಡೋಣ. ಒಬ್ಬ ಮಾಡಲಾಗುವುದಿಲ್ಲ ಎಂದರೆ ಬೇರೊಬ್ಬನಿಗೆ ತೆಗೆದುಕೊಂಡು ಹೋಗಿ ತೋರಿಸೋಣ. ಹಾಗೆ ಅದಕ್ಕೇನಾದರೊಂದು ಏರ್ಪಾಡು ಮಾಡೋಣ."

"ತೋರಿಸಿದರೆ ನೋಡಿ ರಿಪೇರಿ ಮಾಡಲು, ಈ ಟೌನ್‌ನಲ್ಲಿ ಆಂಡಪ್ಪನ್ ಅಲ್ಲದೆ ಬೇರೆ ಯಾರಿದ್ದಾರಪ್ಪ? ಇರುವವರಲ್ಲಿ ಅವನೇ ಉತ್ತಮ."

"ಹಾಗಾದರೆ ನನ್ನ ಕಾಲ ಮುಗಿಯುವ ವರೆಗಾದರೂ ಈ ಕ್ಲಾಕ್‌ಗೆ ಆಯುಸ್ಸು ಕೊಡಬೇಕೆಂದು ಬೇಡಿಕೊಳ್ಳೋಣ. ಒಂದು ನಿಮಿಷ ಸಹ ಹೆಚ್ಚು ಆ ಕ್ಲಾಕ್ ನಡೆಯಬೇಕಿಲ್ಲ ಎಂದೂ ಹೇಳೋಣ. ನಾನು ಹೋಗುವುದೂ ಕ್ಲಾಕ್ ನಿಲ್ಲುವುದೂ ಒಂದೇ ಸಲವಾಗಲಿ. ಅವನೂ ಒಬ್ಬ ಬ್ರಹ

...ನಲ್ಲವೇ? ಅವನು ಮಾಡಬೇಕೆಂದುಕೊಂಡರೆ ಒಂದು ದಾರಿ ತೋರದಿರುತ್ತದೆಯೇ?

"ನಾನು ಹೇಳಿ ನೋಡುತ್ತೇನೆ. ಸರಿಯಾಗುತ್ತೋ ಇಲ್ಲವೋ ಗೊತ್ತಿಲ್ಲ." ನನ್ನ ಮಾತಿನಲ್ಲಿ ನನಗೇ ನಂಬಿಕೆ ಇರಲಿಲ್ಲ.

ತಂದೆಯವರ ಮುಖ ಮಂಕಾಯಿತು.

"ಸರಿಯಾಗುತ್ತೆ. ಸರಿಯಾಗದೆ ಖಂಡಿತ ಇರುವುದಿಲ್ಲ. ಈ ಕ್ಲಾಕ್ ನಡೆಯದೇ ಹೋದಾಗೆಲ್ಲಾ ನಾನು ಇಂಚಿಂಚಾಗಿ ಸಾಯುತ್ತಿರುತ್ತೇನೆಂದು ಅವನಿಗೆ ಹೇಳು. ಆದರೆ ಸಂಪೂರ್ಣವಾಗಿ ಅದು ನಡೆಯುವುದಿಲ್ಲ. ಅದಕ್ಕೇ ಇಷ್ಟು ಕಷ್ಟ ಆಗುತ್ತಾ ಇರೋದು."

ನಾನು ಮರು ಮಾತನಾಡದೆ ತಲೆ ಆಡಿಸಿ ಸೈಕಲ್ ಹತ್ತಿ ಮನೆ ಬಿಟ್ಟಾಗ ನನ್ನ ಮನಸ್ಸಿನಲ್ಲಿ ಆಂಡಪ್ಪನೊಂದಿಗೆ ಇದನ್ನು ಹೇಗೆ ಹೇಳಿ ಒಪ್ಪಿಸುವುದೆಂಬ ತರ್ಕ ನಡೆಯುತ್ತಿತ್ತು.

ನಾನು ಅಂದುಕೊಂಡಂತೆಯೇ ಆಯಿತು.

ನನ್ನನ್ನು ಕಂಡೊಡನೆಯೇ ಆಂಡಪ್ಪನ್‌ನ ಮುಖ ವಿವರ್ಣವಾಯಿತು. ಅವನು ತಲ್ಲಣಿಸುತ್ತಾ ಕುರ್ಚಿಯಿಂದ ಛಂಗನೆ ಎದ್ದನು.

"ಏನಾಯಿತು ಆಂಡಪ್ಪ?" ನಾನು ಭಯದಿಂದ ಕೇಳಿದೆ.

"ನಾನು ಅಂಗಡಿ ಮುಚ್ಚಿ ಮನೆಗೆ ಹೋಗುತ್ತಿದ್ದೇನೆ. ಮೇಷ್ಟ್ರೆ" ಅವನು ಗಟ್ಟಿಯಾದ ದನಿಯಲ್ಲಿ ಹೇಳಿದನು. "ಇಂದು ಅಂಗಡಿಗೆ ರಜ."

"ಏಕೆ?"

"ನಿಮ್ಮ ಕೈಯಲ್ಲಿರುವ ಆ ಪೊಟ್ಟಣ ಕಂಡರೇ ನನಗೆ ಹೆದರಿಕೆಯಾಗುತ್ತೆ."

ನನ್ನ ಮನಸ್ಸು ಕದಡಿತು. ಹೇಗೆ ಇವನಿಗೆ ವಿವರವಾಗಿ ಹೇಳಿ ಒಪ್ಪಿಸುವುದು?

"ನೋಡು ಆಂಡಪ್ಪ, ತಂದೆಯವರ ವಿಷಯ ನಿನಗೆ ಗೊತ್ತಿಲ್ಲ, ಈ ಸಲ ಮಾತ್ರ ನೀನು ಸಹಾಯ ಮಾಡಲೇಬೇಕು. ಬಹುಶಃ ಇಲ್ಲಿಗೆ ಇದು ಮುಗಿಯುತ್ತೆಂದು ತೋರುತ್ತೆ."

"ಇಲ್ಲ ಮೇಷ್ಟ್ರೇ ಹೋದ ಸಲವೂ ನೀವು ಹೀಗೇ ಹೇಳಿದಿರಿ. ಆಗ ನಾನು ಕೊನೆಯದಾಗಿ ಏನು ಹೇಳಿದೆನೆಂದು ನಿಮಗೆ ಜ್ಞಾಪಕ ಇದೆಯೇ?"

"ಅದೆಲ್ಲಾ ಸರಿಯೇ ಆಂಡಪ್ಪಾ, ನಮ್ಮಲ್ಲಿ ಯಾರ ಕೈಯಲ್ಲಾದರೂ ಮನುಷ್ಯನ ಆಯುಸ್ಸು ಇರುತ್ತೆಯೇ? ಎಲ್ಲದಕ್ಕೂ ಅದರದೇ ಆದ ಒಂದು ಸಮಯ, ಸಂದರ್ಭ ಇರುತ್ತಲ್ಲವೇ?"

"ಮೇಷ್ಟ್ರೇ ಹಾಗಾದರೆ ನನ್ನನ್ನೇನು ಮಾಡೆನ್ನುತ್ತೀರಿ! ಎಲ್ಲ ಕಸುಬಿನಲ್ಲೂ ಅದರದೇ ಆದ ಕೆಲ ರೀತಿ ನೀತಿಗಳಿವೆ. ಆ ಸತ್ತ ಕ್ಲಾಕ್‌ಗೆ ಜೀವವನ್ನು ಕೊಡಲು ನಾನು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗುತ್ತಿಲ್ಲ."

"ಅಪ್ಪ ಹೇಳುತ್ತಾರೆ ಮತ್ತೆ ನೀನು ಬ್ರಹ್ಮ ಅಂತ."

"ನಾನು ಬ್ರಹ್ಮನೂ ಅಲ್ಲ, ಈಶ್ವರನೂ ಅಲ್ಲ. ಏನೇ ಆದರೂ ನನ್ನಿಂದ ಈ ಕೆಲಸ ಸಾಧ್ಯವಿಲ್ಲ. ಆಸ್ಪತ್ರೆಯಲ್ಲಿ ಕೆಲ ಡಾಕ್ಟರ್‌ಗಳು ಕೆಲ ಕೇಸುಗಳನ್ನು ವಾಪಸ್ ಕಳುಹಿಸುವುದಿಲ್ಲವೇ? ಇದೂ ಅದರಂತಹ ಒಂದು ಕೇಸೆಂದು ಭಾವಿಸಿದರೆ ಸಾಕು. ಇನ್ನೊಂದು ವಿಷಯ ಹೇಳುತ್ತೇನೆ ಮೇಷ್ಟ್ರೆ, ಜ್ಞಾಪಕ ಇಟ್ಟುಕೊಳ್ಳಿ, ನಾನು ವಾಪಸ್ ಕಳುಹಿಸಿದ

ಕೇಸನ್ನು ತೆಗೆದುಕೊಳ್ಳಲು, ಈ ಟೌನ್‌ನಲ್ಲಿ ಅಂತಲ್ಲ, ದೊಡ್ಡ ಬಿಗ್‌ಬೆನ್ ಕಂಪೆನಿಯವರೂ ಸಹ ತಯಾರಿಲ್ಲ. ಅವರು ಹೇಗೆ ಕೂಡಿಸಲು ನೋಡಿದರೂ ಅದು ರಿಪೇರಿ ಆಗುವುದಿಲ್ಲ."

"ಆದರೂ ಅಂಡಪ್ಪ .... ನಾನು ಇನ್ನೊಮ್ಮೆ ಬೇಡಿಕೊಳ್ಳುತ್ತೇನೆ. ಇನ್ನು ನಾನು ಬರುವುದಿಲ್ಲ. ಖಂಡಿತವಾಗಿ ಹೇಳುತ್ತಿದ್ದೇನೆ."

"ಮೇಸ್ತ್ರೀ, ಇದನ್ನು ಬಿಟ್ಟು ಬೇರೇನನ್ನು ಬೇಕಾದರೂ ಹೇಳಿ, ನಾನು ಖಂಡಿತ ಮಾಡುತ್ತೇನೆ. ಆದರೆ ಮುಕ್ಕಾಲು ಪಾಲು ಜೀವ ಕಳೆದುಕೊಂಡ ಒಂದು ವಸ್ತುವನ್ನು ಕತ್ತರಿಸಿ ತೆಗೆದು ನೋಡಲು ನನ್ನಿಂದ ಸಾಧ್ಯವಿಲ್ಲ. ಈ ವಸ್ತು ಅದರಲ್ಲಿ ಬೇರೆ ತರಹದ್ದು."

ಆಕ್ಷಣ ನಾನೂ ಹೊರಟುಬಿಡಬಹುದಿತ್ತು. ಆದರೂ ತಂದೆಯವರ ಆ ಕಣ್ಣುಗಳು—ನಿದ್ದೆಯಿಲ್ಲದೆ ಕೆಂಪಗೆ ಊದಿದ್ದ ಕಣ್ಣುಗಳು—ಉಬ್ಬಿರುವ ಆ ಕಣ್ಣುಗಳ ಕಪ್ಪಾದ ಕೆಳಭಾಗ, ಇವುಗಳನ್ನು ನೆನೆದು ನಾನು ಮತ್ತೆ ಅಂಡಪ್ಪನೊಂದಿಗೆ ಬೇಡಿಕೊಳ್ಳತೊಡಗಿದೆ.

ಕೊನೆಗೆ ಬಹು ಕೋಪದಿಂದ ಅಂಡಪ್ಪನು ಅಂಗಡಿಯ ಹಲಗೆಗಳನ್ನು ಎಳೆದು ಕೆಳಗಿಟ್ಟಾಗ ನಾನು ಮೂರ್ಖನಂತೆ ದಿಗ್ಭ್ರಾಂತನಾಗಿ ನಿಂತೆ. ಅನಂತರ ಅಂಡಪ್ಪನ್ ಹಲಗೆಗಳ ಹಿಂದೆನಿಂತು ತೆರೆಮರೆಯ ದೇವರಂತೆ ಹೇಳತೊಡಗಿದ:

"ಹೋಗಿ ಮೇಸ್ತ್ರೀ, ಸುಮ್ಮನೆ ನಿಂತು ನನ್ನ ಸಮಯ ವ್ಯರ್ಥಮಾಡಬೇಡಿ. ನಾನು ಅಂದೇ ಹೇಳಲಿಲ್ಲವೇ? ಇದು ನಮ್ಮ ಕೈಯಲ್ಲಿ ನೀಗುವಂತಹ ವಸ್ತುವಲ್ಲ. ಪೂರ್ವಜನ್ಮದಿಂದ ಜಾರಿ ಬಿದ್ದಿರುವ ಪಾರ್ಟ್ ಇದು. ನನ್ನ ಕೈಯಲ್ಲಿರುವ ಪಾರ್ಟ್‌ಗಳ್ಯಾವುದೂ ಅದಕ್ಕೆ ಹಿಡಿಯುತ್ತಿಲ್ಲ. ಅದಕ್ಕೇ ಆ ಕ್ಲಾಕ್ ಅನ್ನು ನೋಡುವಾಗಲೆಲ್ಲ ನನಗೆ ಹೆದರಿಕೆಯಾಗುತ್ತೆ."

ನಾನು ಅಲ್ಲಿ ನಿಲ್ಲದೆ ಹೊರಬಿದ್ದೆ.

ಕ್ಲಾಕ್‌ನ ಪೊಟ್ಟಣವನ್ನು ಸೈಕಲ್ ಕ್ಯಾರಿಯರ್‌ನ ಮೇಲಿಟ್ಟು ಕ್ಲಿಪ್ ಹಾಕಿ ಬೆವರು ಸುರಿಸುತ್ತಾ ಸೈಕಲ್ ತುಳಿಯುತ್ತಾ ಹೋಗುತ್ತಿದ್ದಾಗ, ಇಂತಹದೇ ಒಂದು ಸುಡುತ್ತಿರುವ ಬಿಸಿಲುಳ್ಳ ಹಗಲಿನಲ್ಲಿ ಆಸ್ಪತ್ರೆಯ ಕೋಣೆಯ ಬಾಗಿಲುಗಳು ತಂದೆಯ ಬೆನ್ನ ಹಿಂದೆ ದೊಡ್ಡ ಶಬ್ದದೊಂದಿಗೆ ಮುಚ್ಚಿಕೊಂಡದ್ದು ನನಗೆ ನೆನಪಿಗೆ ಬಂತು.

ಮನೆ ಮುಟ್ಟಿದೊಡನೆಯೇ ನಾನು ಆ ಕ್ಲಾಕ್ ಅನ್ನು ಮತ್ತೆ ಆ ಹಳೆಯ ಮೂಲೆಗೇ ನೇತುಹಾಕಿ ತಂದೆಯವರ ಕೋಣೆಗೆ ಹೋದೆ.

ತಂದೆಯವರಿಗೆ ಜೋಂಪು ಹತ್ತಿದಂತಿತ್ತು. ನನ್ನ ಹೆಜ್ಜೆಯ ದನಿ ಕೇಳಿದೊಡನೆಯೇ ಅವರು ಬೆಚ್ಚಿ ಬಿದ್ದು ಎಚ್ಚೆತ್ತು ಅರ್ಧ ಎಚ್ಚರದಲ್ಲೇ ಕೇಳಿದರು.

"ಗಂಟೆ ಎಷ್ಟು?"

"ಹನ್ನೆರಡೂವರೆ"

"ಕ್ಲಾಕ್ ಕೊಟ್ಟೆಯೋ?"

"ಕೊಟ್ಟೆ. ಆದರೆ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ಬಿಟ್ಟ ಅಂಡಪ್ಪನ್."

"ಅಂಡಪ್ಪನಿಗೆ ಸಾಕಾಗಿರಬೇಕು ಅಲ್ಲವೇ?"

"ಆ...."

"ಸರಿ ಅನ್ನು, ಎಲ್ಲರಿಗೂ ಒಂದಲ್ಲ ಒಂದು ವಿಧದಲ್ಲಿ ಸಾಕಾಗಿ ಹೋಗುತ್ತೆ ಅಂತ ನಾನು ತಿಳಿಯಬೇಕಿತ್ತು."

ಹೊರಗೆ ಹೋಗಲು ಹೊರಟಿದ್ದ ನಾನು ತಿರುಗಿನಿಂತು ಹೇಳಿದೆ :

"ಪರವಾಗಿಲ್ಲ ಬಿಡಿ ಅಪ್ಪಾ. ಹೊಸ ಕ್ಲಾಕ್ ಒಂದನ್ನು ಕೊಂಡುಕೊಳ್ಳೋಣ. ಒಂದು ಕ್ವಾರ್ಟ್ಸ್ ಗಂಟೆ ಹೊಡೆಯುವಂತಹುದನ್ನೇ ತೆಗೆದುಕೊಳ್ಳೋಣ. ಸಮಯವನ್ನು ನಿಖರವಾಗಿ ತೋರಿಸುವಂತಹುದನ್ನೇ ನೋಡಿ ತೆಗೆದುಕೊಳ್ಳೋಣ.'

"ಬೇಡ ಮಗು"

"ಯಾಕಪ್ಪ ?"

"ಆ ಮೊಳೆಗೆ ಇನ್ನು ಬೇರೊಂದು ಕ್ಲಾಕ್ ಬೇಡ."

"ಬೇಡ ಬಿಡಿ ಅಪ್ಪ ಬೇರೆ ಕಡೆ ಮೊಳೆ ಹೊಡೆಯೋಣ."

"ಅದಕ್ಕೆ ಅಂತ ಅಲ್ಲ, ಬೇಡ ಅಷ್ಟೆ."

"ಹಾಗಾದರೆ ಸಮಯ ತಿಳಿದು ಕೊಳ್ಳೋದು ಬೇಡವೇನಪ್ಪ ?"

"ಸಮಯ ತಿಳಿದುಕೊಳ್ಳೋದೇ ಬೇಡ ಅಂತ ಅಂದುಕೊಂಡರೆ ಸಾಕು."

"ಏನಪ್ಪಾ ಇದು, ಚಿಕ್ಕ ಮಕ್ಕಳಂತೆ ಹಟಮಾಡುತ್ತೀರಿ ?

"ನಾನೀಗ ಚಿಕ್ಕ ಮಗುವೇ ಅಲ್ಲವೇ ? ಇದು ಎರಡನೇಯ ಬಾಲ್ಯವಲ್ಲವೇ ?

ಅನಂತರ ತಲೆದಿಂಬಿಗೆ ಒರಗಿಕೊಂಡು ದೂರದಲ್ಲೆಲ್ಲೋ ಕಣ್ಣು ನೆಟ್ಟು ತಂದೆಯವರು ಮೆಲ್ಲನೆ ಹೇಳತೊಡಗಿದರು.

"ಅಂಡಪ್ಪನ್ ಹೇಳಿದ್ದು ಸರಿಯೇ. ನಾನು ಪೆದ್ದನಂತೆ ಆಡುತ್ತಿದ್ದೀನಲ್ಲವೇ ? ಆದಿಯೂ ಅಂತ್ಯವೂ ಇಲ್ಲದೆ ನಡೆಯುತ್ತಿರುವ ಈ ಸಮಯವನ್ನು ತಡೆದು ನಿಲ್ಲಿಸಲು ನಾವು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಿಲ್ಲ. ಹೋಗಲಿ ಅಂದರೆ, ಅದನ್ನು ಅಳೆದು ತುಂಡು ತುಂಡುಮಾಡುವುದು ಅರ್ಥಹೀನ ಕೆಲಸವಷ್ಟೆ. ಅಲ್ಲವೇ. ನಾವು ಸಮಯದೊಂದಿಗೇ ಚಲಿಸುವುದು ಒಳ್ಳೆಯದು. ಚಲಿಸುತ್ತಾ, ಚಲಿಸುತ್ತಾ, ಎಲ್ಲಾದರೊಂದು ಕಡೆ ದಡ ಕಂಡು ಬಂದು ನಿಲ್ಲಬೇಕಾಗಬಹುದು. ಅಲ್ಲಿಯವರೆಗೂ ಚಲಿಸಲೇಬೇಕು. ನೀನು ಕ್ಲಾಕ್ ಅನ್ನು ಎಲ್ಲೂ ರಿಪೇರಿಗೆ ಕೊಡಬೇಡ ?" ಕಣ್ಣು ಮುಚ್ಚಿ ಅಂಗಾತವಾಗಿ ಮಲಗಿ.... ಹಾಗಲ್ಲವೇ ಮಗು ?...." ತಂದೆಯ ಧ್ವನಿ ಗದ್ಗದವಾಯಿತು. ಕಣ್ಣುಗಳು ನೀರಿನಿಂದ ತುಂಬಿದವು.

ನಾನು ಮಾತನಾಡಲಿಲ್ಲ. ನಾನು ಹೇಳಲು ಏನೂ ಇರಲಿಲ್ಲ. ಆ ಹಳೆಯ ಕ್ಲಾಕ್‌ನ ಧೂಳು ಹಿಡಿದು ಹಳೆಯದಾಗಿ ಹೋದ ಕಿಲುಬು ಹಿಡಿದ ಅಚಲವಾಗಿ ನಿಂತಿದ್ದ ಅದರ ಹಿತ್ತಾಳೆ ನಾಲಗೆಯನ್ನು ನೋಡಿದಾಗ ಮಾತೇ ನಿಂತುಹೋದಂತೆ, ನನ್ನ ನಾಲಿಗೆ ಸೇದು ಹೋದಂತಾಗಿತ್ತು.

ಎರಡು ಕೈಗಳು ಕೂಡಿದಾಗ

ಗೋಪಾಲ ಆಶ್ರಿತ
ರಮಾ ನಿಲಯ
ಜವಹರ್‌ನಗರ
ರಾಯಚೂರು–೫೮೪ ೧೦೧

ನಮ್ಮ ಕೈ ಬೆರಳುಗಳು ಇನ್ನೊಬ್ಬ ವ್ಯಕ್ತಿಯ ಕೈಗಳಲ್ಲಿ ಸೇರಿದಾಗ ಒಂದು ಅತಿ ಸರಳ ಸದ್ಭಾವನೆಯು ಉಗಮವಾಗಿರುತ್ತದೆ. ಆದರೆ ಈ ಸರಳ ಹಸ್ತ ಲಾಘವದಲ್ಲಿ ಇಂಥ ಶಕ್ತಿಯಿದೆ ಎಂಬುದು ನಮ್ಮಲ್ಲಿ ಅನೇಕರ ಗಮನಕ್ಕೆ ಬರುವುದಿಲ್ಲ. ೧೯೫೮ರ ಚಳಿಗಾಲದ ಒಂದು ದಿನ ನನಗೆ ಇದರ ಶಕ್ತಿಯ ಅನುಭವವಾಯಿತು.

ಎಲಿನರ್ ಡೌಲಿಂಗ್ ಎಂಬ ಒಬ್ಬ ತರುಣಿಯ ಜೊತೆಗಿನ ನನ್ನ ಸ್ನೇಹ ಗಾಢವಾಗುವ ಹಂತದಲ್ಲಿತ್ತು. ಇತಿಹಾಸ ಮತ್ತು ಪ್ರಚಲಿತ ವಿದ್ಯಮಾನಗಳ ಬಗ್ಗೆ ನಮ್ಮಿಬ್ಬರಿಗೂ ಬಹಳ ಆಸಕ್ತಿಯಿತ್ತು. ಒಂದು ಶುಕ್ರವಾರದಂದು ಎಲಿನರ್ ರೂಸ್‌ವೆಲ್ಟ್‌ಳ ಭಾಷಣವಿದೆ ಎಂದು ತಿಳಿದಾಗ, ನಮ್ಮಿಬ್ಬರಿಗಾಗಿ ಬಾಗಿಲ ಹತ್ತಿರದ ಕೊನೆಯ ಎರಡು ಸೀಟುಗಳನ್ನು ಕಾಯ್ದಿರಿಸಿದೆ. ಈ ವಿಷಯವನ್ನು ಅವಳಿಗೆ ಹೇಳಿದಾಗ ಅವಳು ಸಂತೋಷಪಟ್ಟಳು. ನಮ್ಮ ಕುಟುಂಬಕ್ಕೆ ಪರಿಚಿತನಾಗಿದ್ದ ವಿಲಿಯಮ್ ಎಡ್ವರ್ಡ್ ಎಂಬ ನ್ಯಾಯವಾದಿ ಅಂದು ಮಧ್ಯಸ್ಥಗಾರನಾಗಿದ್ದನು. ನಾನು "ಎಲಿನರ್, ನಿನ್ನನ್ನು ಎಲಿನರ್ ರೂಸವೆಲ್ಟ್‌ಗೆ ಪರಿಚಯಿಸುವೆ" ಎಂದು ಹೇಳಿದೆ.

ಆದರೆ ಅಂದು ಬಹಳ ಜನ ಸೇರಿದ್ದರು. ನಾವೆಲ್ಲ ಅವಳನ್ನು ಸುತ್ತುವರಿದಿದ್ದೆವು. ಆದರೆ ಬಿಲ್ ನನ್ನನ್ನು ನೋಡಿದ. ಅವನು ಆ ಮಾಜಿ ಪ್ರಥಮ ಮಹಿಳೆಯನ್ನು ನಮ್ಮ ಕಡೆಗೆ ಕರೆದುತಂದ. "ಮಿಸೆಸ್ ರೂಸ್‌ವೆಲ್ಟ್, ನಿಮ್ಮನ್ನು ನನ್ನ ಕುಟುಂಬದ ಗೆಳೆಯ ಹಾಗೂ ಬ್ರೌನ್ ಯೂನಿವರ್ಸಿಟಿಯ ವಿದ್ಯಾರ್ಥಿಯಾದ ಕೆನ್ನೆತ್ ಗಿಲ್ಮೊರನ ಜೊತೆ ಪರಿಚಯ ಮಾಡಿಕೊಡುವೆ" ಎಂದನು. ಅವಳು ತನ್ನ ಉದ್ದವಾದ ಕೈ ಚಾಚಿ ನನ್ನ ಕೈ ಕುಲುಕಿದಳು. "ಮಿಸೆಸ್ ರೂಸ್‌ವೆಲ್ಟ್, ನಿಮ್ಮ ಪರಿಚಯ ನನಗೆ ಸಂತೋಷ ತಂದಿದೆ. ನಿಮ್ಮ ಅಭಿಮಾನಿಗಳಲ್ಲೊಬ್ಬಳಾದ ಎಲಿನರ್ ಡೌಲಿಂಗ್ ಜೊತೆ ನಿಮ್ಮ ಪರಿಚಯ ಮಾಡಿ ಕೊಡಬಹುದೆ?" ಎಂದೆ. "ಗುಡ್ ಈವಿನಿಂಗ್ ಎಲಿನರ್....ಇಬ್ಬರು ಎಲಿನರ್‌ಗಳು ಈ ಸಂಜೆ ಭೇಟಿಯಾದದ್ದು ಒಳ್ಳೆಯದು" ಎಂದು

ಆಧಾರ: ೧೯೯೬ನೇ ಡಿಸೆಂಬರ್‌ನ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾದ ಕೆನೆಥ್ ಗಿಲ್ಲಮೋರ್ ಅವರ "ವೆನ್ ಟೂ ಹ್ಯಾಂಡ್ಸ್ ಮೀಟ್" ಲೇಖನ.

ಶ್ರೀಮತಿ ರೂಸ್‌ವೆಲ್ಟ್ ಅಂದಳು. ಅವರಿಬ್ಬರೂ ಆತ್ಮೀಯತೆಯಿಂದ ಕೈ ಕುಲುಕಿಸಿದರು. ಆ ಸಭಾಭವನದಿಂದ ಹೊರಗೆ ಬರುತ್ತಿದ್ದಂತೆ ಎಲಿನರ್ ಡೌಲಿಂಗ್ "ನಾನು.... ಎಲಿನರ್ ರೂಸ್‌ವೆಲ್ಟ್ ಜೊತೆ ಕೈ ಕುಲುಕಿಸಿದ್ದೇನೆಂಬುದು ನನಗೆ ನಂಬಲಾಗುತ್ತಿಲ್ಲ! ನಂಬಲಾಗುತ್ತಿಲ್ಲ!" ಎಂದು ಮತ್ತೆ ಮತ್ತೆ ಅನ್ನುತ್ತಿದ್ದಳು.

ಆ ಭದ್ರವಾದ ಕೈಗಳ ಸ್ಪರ್ಶದಲ್ಲಿ ನಮ್ಮ ವೈಶಿಷ್ಟ್ಯ ಅಡಗಿತ್ತೆಂಬ ಭಾವನೆ ನನಗೆ ಬಂತು. ಅಂದಿನಿಂದ ನನ್ನ ದೃಷ್ಟಿಯಲ್ಲಿ ಎಲಿನರ್ ರೂಸ್‌ವೆಲ್ಟ್ ಬಗೆಗಿನ ಅಭಿಪ್ರಾಯ ಬೇರೆಯೇ ಆಯಿತು.

ಮೊದಲ ಸ್ಪರ್ಶ: ಎರಡು ಕೈಗಳು ಕೂಡಿದಾಗ, ನಮ್ಮೊಳಗಿನ ಒಂದು ಯಾವುದೋ ವಸ್ತುವನ್ನು ಇನ್ನೊಬ್ಬರಿಗೆ ಕೊಟ್ಟುಬಿಡುತ್ತೇವೆ. ಅಂಧಳು ಹಾಗೂ ಕಿವುಡಿಯಾಗಿದ್ದ ಹೆಲನ್ ಕೆಲ್ಲರಳು ಮಾರ್ಕ್‌ಟ್ವೈನನ ಜೊತೆ ಕೈ ಕುಲುಕಿಸಿದಾಗ ಅವಳು "ಆತನ ಈ ಸ್ಪರ್ಶದಲ್ಲಿ ಅವನ ಕಣ್ಣುಗಳಲ್ಲಿನ ಹೊಳಪಿನ ಅನುಭವ ನನಗಾಯಿತು" ಎಂದಳು. ಒಂದು ಅವ್ಯಕ್ತ ರೀತಿಯಲ್ಲಿ ಮಾರ್ಕ್‌ಟ್ವೈನ್ ತನ್ನ ಆಕರ್ಷಕ ವ್ಯಕ್ತಿತ್ವವನ್ನು ಹೊರಗೆಡಹಿದ್ದ.

ಈ ಹಸ್ತಲಾಘವ ಹೇಗೆ ಮತ್ತು ಎಲ್ಲಿ, ಯಾವಾಗ ಹುಟ್ಟಿತೆಂಬುದು ಯಾರಿಗೂ ನಿಖರವಾಗಿ ಹೇಳಲಾಗುತ್ತಿಲ್ಲವಾದರೂ, ಈ ರೀತಿ ಕೈಗಳ ಸ್ಪರ್ಶದಿಂದ ಒಬ್ಬ ವ್ಯಕ್ತಿ ನಿವೇದನೆ ಮಾಡಲು ಸಾಧ್ಯವೆಂಬುದು ಮಾತ್ರ ಸತ್ಯ. ಹಿಂದೆ ಒಬ್ಬ ಮನುಷ್ಯ ಅಪರಿಚಿತ ವ್ಯಕ್ತಿಯೊಬ್ಬನನ್ನು ಎದುರಿಸಿದಾಗ, ತನ್ನ ಕೈಯಲ್ಲಿ ಯಾವ ಅಸ್ತ್ರವಿಲ್ಲವೆಂದು ತೋರಿಸಲು ತನ್ನ ಕೈಯನ್ನು ಎತ್ತಿ ಹಿಡಿಯುತ್ತಿದ್ದ. ಬಹುಶಃ ಇದರ ಮೂಲಕವೇ ಹಸ್ತಲಾಘವ ಬೆಳೆದು ಬಂದಿರಬೇಕೆಂದು ಸಾಮಾನ್ಯವಾಗಿ ವಿವರಿಸಲಾಗುತ್ತದೆ. ಹಸ್ತಲಾಘವದ ಇತಿಹಾಸ ಬರೆಯುತ್ತಿರುವ ಬ್ರಿಯಾನ್ ಚಾರ್ಲ್ಸ್ ಬರ್ಕ್ ಈ ವಿವರಣೆಯನ್ನು ಒಪ್ಪುತ್ತಿಲ್ಲ. "ಈ ವಿಚಾರ ಜನಪ್ರಿಯವಾದದ್ದು ಮತ್ತು ಮುಂದುವರಿದದ್ದು ೧೯ನೇ ಶತಮಾನದಲ್ಲಿ" ಎಂದು ಅವನ ವಾದ. ಫಿಲಡೆಲ್ಫಿಯದ ಈ ಇತಿಹಾಸಕಾರನ ಪ್ರಕಾರ ಹಸ್ತಲಾಘವವೆಂದರೆ ನಿಮ್ಮ ಉಸಿರಿನ ಹಿಂದೆ ನಿಮ್ಮ ರಕ್ತವನ್ನಿಟ್ಟಂತೆ" ಎಂದು ಹೇಳಿದ್ದಾನೆ. ಪುರಾತನ ಕಾಲದ ಜನರು ಕೇವಲ ಆಡಿದ ಮಾತನ್ನು ನಂಬುತ್ತಿರಲಿಲ್ಲವಾದ್ದರಿಂದ, ಜನರು ಹಸ್ತದ ಬಿಗಿಹಿಡಿತದ ಮೂಲಕ, ತಮ್ಮ ವಚನದ ಹಿಂದೆ ಹೃದಯದ ಬೆಂಬಲ—ಅಂದರೆ ತಮ್ಮ ರಕ್ತವಿದೆಯೆಂದು ವಿಶ್ವಾಸ ಸೂಚಿಸುತ್ತಿದ್ದರೆಂದು ಅವನು ವಿವರಿಸಿದ್ದಾನೆ. ಈ ರೀತಿಯಾಗಿ ಹಸ್ತಲಾಘವವೆಂಬುದು ವಿಶ್ವಾಸದ ಸಂಕೇತವಾಯಿತು.

ರಾಜಿ ಮಾಡುವಲ್ಲಿ ಅಥವಾ ವಿಶ್ವಾಸ ಸಂಬಂಧ ಬೆಳೆಸುವಲ್ಲಿ ಕೂಡಾ ಹಸ್ತಲಾಘವದ ಚರಿತ್ರೆ ಸಾಕಷ್ಟು ಶ್ರೀಮಂತವಾಗಿದೆ. ರೋಮಿನ ಸಹ ಚಕ್ರವರ್ತಿಗಳಾಗಿದ್ದ ಬಾಲ್ಬಿನಸ್ ಮತ್ತು ಪುಪಿನೆಸ್ ಮ್ಯಾಗ್ಸಿಮಸ್ ತಮ್ಮಲ್ಲಿ ಸಾಮರಸ್ಯವಿದೆ ಎಂಬುದನ್ನು ಸೂಚಿಸಲು ಕ್ರಿ.ಶ. ೨೩೮ರಲ್ಲಿ ನಾಣ್ಯದ ಮೇಲೆ ಹಸ್ತಲಾಘವವನ್ನು ಟಂಕಿಸಿದ್ದರು. ಒಂದು ಅಪರೂಪದ ನಾಣ್ಯದ ಮೇಲೆ ದಂಪತಿಗಳು ಕೈಕುಲುಕಿಸಿದ್ದನ್ನು ಟಂಕಿಸಲಾಗಿತ್ತು. ಕ್ರಿ.ಶ. ೧೪೫೮ರಲ್ಲಿ

ಚಕ್ರವರ್ತಿ ಅಂಟೊನಿಯಸ್ ಪಯಸ್ಸನ ಮಗಳಾದ ಎರಡನೇ ಫಾಸ್ಟಿನಾ ಮತ್ತು ಮಾರ್ಕಸ್ ಅರೆಲಿಯಸರ ಮದುವೆ ಸಮಾರಂಭದ ಸವಿ ನೆನಪಿಗಾಗಿ ಈ ನಾಣ್ಯವನ್ನು ಟಂಕಿಸಲಾಗಿತ್ತೆಂದು ಭಾವಿಸಲಾಗಿದೆ.

ಹಸ್ತಲಾಘವ ರಾಜಿ ಸೂತ್ರದ ಸಂಕೇತವೆಂಬುದು ಅಮೆರಿಕೆಯ ಚರಿತ್ರೆಯಲ್ಲಿ ಕಾಣಬಹುದಾಗಿದೆ. ೧೭೭೫ರಲ್ಲಿ ಒಂದು ನೆನಪಿನ ಪದಕದ ಮೇಲೆ, ವಿಲಿಯಮ್ ಪೆನ್, ರೆಡ್ ಇಂಡಿಯನ್ ಮುಖಂಡನೊಡನೆ ಮಾಡಿದ ಒಪ್ಪಂದದ ಸಮಯದಲ್ಲಿ ಕೈ ಕುಲುಕಿಸಿದ್ದನ್ನು ಕೆತ್ತಲಾಯಿತು. ಅಲೆಮಾರಿ ಜನಾಂಗದ ಮುಖಂಡರು ವಾಷಿಂಗ್ಟನ್ನಿಗೆ ಬಂದಾಗ ಅಧ್ಯಕ್ಷ ಜೆಫರಸನ್, ಟೇಲರ ಮೂಲಕ ಅವರಿಗೆ ದಿವ್ಯ "ಶಾಂತಿಪದಕ"ಗಳನ್ನು ನೀಡುತ್ತಿದ್ದನು. ಈ ಪದಕದ ಒಂದು ಬದಿಯಲ್ಲಿ ಅಧ್ಯಕ್ಷನ ಚಿತ್ರವಿದ್ದು, ಹಿಂಬದಿಯಲ್ಲಿ ಒಬ್ಬ ಸೈನಿಕ ಹಾಗೂ ರೆಡ್ ಇಂಡಿಯನ್ನರಿಬ್ಬರ ಬಿಗಿ ಹಿಡಿತದ ಕೈಗಳ ಮುದ್ರಿಸಿದ ಚಿತ್ರವಿರುತ್ತಿತ್ತು.

ಜಪಾನ್ ಬೇಷರತ್ತಾಗಿ ಶರಣಾಗತವಾದಾಗ ಎರಡನೇ ಮಹಾಯುದ್ಧ ಕೊನೆಗೊಂಡಿತ್ತು. ೧೯೪೫ರ ಸೆಪ್ಟೆಂಬರ್ ೨೭ರಂದು ಸುಪ್ರೀಮ್ ಕಮಾಂಡರ ಡೌಗ್ಲಾಸ್ ಮೆಕಾರ್ಥರ್ ಅಮೆರಿಕೆಯ ರಾಜದೂತ ಭವನದಲ್ಲಿ ಚಕ್ರವರ್ತಿ ಹಿರೊಹಿಟೊನನ್ನು ಭೇಟಿಯಾದನು. ಹಿರೊಹಿಟೊನನ್ನು ಯುದ್ಧ ಅಪರಾಧಿಯೆಂದು ದೋಷಾರೋಪಣೆ ಮಾಡಲಾಗುತ್ತದೆಂದು ಮಿತ್ರರಾಷ್ಟ್ರಗಳ ನಂಬಿಕೆಯಾಗಿತ್ತು. ಆದರೂ ಮೆಕಾರ್ಥರ್ ಆತನೊಡನೆ ಕೈಕುಲುಕಿಸಿದನು. ಜಪಾನಿನಲ್ಲಿ ಪ್ರಜಾರಾಜ್ಯ ಸ್ಥಾಪಿಸುವ ತನ್ನ ಗುರಿ ಸಾಧಿಸಬೇಕಾದರೆ ಅಪಮಾನಕ್ಕಿಂತಲೂ ಸಮಾಧಾನದ ಸೂತ್ರ ಸರಿಯಾದ ಮಾರ್ಗವೆಂದು ಈ ಕಮಾಂಡರನಿಗೆ ಅನಿಸಿತ್ತು. ಹಸ್ತಲಾಘವದ ಮೂಲಕ ಅವನು ಯಶಸ್ವಿಯಾದನು.

೧೯೭೫ರ ಜುಲೈ ೧೭ರಂದು ಅಂತರಿಕ್ಷದಲ್ಲಿ, ಅಪೊಲೊ ಮತ್ತು ಸೊಯುಜುಗಳ ಮಿಲನದ ಸಮಯದ ಹಸ್ತಲಾಘವ ಬಹಳ ದುಬಾರಿಯಾದದ್ದೆಂದೇ ಹೇಳಬಹುದು. ಈ ಎರಡೂ ಕೋಶಗಳು ಹತ್ತಿರ ಬಂದಾಗ ಅಮೆರಿಕೆಯ ಗಗನಯಾನಿ ಥಾಮಸ್ ಸ್ಟ್ಯಾಫೊರ್ಡ್, ಎರಡೂ ವಾಹನಗಳನ್ನು ಕೂಡಿಸಲು ನಿರ್ಮಿಸಲಾದ ವಿಶೇಷ ಪಥದ ಮೇಲೆ, ಮೆಲ್ಲಗೆ ಹೆಜ್ಜೆ ಇಡುತ್ತ ಸಾಗಿ ಇನ್ನೊಂದು ಕಡೆಯಿಂದ ಬರುತ್ತಿದ್ದ ಸೋವಿಯತ್ ಗಗನಯಾತ್ರಿ ಅಲೆಕ್ಸಿಲಿಯೊನೊವ್'ನ ಚಾಚಿದ ಕೈಯನ್ನು ಭದ್ರವಾಗಿ ಹಿಡಿದುಕೊಂಡನು.

ಈ ಹಸ್ತಲಾಘವಗಳಲ್ಲಿ ಕೂಡಾ ಬೇರೆ ಬೇರೆ ತೆರನಾದ ಶೈಲಿಗಳುಂಟೆಂದು ನಮಗೆ ತಿಳಿದಿದೆ. ಕೆಲವರು ಕೈಕುಲಕಿಸಿದಾಗ ಅವರ ಹಸ್ತ ಬೆವರು ನಿಮ್ಮ ಕೈಗೆ ಹತ್ತುತ್ತದೆ ; ಮತ್ತೆ ಕೆಲವರು ಸಂಕೋಚದಿಂದಲೇ ನಿಮ್ಮ ಹಸ್ತವನ್ನು ಬೇನೆಯಾಗುವಷ್ಟು ಒತ್ತಿಬಿಡುತ್ತಾರೆ. ಇನ್ನೂ ಕೆಲವರು ವಿಚಿತ್ರವಾಗಿ ನಗುನಗುತ್ತ ನಿಮ್ಮ ಹಸ್ತವನ್ನು ಒತ್ತಿ ತಮ್ಮ ಆತ್ಮೀಯತೆ ಪ್ರಕಟಿಸಿ ಅಷ್ಟೇ ಅವಸರದಿಂದ ಹಿಂತೆಗೆದುಕೊಳ್ಳುತ್ತಾರೆ. ಈ ವಿವಿಧ ರೀತಿಯ ಹಸ್ತಲಾಘವಗಳ ಬಗ್ಗೆ ಆಲೋಚಿಸುತ್ತಿದ್ದಂತೆ ನಮಗೆ ಅ

ವ್ಯಕ್ತಿಯ ಇನ್ನೊಂದು ಮುಖದ ಪರಿಚಯವಾಗುತ್ತದೆ. ಆದರೆ ನಾವು ಯಾವಾಗಲೂ ಇದರ ಮೂಲಕ ವಿಶ್ವಾಸವನ್ನು ಕಾಣ ಬಯಸುತ್ತೇವೆ.

ಅಮೆರಿಕೆಯ ರಾಜಕಾರಣಿಗಳ ದೃಷ್ಟಿಯಲ್ಲಿ, ಹಸ್ತಲಾಘವ ಮೊದಲಿನಿಂದಲೂ ಮತದಾರರ ಜೊತೆಗಿನ ತಮ್ಮ ಆತ್ಮೀಯತೆಯ ದ್ಯೋತಕವಾಗಿದೆ. ೧೯೦೭ರ ಹೊಸ ವರ್ಷದ ದಿನದಂದು ೮೫೧೩ ಜನರೊಡನೆ ಸಂತೋಷದಿಂದ ಕೈಕುಲುಕಿಸಿದ ಥಿಯೊಡರ್ ರೂಸ್‌ವೆಲ್ಟ್ ಈ ದಿಶೆಯಲ್ಲಿ ವಿಶ್ವದಾಖಲೆ ಸ್ಥಾಪಿಸಿದನೆನ್ನಬಹುದು.

ಲಿಂಡನ್ ಜಾನ್‌ಸನ್ನನ ವೈಖರಿ ವಿಶಿಷ್ಟವಾಗಿತ್ತು. ಅವನು ಯಾರ ಜೊತೆಗಾದರೂ ಕೈಕುಲುಕಿಸುವ ಮೊದಲು ತನ್ನ ಎಡಗೈಯನ್ನು ಆ ವ್ಯಕ್ತಿಯ ತೋಳಿನ ಮೇಲಿಡುತ್ತಿದ್ದನು ಆತನ ವಿಚಿತ್ರ ವೈಖರಿಗಳನ್ನು ಬ್ಯಾರಿಗೋಲ್ಡ್‌ವಾಟರ್ "ಅರ್ಧ ಜಾನ್‌ಸನ್" ಮತ್ತು "ಪೂರ್ಣ ಜಾನ್‌ಸನ್" ಎಂದು ವಿವರಿಸುತ್ತಿದ್ದನು. "ಆತನು ನನ್ನ ಕಛೇರಿಗೆ ಬಂದರೆ, ನಾನು ಆ 'ಫುಲ್ ಜಾನ್‌ಸನ್ನನ್ನು' ತಪ್ಪಿಸಲು ನಮ್ಮಿಬ್ಬರ ಮಧ್ಯೆ ಒಂದು ಮೇಜು ಇಡಿಸಿರುತ್ತಿದ್ದೆ." ಎಂದು ಗೋಲ್ಡ್‌ವಾಟರ್ ಹೇಳುತ್ತಿದ್ದನು.

ಈ ಹಸ್ತಲಾಘವ ನಮ್ಮ ಗೌರವ ಸೂಚಕ ಚಿಹ್ನೆಯೂ ಹೌದು. ವ್ಯಾಪಾರ ಪ್ರಪಂಚದಲ್ಲಿರುವ ಮಹಿಳೆಯರಂತೂ ಈ ಹಸ್ತಲಾಘವವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾರೆ. ೨೦ ವರ್ಷಗಳ ಹಿಂದೆ ಒಬ್ಬ ಮಹಿಳೆ ತಾನಾಗಿಯೇ ಹಸ್ತಲಾಘವಕ್ಕೆ ಕೈಚಾಚಿದರೆ, ಅವಳು ಬಹಳ ಮುಂದುವರಿದವಳೆಂದು ಭಾವಿಸಲಾಗುತ್ತಿತ್ತು. ಆದರೆ ಈಗ ಮಹಿಳೆಯರು ಸಹಜವಾಗಿ ಇತರರೊಡನೆ ಕೈಕುಲುಕಿಸುತ್ತಾರೆ ಮತ್ತು ಈಗ ಇದನ್ನು 'ಸಾಮಾಜಿಕ ಚುಂಬನ'ವೆಂಬುವುದು ಹಳೆಯದಾಗಿದೆಯಲ್ಲದೆ, ಅದು ಅವ್ಯವಹಾರಿಕವೆನಿಸುತ್ತದೆ. ಈಗ ಅದಕ್ಕೆ ಬೇಡಿಕೆ ಇಲ್ಲ. "ಹಸ್ತಲಾಘವದ ಮೂಲಕ ನಾನು, ನನ್ನ ಸಹೋದ್ಯೋಗಿಗಳಿಗೆ ಅವರಷ್ಟೇ, ಸಮರ್ಥಳಾಗಿದ್ದೇನೆಂದು ತೋರಿಸಬಹುದಾಗಿದೆ" ಎಂದು ಒಬ್ಬ ಮಹಿಳೆ ಹೇಳಿದಳು.

ವಿಧಿ ನಿರ್ಧಾರ:—ಒಂದು ಸರಳ ಹಸ್ತಸ್ಪರ್ಶದಿಂದ ಅತ್ಯಂತ ಪರಿಣಾಮಕಾರಿ ಸಂದೇಶಗಳು ಹೊರ ಬರಲು ಸಾಧ್ಯವಿದೆ. ೧೯೫೪ರ ಜಿನಿವಾ ಸಭೆಯಲ್ಲಿ ಸೇರಿದ್ದ ಅನೇಕ ಪ್ರತಿನಿಧಿಗಳಲ್ಲಿ ಚೀನೀ ಪ್ರಧಾನಿ ಚೌ-ಎನ್-ಲೈ ಮತ್ತು ಅಮೆರಿಕೆಯ ಸೆಕ್ರೆಟ್ರಿ ಆಫ್ ಸ್ಟೇಟ್ ಜಾನ್ ಫೋಸ್ಟರ್ ಡಲ್ಲೆಸ್ ಇದ್ದರು. ಕೊರಿಯಾ ಯುದ್ಧದಲ್ಲಿ ಸತ್ತ ಸಾವಿರಾರು ಅಮೆರಿಕನ್ ಸೈನಿಕರ ಸಾವಿಗೆ ಚೌ-ಎನ್-ಲೈಯೇ ಕಾರಣವೆಂದು ನಂಬಿದ್ದ ಡೆಲ್ಲೆಸ್‌ಗೆ ಚೌ ಬಗ್ಗೆ ತಿರಸ್ಕಾರವಿತ್ತು. ಆ ಸಭೆಯಲ್ಲಿ ಹೇಗಾದರೂ ಮಾಡಿ ಡಲ್ಲೆಸ್‌ನನ್ನು ಸಂಧಿಸಿ ಅವನ ಜೊತೆ ಕೈ ಕೈಕುಲುಕಿಸಿ ಫೋಟೋ ತೆಗೆಸಿಕೊಳ್ಳಬೇಕೆಂದು ಮಾಡಿದ ಚೌನ್ ಪ್ರಯತ್ನ ಫಲಿಸಲಿಲ್ಲ. ಚೌನ್ ಈ ವ್ಯರ್ಥ ಪ್ರಯತ್ನದ ಬಗ್ಗೆ ನ್ಯೂಯಾರ್ಕಿನ ಟೈಮ್ಸ್ ಪತ್ರಿಕೆಯಲ್ಲಿ ಬಂದ ಲೇಖನದ ಸಾರ ಈ ರೀತಿಯಾಗಿತ್ತು "ಚೌನ್ ಜೊತೆ ಕೈಕುಲುಕಿಸಲು ಡಲೆಸ್ ಉದ್ದೇಶ ಪೂರ್ವಕವಾಗಿ ಹಿಂಜರಿದನು...."

ಆದರೆ ೧೮ ವರ್ಷಗಳ ನಂತರ ಇದಕ್ಕೆ ವ್ಯತಿರಿಕ್ತವಾಗಿ ಅಧ್ಯಕ್ಷ ರಿಚರ್ಡ್ ನಿಕ್ಸನ್ ತಾನಾಗಿಯೇ ಮುಂದುವರೆದು, ಚೌ ಜೊತೆ ಕೈ ಕುಲುಕಿಸಿದನು. ೧೯೭೨ರಲ್ಲಿ ಚೀನಾ ಪ್ರಬಲರಾಷ್ಟ್ರಗಳಲ್ಲೊಂದಾಗಿತ್ತು. ಪೀಕಿಂಗ್ ಅಂತರರಾಷ್ಟ್ರೀಯ ವಾಯು ನಿಲ್ದಾಣದಲ್ಲಿ ವಿಮಾನದಿಂದ ದಾಪುಗಾಲು ಹಾಕುತ್ತ ನಿಕ್ಸನ್ ಧಾವಿಸಿದ್ದ. ಅವನು ಮುಗುಳ್ನ-ಗುತ್ತ ಚೌನ್ ಕಡೆ ಕೈ ಚಾಚಿದ್ದನ್ನು ಒಂದು ಛಾಯಾ ಚಿತ್ರದಲ್ಲಿ ಸೆರೆ ಹಿಡಿಯಲಾಯಿತು. ಈ ಭಾವ ಚಿತ್ರ ಎಲ್ಲ ಪತ್ರಿಕೆಗಳಲ್ಲಿ ಮುದ್ರಣಗೊಂಡಿತ್ತಲ್ಲದೆ, ಲೇಖಕರಿಗೆ, ವ್ಯಂಗ್ಯ ಚಿತ್ರಕಾರರಿಗೆ ಸಾಕಷ್ಟು ಗ್ರಾಸವೊದಗಿಸಿತ್ತು.

೧೯೯೩ ಸೆಪ್ಟೆಂಬರ್ ೧೩ ರಂದು, ಅಧ್ಯಕ್ಷ ಬಿಲ್ ಕ್ಲಿಂಟನ್ ಇಸ್ರೇಲಿನ ಪ್ರಧಾನ ಮಂತ್ರಿ ಯಿತ್ಸಾಹಕ್ ರಬಿನ್ ಮತ್ತು ಪಿ.ಎಲ್.ಒ ಅಧ್ಯಕ್ಷ ಯಸೀರ್ ಅರಾಫತ್ ಮಧ್ಯೆ ನಿಂತುಕೊಂಡಿದ್ದನು. ಪರಕೀಯ ವೈರಿಗಳಿಬ್ಬರು ಶ್ವೇತ ಭವನದಲ್ಲಿ ಒಂದು ಒಪ್ಪಂದಕ್ಕೆ ಸಹಿ ಹಾಕಿ ಯುಗಗಳಿಂದ ಮಧ್ಯ ಪೂರ್ವದಲ್ಲಿ ನಡೆಯುತ್ತಿದ್ದ ಹಿಂಸಾಚಾರಕ್ಕೆ ಮಂಗಳ ಹಾಡಿದ್ದರು. ಆಗ ಪ್ರತಿಯೊಬ್ಬನ ತಲೆಯಲ್ಲಿ ಸುಳಿಯುತ್ತಿದ್ದ ಪ್ರಶ್ನೆ: ಈ ರಬಿನ್ ಅರಾಫತ್ತನ ಜೊತೆ ಕೈ ಕುಲುಕಿಸುವನೆ?

ಶ್ವೇತಭವನದ ಆವರಣದಲ್ಲಿ ನೆರೆದಿದ್ದ ಸುಮಾರು ೩೦೦೦ ಜನರು ಆತುರದಿಂದ ಕಾಯುತ್ತಿದ್ದರು. ವಿಶ್ವದಾದ್ಯಂತ ಲಕ್ಷಾನುಗಟ್ಟಲೆ ಜನರು ತಮ್ಮ ಟಿ.ವಿ.ಗಳ ಮೇಲೆ ಕಣ್ಣು ನೆಟ್ಟು ಕುಳಿತಿದ್ದರು. ದೀರ್ಘ ಕಾಲದ ಆ ವೈರಿಯ ಕಡೆ ಕೈಚಾಚುವ ಮೊದಲು ಒಂದು ಕ್ಷಣ ರಬಿನ್ ತಡೆದು, ನಂತರ ಸಂಕೋಚದಿಂದಲೇ ಕೈ ಕುಲುಕಿಸಿದ. ಜನ ಸಮೂಹದ ಒಪ್ಪಿಗೆ, ಹರ್ಷೋದ್-ಗಾರದ ಮೂಲಕ ಹೊರಹೊಮ್ಮುತ್ತಿದ್ದಂತೆ ಅವನು ಮಂದಹಾಸ ಬೀರಿದನು.

ಕ್ಲಿಂಟನ್ನನ ಈ ದುಬಾರಿ ರಾಜಕೀಯ ನಾಟಕ ಯಶಸ್ವಿಯಾಗಿತ್ತು; ಬಹುಶಃ ನಿರೀಕ್ಷೆ ಮೀರಿ ಆಗಿತ್ತು. ಆದರೆ ಯಿಗಲ್ ಆಯರ್ ಎಂಬ ೨೫ ವರ್ಷದ ದುರಭಿಮಾನಿಯೊಬ್ಬನಿಗೆ, ಈ ಇಬ್ಬರು ನಾಯಕರುಗಳು ಕೈ ಕುಲುಕಿಸಿದ್ದು ಕಂಡು ಬಹಳ ಸಿಟ್ಟು ಬಂತು. ೧೯೯೫ರ ನವೆಂಬರ್ ೪ ರಂದು ಆಯಿರ ರಬಿನ್ನನ್ನು ಕೊಂದುಹಾಕಿದನು. ಆಗ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ "ಒಂದು ಹಸ್ತಲಾಘವದ ಮೂಲಕ ರಬಿನ್ನನ ವಿಧಿ ನಿರ್ಧಾರವಾಯಿತು" ಎಂದು ದಪ್ಪಕ್ಷರಗಳಲ್ಲಿ ಬರೆದಿತ್ತು.

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ;
ಹಸಿಗೋಡೆಯ ಹರಳಿನಂತೆ
ಹುಸಿ ಹೋಗದ ಕನ್ನಡ.

—ಚೆನ್ನವೀರ ಕಣವಿ

ವಿಜ್ಞಾನದ ಗಾರುಡಿಗ—ಸ್ಟೀಫನ್ ಹಾಕಿಂಗ್

ಟಿ. ಎಸ್. ಲಲಿತ
೭೦೩, ಮೊದಲನೆ ಮಹಡಿ,
೧೭ನೇ ಮೇನ್, ಸರಸ್ವತಿಪುರ
ಮೈಸೂರು-೫೭೦೦೦೯

[ಅಂಗಊನವೆಂದರೆ, ಜಗತ್ತಿನ ಕಣ್ಣಿನಲ್ಲಿ ನಿಕೃಷ್ಟತೆಯ ಭಾವನೆ. ತನ್ನ ಮೆದುಳೊಂದನ್ನುಳಿದು, ಇಡೀ ದೇಹವೇ ಚೈತನ್ಯಹೀನವಾಗಿದ್ದರೂ, ವಿಜ್ಞಾನದ ಜಗತ್ತಿಗೆ ಚೇತನ ತುಂಬಿದ ವ್ಯಕ್ತಿ ಸ್ಟೀಫನ್ ಹಾಕಿಂಗ್. ಗುಣವಾಗದ ಮೋಟಾರ್ ನ್ಯೂರಾನ್ ಖಾಯಿಲೆಗೊಳಗಾದರೂ, ವೈದ್ಯರು ಕೇವಲ ೨೫ ವರ್ಷಗಳ ಆಯುಸ್ಸು ಬರೆದರೂ, ಮೃತ್ಯುವನ್ನು ಹಿಮ್ಮೆಟ್ಟಿಸಿ, ಗಾಲಿ ಕುರ್ಚಿಯಲ್ಲಿ ಕುಳಿತೇ ವಿಶ್ವಪರ್ಯಟನ ಮಾಡಿದ ಮೇಧಾವಿ ಗಣಿತಜ್ಞ ಹಾಗೂ ವಿಜ್ಞಾನಿ—ಜಗತ್ತಿಗೇ ಮಾದರಿ].

ಡೈನಿಂಗ್ ಟೇಬಲ್‌ನ ಸುತ್ತ ವಿದ್ಯಾರ್ಥಿಗಳು ಕುಳಿತಿದ್ದಾರೆ. ಬಿಳಿಯ ವೀಲ್ ಛೇರ್‌ನಲ್ಲಿ ಕುಸಿದು ಕುಳಿತ ನಲ್ವತ್ತರಾಚೆಯ ವ್ಯಕ್ತಿಗೆ, ನರ್ಸ್ ಚಮಚೆಯಿಂದ ಊಟ ಮಾಡಿಸುತ್ತಿದ್ದಾಳೆ. ಆತ ತೊಟ್ಟ ಸರಳ ಜಾಕೆಟ್, ತೆರೆದ ಕತ್ತಿನ ಷರ್ಟಿಗೆ ಸರಿಹೊಂದುವಂತಿದೆ. ಸ್ಟೀಲ್ ಚೌಕಟ್ಟಿನ ಕನ್ನಡಕದ ಹಿಂದಿನ ಸ್ವಚ್ಛ ನೀಲಿಯ ಕಣ್ಣುಗಳು ಹರಿತವಾಗಿವೆ. ಆದರೆ ವ್ಯಕ್ತಿ ತೀರಾ ತೆಳುವಾಗಿ ನಶಿಸಿಹೋದಂತಿದ್ದಾನೆ.

'ಟ್ರಾಕಿಯೋಟಮಿ'ಯಿಂದಾಗಿ ಆತ ಮಾತನಾಡುವಂತಿಲ್ಲ ಕತ್ತಿನ ನಡುವೆ ೫ ಸೆಂ. ಮಿ. ಸುತ್ತಳತೆಯ ಪ್ಲಾಸ್ಟಿಕ್‌ನ ಉಸಿರಾಟದ ಸಾಧನವೊಂದನ್ನು ಅಳವಡಿಸಲಾಗಿದೆ. ಹುಡುಗರು ಏನೋ ವಿಷಯ ಹೇಳಿದಾಗ, ನೋವಿನಿಂದ ಕೂಡಿದ ಎರಡು ಬೆರಳನ್ನು ಮೇಲೆತ್ತುತ್ತಾನೆ—ಸ್ವತಂತ್ರವಾಗಿ ಚಲಿಸಬಹುದಾದ ದೇಹದ ಒಂದೇ ಒಂದು ಅಂಗ. ತೊಡೆಯ ಮೇಲಿನ ಕಂಪ್ಯೂಟರ್ ಕಂಟ್ರೋಲರ್, ಅದಕ್ಕೆ ಹೊಂದಿಕೊಂಡಂತ ಧ್ವನಿ-ಸಿಂಥಸೈಸರ್—ಪದಗಳನ್ನು ಮಾತಾಗಿ ಮಾರ್ಪಡಿಸುತ್ತದೆ. ಅವನ ಉತ್ತರಗಳು ವಿದ್ಯಾರ್ಥಿಗಳನ್ನು ನಗೆಗಡಲಿನಲ್ಲಿ ಮುಳುಗಿಸುತ್ತವೆ. ಮನುಷ್ಯನ ಕಣ್ಣುಗಳು ಮಿನುಗುತ್ತವೆ. ವಿಶ್ವದ 'ಅತಿ ಭವ್ಯನಗೆ' ವ್ಯಕ್ತಿಯ ಮುಖವನ್ನಾವರಿಸುತ್ತದೆ.

ಮೂಲ: 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಮೈಕೆಲ್ ವೈಟ್ ಮತ್ತು ಜಾನ್ ಗ್ರಿಬ್ಬಿನ್ ಅವರ "ಎ ಬ್ರೀಫ್ ಹಿಸ್ಟರಿ ಆಫ್ ಸ್ಟೀಫನ್ ಹಾಕಿಂಗ್" ಲೇಖನ.

"ನಿಮ್ಮನ್ನು ಭೇಟಿ ಮಾಡಿದ್ದು ತುಂಬ ಸಂತಸಕರ ಪ್ರೊಫೆಸರ್ ಹಾಕಿಂಗ್" ಎನ್ನುತ್ತ ಒಳಬಂದ ಅತಿಥಿ, ಆಸ್ಕರ್ ವಿಜೇತೆ ಹಾಲಿವುಡ್ ನಟಿ ಶರ್ಲಿ ಮ್ಯಾಕ್‌ಲೇನ್ ಪ್ರೊಫೆಸರರನ್ನು ಪ್ರಶ್ನಿಸುತ್ತಾಳೆ, 'ಈ ವಿಶ್ವವನ್ನು ಸೃಷ್ಟಿಸಿದ ದೇವರೊಬ್ಬನಿದ್ದಾನೆ, ತಾನು ಸೃಷ್ಟಿಸಿದ್ದಕ್ಕೆ ಮಾರ್ಗದರ್ಶನವನ್ನು ಮಾಡುತ್ತಾನೆಂದು ನೀವು ನಂಬುತ್ತೀರಾ?'

ಧ್ವನಿಯೊಂದು ಹೇಳುತ್ತದೆ "ಇಲ್ಲ".

ಶರ್ಲಿ ಮ್ಯಾಕ್‌ಲೇನ್ ಒಪ್ಪುವುದಿಲ್ಲ. ಅವಳಾಗಲೇ ವಿಶ್ವದ ಅನೇಕ ದೇಶಗಳ ಶಿಕ್ಷಕರು, ಸಾಧುಗಳೊಂದಿಗೆ ಮಾತಾಡಿದ್ದಾಳೆ. ಸ್ಟೀಫನ್ ಹಾಕಿಂಗ್‌ನ ಅಭಿಪ್ರಾಯಕ್ಕೂ ಮಾನ್ಯತೆ ನೀಡಬೇಕಾಗಿತ್ತು. ಏಕೆಂದರೆ ಆತನ ಕಾರ್ಯಕ್ಷೇತ್ರವೇ ಹಿರಿಯದರಲ್ಲಿ ಅತಿ ಹಿರಿದೆನಿಸುವ ವಿಜ್ಞಾನ—"ಥಿಯರೆಟಿಕಲ್ ಕಾಸ್ಮಾಲಜಿ" ಬ್ರಹ್ಮಾಂಡದ ಬಗೆಗಿನ ಅಧ್ಯಯನ. ಬ್ರಹ್ಮಾಂಡದ ಸೃಷ್ಟಿ, ಅದಕ್ಕಾಗಿ ಇರುವ ನಿಯಮಗಳು, ಎಲ್ಲದರ ಭವಿಷ್ಯ ಇವುಗಳ ವ್ಯಾಸಂಗ ಹಾಕಿಂಗ್‌ನನ್ನು ಈ ಕಾಲದ ಅತಿ ದೊಡ್ಡ ಭೌತಶಾಸ್ತ್ರಜ್ಞನೆನಿಸಿದೆ.

ಅವನದು "ಬದುಕಿರುವ ಅತ್ಯುತ್ತಮ ಮೆದುಳು", "ಇಪ್ಪತ್ತನೆಯ ಶತಮಾನದ ಮೇಧಾವಿ", "ಐನ್‌ಸ್ಟೈನನ ಉತ್ತರಾಧಿಕಾರಿ" ಎಂದೆಲ್ಲಾ ಹೇಳುತ್ತಾರೆ. ತಾನು ಬರೆದ ವಿಜ್ಞಾನದ ಪುಸ್ತಕ "ಎ ಬ್ರೀಫ್ ಹಿಸ್ಟರಿ ಆಫ್ ಟೈಮ್"ನಿಂದಾಗಿ ಲಕ್ಷಾಂತರ ಓದುಗರಿಗೆ ಚಿರಪರಿಚಿತನಾಗಿದ್ದಾನೆ. ಪ್ರಕಟವಾಗುತ್ತಿದ್ದಂತೆ ವಿಶ್ವಾದ್ಯಂತ ಮಾರಲ್ಪಟ್ಟ ೫ ಮಿಲಿಯನ್ ಪ್ರತಿಗಳೊಂದಿಗೆ ನೂರಾ ಎಂಬತ್ತು ನಾಲ್ಕು ವಾರಗಳವರೆಗೂ "ದಿ ಸಂಡೇ ಟೈಮ್ಸ್"ನ ಅತ್ಯುತ್ತಮ ಹತ್ತು ಪುಸ್ತಕಗಳಲ್ಲೊಂದೆನಿಸಿ ಗಿನ್ನಿಸ್ ದಾಖಲೆ ಸ್ಥಾಪಿಸಿದೆ.

ಇವೆಲ್ಲಾ ಹೇಗೆ ನಡೆಯಿತು? ಸಂಪೂರ್ಣ ಲಕ್ವ ಹೊಡೆದ ದೇಹದೊಂದಿಗೆ, ನಲವತ್ತೊಂದು ಕೆ.ಜಿ.ಗಿಂತಲೂ ಕಡಿಮೆ ತೂಗುತ್ತಿದ್ದು, ತನಗುಂಟಾದ ಎಲ್ಲಾ ಅಡಚಣೆಗಳನ್ನೂ ತೊಡೆದು ದೃಢಶರೀರಿಗಳಿಗಿಂತ ಹೆಚ್ಚು ಸಾಧಿಸಿದ್ದು ಹೇಗೆ?

ಸ್ಟೀಫನ್ ವಿಲಿಯಮ್ ಹಾಕಿಂಗ್ ಬುದ್ಧಿವಂತ. ಆದರೆ ವಿಚಿತ್ರ ಸ್ವಭಾವದವನು. ತಂದೆ ತಾಯಿಗಳಿಗೆ ಹುಟ್ಟಿದ ಆರೋಗ್ಯವಂತ ಮಗು. ತಂದೆ ಫ್ರ್ಯಾಂಕ್ ಟ್ರಾಪಿಕಲ್ ರೋಗಗಳ ಪರಿಣಿತ ವೈದ್ಯ. ತಾಯಿ ಇಸೊಬೆಲ್ ಒಬ್ಬ ವೈದ್ಯನ ಮಗಳು. ಇಬ್ಬರೂ ವಿಚ್ಛೇದನಗೊಳ್ಳುವವರೆಗೂ ಮರದ ಸಾಮಾನುಗಳು, ಪುಸ್ತಕಗಳು, ಜಮಖಾನೆಗಳು ತುಂಬಿದ ಸೇಂಟ್ ಅಲಬಾಮಾದ ಮನೆಯಲ್ಲಿದ್ದರು. ಇಬ್ಬರು ಸೋದರಿಯರು ಒಬ್ಬ ಮಲತಮ್ಮನನ್ನು ಹೊಂದಿದ ಹಾಕಿಂಗ್‌ಗೆ ತಾನು ಹುಟ್ಟಿದ ೮-೧-೧೯೪೨ನೇ ತಾರೀಖಿನ ಬಗ್ಗೆ ವಿಶೇಷ ಆಕರ್ಷಣೆ. ಇಟಾಲಿಯನ್ ಗಣಿತಜ್ಞ ಹಾಗೂ ನಕ್ಷತ್ರದ ಅಭ್ಯಾಸದಲ್ಲಿ ಕ್ರಾಂತಿ ತಂದು ಗ್ರಹಗಳಿಗೆ ಸೂರ್ಯನೇ ಕೇಂದ್ರನೆಂದು ವಾದಿಸಿದ್ದಕ್ಕಾಗಿ ಕ್ಯಾಥೊಲಿಕ್ ಚರ್ಚಿನಿಂದ ಮರಣದಂಡನೆಗೊಳಪಟ್ಟ ಗೆಲಿಲಿಯೊನ ಜನ್ಮದಿನ ಎಂದು.

ವಿದ್ಯೆಯ ಔನ್ನತ್ಯಕ್ಕೆ ಹೆಸರಾದ ಸೇಂಟ್ ಆಲ್ಬನ್ಸ್ ಖಾಸಗಿ ಶಾಲೆಗೆ ಸೇರಿದ ಮೂರನೆಯ ವರ್ಷದ ಕಡೆಯ ಭಾಗದಲ್ಲಿ ಶಾಲೆಯ "ಡಿವೈನಿಟಿ" ಬಹುಮಾನ ಪಡೆದ

ಹಾಕಿಂಗ್ ಯಾವಾಗಲೂ ಒಟ್ಟಾಗಿರುತ್ತಿದ್ದ ಅತ್ಯಂತ ಪ್ರತಿಭಾವಂತ ಹುಡುಗರ ತಂಡದವರಲ್ಲೊಬ್ಬನಾಗಿದ್ದ. ಶಾಸ್ತ್ರೀಯ ಸಂಗೀತ ಕೇಳುತ್ತಾ ಕಿಂಗ್‌ಸ್ಲೆ ಅಮಿಸ್, ಆಲ್ಡಸ್ ಹಕ್ಸ್ಲೆ ಮುಂತಾದ ಉನ್ನತ ಸಾಹಿತಿಗಳ ಸಾಹಿತ್ಯ ಓದುತ್ತಿದ್ದ. ಬರ್ಟ್ರೆಂಡ್ ರಸೆಲ್ ಅವನ ಆರಾಧ್ಯ ಮೂರ್ತಿ. ಅತಿ ಕಡಿಮೆ ಅಭ್ಯಾಸ ಮಾಡುತ್ತಿದ್ದರೂ ಹಾಕಿಂಗ್ ಗಣಿತದಲ್ಲಿ ಪೂರ್ಣ ಅಂಕ ಪಡೆಯುತ್ತಿದ್ದ. ತಾನು ಕ್ಲಿಷ್ಟವಾದ ಗಣಿತದ ಬಗ್ಗೆ ಚಿಂತೆ ಮಾಡುತ್ತಿದ್ದರೆ ಹಾಕಿಂಗ್‌ಗೆ ಅದರ ಬಗ್ಗೆ ಯೋಚನೆ ಕೂಡಾ ಮಾಡದೆ ಆ ಸಮಸ್ಯೆಗಳಿಗೆ ಉತ್ತರ ಗೊತ್ತಿರುತ್ತಿತ್ತು. ಹಾಕಿಂಗ್‌ನ ಜಾಣ್ಮೆ ಅವನ ಅಧ್ಯಾಪಕರಿಗೂ ಗೊತ್ತಿತ್ತು. ೧೯೫೮ರಲ್ಲಿ ಹಾಕಿಂಗ್ ಮತ್ತವನ ಸ್ನೇಹಿತರು ಒಂದು ಕಂಪ್ಯೂಟರ್ ತಯಾರಿಸಿದ್ದರು. ಆಗಿನ್ನೂ ಕೇವಲ ಕೆಲವೇ ಕಂಪೆನಿಗಳಲ್ಲಿ ಕಂಪ್ಯೂಟರ್ ಇತ್ತು. ಶಾಲಾ ಬಾಲಕ ಹಾಕಿಂಗ್ ತೀವ್ರ ಕಾರ್ಯತತ್ಪರ, ವಿಚಿತ್ರ, ಮೂಳೆ ಚರ್ಮದ ಸಣಕಲ ವ್ಯಕ್ತಿಯಾಗಿದ್ದು ಸುಕ್ಕಾದ ಬೂದು ಬಣ್ಣದ ಸಮವಸ್ತ್ರದೊಂದಿಗೆ ಅಸ್ಪಷ್ಟವಾಗಿ ಮಾತಾಡುತ್ತಿದ್ದ. ಅದವನ ತಂದೆಯಿಂದ ಅನುವಂಶಿಕವಾಗಿ ಬಂದುದಾಗಿತ್ತು. ಸ್ನೇಹಿತರು ಅವನು ಮಾತಾಡುವುದನ್ನು "ಹಾಕಿಂಗೀಸ್" ಎನ್ನುತ್ತಿದ್ದರು.

ಇದಾವುದೂ ಅವನ ಖಾಯಿಲೆಯ ಮೊದಲ ಲಕ್ಷಣವಾಗಿರಲಿಲ್ಲ. ಸ್ನೇಹಿತರಿಂದ ಗೌರವಿಸಲ್ಪಟ್ಟರೂ ಅನೇಕರು ಅವನೊಂದಿಗೆ ಬೆರೆಯುತ್ತಿರಲಿಲ್ಲ. ಅವನೊಂದು ತಮಾಷೆಯ ವಸ್ತುವಾಗಿದ್ದ. ವಿಶ್ವವಿದ್ಯಾಲಯದ ಶಾಲೆಯಲ್ಲಿ ಗಣಿತ ಮತ್ತು ಭೌತಶಾಸ್ತ್ರ ಸೇರಿದ ಪ್ರಾಕೃತಿಕ ವಿಜ್ಞಾನ ವಿಷಯದಲ್ಲಿ ಅಭ್ಯಾಸ ಮಾಡಲು ವಿದ್ಯಾರ್ಥಿವೇತನ ಪಡೆದು ಆಕ್ಸ್‌ಫರ್ಡ್‌ಗೆ ಹೋದಾಗ ಈ ಸಂಗತಿಗಳೆಲ್ಲಾ ಬದಲಾದವು. ಅಲ್ಲಿಯ ಕೆಲಸ ಅವನಿಗೆ ಅತಿ ಸುಲಭವೆನಿಸಿತು. ಸರಾಸರಿ ದಿನಕ್ಕೊಂದು ಘಂಟೆಯ ಕೆಲಸ. ಒಮ್ಮೆ ಅವನ ಅಧ್ಯಾಪಕರು ಭೌತಶಾಸ್ತ್ರದ ಪಠ್ಯಪುಸ್ತಕದಿಂದ ಕೆಲವು ಸಮಸ್ಯೆಗಳನ್ನು ಬಿಡಿಸಲು ಹೇಳಿದಾಗ ಹಾಕಿಂಗ್ ಅವುಗಳನ್ನು ಬಿಡಿಸುವ ಗೊಡವೆಗೂ ಹೋಗಲಿಲ್ಲ. ಏಕೆಂದು ಕೇಳಿದಾಗ ಪುಸ್ತಕದಲ್ಲಿರುವ ತಪ್ಪುಗಳನ್ನು ಇಪ್ಪತ್ತು ನಿಮಿಷಗಳವರೆಗೂ ಎತ್ತಿ ತೋರಿಸಿದ.

ಈ ವಾತಾವರಣ ಹಾಕಿಂಗ್‌ನಲ್ಲಿ ಬೇಸರ ಹುಟ್ಟಿಸಿತ್ತು. ಅದೃಷ್ಟವಶಾತ್ "ಬೋಟ್ ಕ್ಲಬ್" ಆಸಕ್ತಿ ಮೂಡಿಸಿತು. ಅವನ ತೆಳು ಪ್ರಕೃತಿ ಇದಕ್ಕೆ ಹೇಳಿ ಮಾಡಿಸಿದಂತಿತ್ತು. ಅವನಿಗಿದ್ದ ದಪ್ಪ ಧ್ವನಿಯೊಂದಿಗೆ ಸೂಚನೆಗಳನ್ನು ಕೊಡುವುದು, ಅವನಿಗೆ ಖುಷಿ ತರುತ್ತಿತ್ತು. ನದಿಯಲ್ಲಿ ಹುಟ್ಟು ಹಾಕುತ್ತಾ ಹೋಗುವಾಗ ದೈತ್ಯ ಧೈರ್ಯ. ಅನೇಕ ವೇಳೆ ನಡೆಸಲಾಗದಷ್ಟು ಕಿರಿದಾದ ಸಂದುಗಳಲ್ಲಿ ದೋಣಿ ನಡೆಸುವಂತೆ ನಿರ್ದೇಶಿಸಿ, ಮುರಿದ ಹುಟ್ಟಿನೊಂದಿಗೋ, ಇಲ್ಲವೇ ಮುರಿದ ದೋಣಿಯ ಚೂರಿನೊಂದಿಗೋ ದಡಕ್ಕೆ ಹಿಂತಿರುಗುತ್ತಿದ್ದ. ಹುಟ್ಟು ಹಾಕಲು ಅವನಿಗೆ ತರಬೇತು ನೀಡುತ್ತಿದ್ದ ನಾರ್ಮನ್ ಡಿಕ್ಸ್ "ಹಾಕಿಂಗ್ ಅರ್ಧ ವೇಳೆಯೆಲ್ಲಾ ದೋಣಿಯೊಳಗೆ ಕುಳಿತು ದೃಷ್ಟಿಯನ್ನು ನಕ್ಷತ್ರಗಳತ್ತ ನೆಟ್ಟು ಗಣಿತದ ಸೂತ್ರವೊಂದನ್ನು ಬಿಡಿಸುತ್ತಿದ್ದ" ಎನ್ನುತ್ತಾನೆ. ಹಾಕಿಂಗ್‌ಗೆ ವೀಕ್ಷಣಾ

ಖಗೋಳಶಾಸ್ತ್ರದಲ್ಲಿ ಆಸಕ್ತಿಯಿರಲಿಲ್ಲ. ಆಕ್ಸ್‌ಫೊರ್ಡ್‌ನಲ್ಲಿ ಇರುವಾಗ ರಾಯಲ್ ಗ್ರೀನ್‌ವಿಚ್ ಸವಿಾಕ್ಷಾ ಮಂದಿರದ (ಅಬ್ಸರ್‌ವೇಟರಿ) ಮಹಾನ್ ಖಗೋಳ ವಿಜ್ಞಾನಿ, ಸರ್ ರಿಚರ್ಡ್ ವೂಲಿಗೆ ಸಹಾಯಕನಾಗಿ ನಕ್ಷತ್ರಗಳ ಬಗೆಗೆ ಸಂಶೋಧನೆ ನಡೆಸಿದ. ಆಕಾಶದಲ್ಲಿ ಟೆಲಿಸ್ಕೋಪಿನ ಮೂಲಕ ಒಂದೆರಡು ಅಸ್ಪಷ್ಟ ನಕ್ಷತ್ರಗಳನ್ನು ವೀಕ್ಷಿಸುವುದಕ್ಕಿಂತ ಥಿಯರೆಟಿಕಲ್ ಕಾಸ್ಮಾಲಜಿ ಹೆಚ್ಚು ಆಸಕ್ತಿಯುತ ಎನಿಸಿತು ಹಾಕಿಂಗ್‌ಗೆ.

ಆಲ್ಬರ್ಟ್ ಐನ್‌ಸ್ಟೀನ್, (೧೮೭೯–೧೯೫೫). "ಜನರಲ್ ಥಿಯರಿ ಆಫ್ ರಿಲೇಟಿವಿಟಿ"ಯನ್ನು ಕಂಡುಹಿಡಿದಾಗಲೇ, "ಕಾಸ್ಮಾಲಜಿ" ವಿಜ್ಞಾನ ಹುಟ್ಟಿಕೊಂಡಿತು. ಅದು ಇಪ್ಪತ್ತನೇ ಶತಮಾನದ, ಭೌತಶಾಸ್ತ್ರದ ಅವಳಿ ಸ್ತಂಭಗಳಲ್ಲೊಂದೆನಿಸಿದರೆ, ಮತ್ತೊಂದು ಬ್ರಹ್ಮಾಂಡದ ಬಗ್ಗೆ ನಮ್ಮ ದೃಷ್ಟಿಯನ್ನು ಬದಲಿಸಿದ ಕ್ವಾಂಟಂ ಥಿಯರಿ.

ಹತ್ತೊಂಬತ್ತನೇ ಶತಮಾನದ ಅಂತ್ಯದವರೆಗೂ ವಿಜ್ಞಾನಿಗಳು ಸರ್ ಐಸಾಕ್ ನ್ಯೂಟನ್‌ನ ಎಲ್ಲಕ್ಕೂ ನಿರ್ದಿಷ್ಟವಾದ ಜಾಗವಿರುವ, ಸೇಬು ಮರದಿಂದ ಬೀಳುವುದರಿಂದ ಹಿಡಿದು, ಚಂದ್ರ ಭೂಮಿಯ ಸುತ್ತ ಸುತ್ತುವುದೆಂಬ ವಿಷಯಗಳನ್ನು ನಿಖರವಾಗಿ ಮೊದಲೇ ತಿಳಿಯಬಹುದೆಂಬ 'ಕ್ಲಾಕ್ ವರ್ಕ್ ಯೂನಿವರ್ಸ್' ಎಂಬ ಸಿದ್ಧಾಂತವನ್ನು ಒಪ್ಪಿದ್ದರು. ಗುರುತ್ವಾಕರ್ಷಣೆಯ ನಿಯಮಕ್ಕೊಳಪಟ್ಟು ನಕ್ಷತ್ರಗಳು ಜಾಗ ಬದಲಿಸದೆ—ಗೊತ್ತಾದ ಜಾಗದಲ್ಲೇ ತೂಗಿರುತ್ತಿದ್ದವೆಂದು ನಂಬಿದ್ದರು. ಐನ್‌ಸ್ಟೀನ್ "ಆಕಾಶಭಾವನೆ (ಸ್ಪೇಸ್) ಮತ್ತು ಕಾಲಭಾವನೆಗೆ (ಟೈಮ್) ಬೇರೆ ಬೇರೆ ಅಸ್ತಿತ್ವವಿಲ್ಲ, ಅವೆರಡಕ್ಕೂ ಸೇರಿದ ಒಂದೇ ಪರಿಪೂರ್ಣ ಅಸ್ತಿತ್ವವಿದೆ" ಎಂದು ನ್ಯೂಟನ್ನನ ತತ್ವಗಳಿಗೆ ಸವಾಲೆಸೆದು, ಅದನ್ನು "ಸ್ಪೇಸ್‌ಟೈಮ್" ಎಂದು ಕರೆದ. ಆದರೆ ನ್ಯೂಟನ್ನನ ಸಿದ್ಧಾಂತಗಳು ಹೇಳುವಂತೆ ಈ ಖಾಯಂ ಆದುದಾಗಲಿ ಅಥವಾ ಗೊತ್ತಾದ ಜಾಗಕ್ಕೆ ಅಂಟಿಕೊಂಡಂತಿರುವುದಾಗಲೀ ಅಲ್ಲ. ಇದನ್ನು ವಿವರಿಸಲು ಐನ್‌ಸ್ಟೀನ್ ತನ್ನ "ಜೆನರಲ್ ಥಿಯರಿ ಆಫ್ ರಿಲೆಟಿವಿಟಿ"ಯನ್ನು ಮುಂದಿಟ್ಟ. ಸೂರ್ಯನ ಗುರುತ್ವಾಕರ್ಷಣೆ, ನೆಟ್ಟಗಿರುವುದನ್ನು ಬಗ್ಗಿದಂತೆ ಕಾಣುವಂತೆ ಮಾಡುತ್ತದೆ. ಆದ್ದರಿಂದ ಕೆಲವು ನಕ್ಷತ್ರಗಳು ಇರುವಂತೆ ಕಾಣುವ ಜಾಗದಲ್ಲಿ ಅವು ಇರುವುದೇ ಇಲ್ಲ ಈ ಪ್ರಕಾರ ಬ್ರಹ್ಮಾಂಡವು ಸ್ಥಿರವಾಗಿ ನಿಂತಿಲ್ಲ. ನಂತರ ಈ ವಿಷಯಗಳು ಚರ್ಚೆಗೊಂಡು "ಬಿಗ್ ಲಾಂಗ್ ಥಿಯರಿ"ಗೆ ಎಡೆಮಾಡಿಕೊಟ್ಟವು. ರಿಲೆಟಿವಿಟಿ ಹಾಗೂ ಕ್ವಾಂಟಂ ಥಿಯರಿಗಳನ್ನು ಒಳಗೊಂಡ "ಥಿಯರಿ ಆಫ್ ಎವೆರಿಥಿಂಗ್"ನ್ನು (ಟಿಒಇ) ಸಿದ್ಧಪಡಿಸುವುದರಲ್ಲಿ ಐನ್‌ಸ್ಟೀನ್ ಸೋತ. ಹಾಕಿಂಗ್ ಆಕ್ಸ್‌ಫೊರ್ಡ್‌ನಲ್ಲಿದ್ದ ಕೊನೆಯ ವರ್ಷ, ಅಂದರೆ ೧೯೬೨ರಲ್ಲಿ ಭೌತಶಾಸ್ತ್ರದ ಈ ಎರಡು ಸ್ತಂಭಗಳು ಬೇರೆ ಬೇರೆಯಾಗಿಯೇ ನಿಂತವು. ಐನ್‌ಸ್ಟೀನ್ ಸೋತಲ್ಲಿಂದ, ಹಾಕಿಂಗ್ ಸವಾಲು ಸ್ವೀಕರಿಸಿ ಮುಂದುವರೆಯಬೇಕಿತ್ತು.

ಇಂದು "ಕಾಸ್ಮಾಲಜಿ" ಭೌತಶಾಸ್ತ್ರದ ಮುಖ್ಯ ಕೇಂದ್ರವೆನಿಸಿದರೆ, ೧೯೬೦ರಲ್ಲಿ ಅದಿನ್ನೂ ಹಿನ್ನೆಲೆಯಲ್ಲೇ ಇತ್ತು. ಆಕ್ಸ್‌ಫೊರ್ಡ್‌ನಲ್ಲಿ ಅದನ್ನು ಅಭ್ಯಸಿಸಲು

ಅನುಕೂಲವಿರಲಿಲ್ಲ. ಆದ್ದರಿಂದ ಗಣಿತ ಹಾಗೂ ಥಿಯರಂಟಿಕಲ್ ಫಿಸಿಕ್ಸ್ ವಿಭಾಗಗಳನ್ನು ತೆರೆದ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಪಿಎಚ್‌ಡಿ ಮಾಡಲು ನಿರ್ಧರಿಸಿದ ಹಾಕಿಂಗ್.

ಆಕ್ಸ್‌ಫೊರ್ಡಿನಲ್ಲಿ ಅಂತಿಮ ಪರೀಕ್ಷೆಗಾಗಿ ಕುಳಿತ ಹಾಕಿಂಗ್ (ಅಲ್ಲಿನ ಪದ್ಧತಿಯಂತೆ ರಸ್ತೆಯಲ್ಲಿ ಶಾಂಪೇನ್ ಕುಡಿಯುತ್ತ, ವಾಹನಗಳನ್ನು ನಿಲ್ಲಿಸಿದ), ತನ್ನ ಹುಟ್ಟೂರಾದ ಅಲಬಾಮಾಕ್ಕೆ ಹಿಂತಿರುಗಿ, ಫಲಿತಾಂಶಕ್ಕಾಗಿ ಕಾದ. ಅತ್ಯುನ್ನತ ಶಿಕ್ಷಣದ ಕುರುಹಾದ ಮೊದಲನೆ ದರ್ಜೆಯ ಆನರ್ಸ್ ಡಿಗ್ರಿ ಅವನಿಗೆ ದೊರೆತಿತ್ತು. ಮಿಡಲ್ ಈಸ್ಟ್‌ನಲ್ಲಿ ಸ್ವಲ್ಪ ಕಾಲ ವಿಶ್ರಮಿಸಿ, ೧೯೬೨ರ ಅಕ್ಟೋಬರ್‌ನಲ್ಲಿ ಕೇಂಬ್ರಿಡ್ಜ್‌ನ ಟ್ರಿನಿಟಿಹಾಲ್‌ಗೆ ಸ್ನಾತಕೋತ್ತರ ವಿದ್ಯಾರ್ಥಿಯಾಗಿ ಬಂದ.

ಪಿಎಚ್‌ಡಿಗಾಗಿ ಸಾಕಷ್ಟು ಕಠಿಣವಾದ ಸಂಶೋಧನಾ ವಿಷಯ ಹುಡುಕುವುದೇ ಹಾಕಿಂಗ್‌ನ ಸಮಸ್ಯೆಯಾಗಿತ್ತು. ಆಗಿನ್ನೂ "ರಿಲೆಟಿವಿಟಿ" ವಿಷಯದ ಬಗ್ಗೆ ಸಂಶೋಧನೆಗಳು, ಸ್ಪರ್ಧಾತ್ಮಕ ಸಮಸ್ಯೆಗಳು ವಿರಳವಾಗಿದ್ದವು. ಈ ವೇಳೆಗೆ ತನ್ನ ಖಾಸಗಿ ಜೀವನದಲ್ಲೆದುರಾಗಿದ್ದ ತೊಂದರೆಯ ಬಗ್ಗೆ ಹಾಕಿಂಗ್‌ಗೆ ಅರಿವಾಗುತ್ತಿತ್ತು. ತನ್ನ ಶೂಲೇಸನ್ನು ಕಟ್ಟಿಕೊಳ್ಳುವುದು ಅವನಿಗೀಗ ಕಷ್ಟವೆನಿಸುತ್ತಿತ್ತು. ಇಟ್ಟ ಪದಾರ್ಥಗಳಿಗೆ ಡಿಕ್ಕಿ ಹೊಡೆಯುತ್ತಿದ್ದ. ಯಾವುದೇ ಮುನ್ಸೂಚನೆಯಿಲ್ಲದೆ ಅವನ ಕಾಲುಗಳು ಕುಸಿಯುತ್ತಿದ್ದವು. ಈ ವಿಷಯದ ಬಗ್ಗೆ ಹೆಚ್ಚಿನ ಗಮನ ಕೊಡದೇ ದಿನಗಳನ್ನು ದೂಡಿದ. ಆದರೆ ಕ್ರಿಸ್ಮಸ್ ಸಮಯದಲ್ಲಿ ಮನೆಗೆ ಹೋದಾಗ ಅವನ ತಂದೆತಾಯಿಗೆ ಅವನಲ್ಲೇನೋ ತೊಂದರೆಯಿರುವ ಬಗ್ಗೆ ಶಂಕೆ ಮೂಡಿತು. ಅವನ ಇಪ್ಪತ್ತೊಂದನೆಯ ಜನ್ಮದಿನದ ಸಮಾರಂಭದಲ್ಲಿ ಲೋಟಕ್ಕೆ ವೈನ್ ಬಗ್ಗಿಸಲೆತ್ನಿಸಿದಾಗ ಹೆಚ್ಚು ಭಾಗ ಟೇಬಲ್‌ನ ಮೇಲೆಯೇ ಸುರಿದಾಗ ತಂದೆ ತಾಯಿಗೆ ನಿಜಕ್ಕೂ ಚಿಂತೆಗಿಟ್ಟಿತು.

ಮಿಡಲ್ ಈಸ್ಟ್‌ನಲ್ಲಿದ್ದಾಗ ಯಾವುದೋ ಖಾಯಿಲೆಗೆ ತುತ್ತಾಗಿರಬೇಕೆಂದು ಭಾವಿಸಿದ ಅವನ ತಂದೆ, ಅದನ್ನು ಖಚಿತಪಡಿಸಿಕೊಳ್ಳಲು ಹಾಕಿಂಗ್‌ನನ್ನು ಸಂತ ಬಾರ್ತ-ಲೋಮಿಯೋ ಆಸ್ಪತ್ರೆಗೆ ಕರೆತಂದ. ಆ ಅನುಭವಗಳನ್ನು ಹಾಕಿಂಗ್ ನೆನೆಸಿಕೊಳ್ಳುತ್ತಾನೆ. "ನನ್ನ ತೋಳಿನಿಂದ ಮಾಂಸದ ತುಣುಕನ್ನು ಪರೀಕ್ಷೆಗಾಗಿ ತೆಗೆದುಕೊಂಡರು, ಎಲೆಕ್ಟ್ರೋಡ್‌ಗಳನ್ನು ಅಳವಡಿಸಿದರು, ರೇಡಿಯೋ ಅಪಾರದರ್ಶಕ ದ್ರವವನ್ನು ನನ್ನ ಮೆದುಳು ಬಳ್ಳಿಗೆ ಹಾಯಿಸಿ ಅದನ್ನು ಕ್ಷಕಿರಣಗಳ ಮೂಲಕ ವೀಕ್ಷಿಸಿದರು. ವೈದ್ಯರು ಅದನ್ನು "ಮೋಟಾರ್ ನ್ಯೂರಾನ್ ಡಿಸೀಸ್" (ಎಂಎನ್‌ಡಿ) ಎಂದು ಕರೆದರು. ವಾಸಿಯಾಗದ ಅತಿವಿರಳವಾದ ಈ ಖಾಯಿಲೆ ಮೆದುಳುಬಳ್ಳಿಯ ನರಗಳ ಮೇಲೂ ಹಾಗೂ ಮೆದುಳಿನ ಮೇಲೂ ಪರಿಣಾಮ ಬೀರಿ ಅದರ ಕಾರ್ಯಗಳನ್ನು ತಡೆಗಟ್ಟುತ್ತದೆ. ಕೋಶಗಳು ನಿಧಾನವಾಗಿ ನಶಿಸಿ ಶರೀರಕ್ಕೆಲ್ಲಾ ಲಕ್ವ ಹೊಡೆದಂತಾಗುತ್ತದೆ.

ಹಾಕಿಂಗ್‌ನ ಜೀವಿತಾವಧಿ ಇನ್ನು ಕೇವಲ ಎರಡೂವರೆ ವರ್ಷವೆಂದರು ವೈದರು. ಭವಿಷ್ಯ ಜೀವನದ ಕನಸು ಕಾಣುತ್ತಿದ್ದ ಇಪ್ಪತ್ತೊಂದರ ಯುವಕ ನಿರಾಸೆಯ ಮಡುವಿಗಿಳಿದ. ಕೇಂಬ್ರಿಡ್ಜ್‌ನ ಕೋಣೆ

ಯೊಂದರಲ್ಲಿ ಒಂಟಿಯಾಗಿ ಕುಳಿತು ವ್ಯಾಗ್ನರ್‌ನ ಸಂಗೀತ ಕೇಳುತ್ತಾ, ನನಗೇಕೆ ಹೀಗಾಯಿತು, ನಾನೇಕೆ ಹೀಗೆ ಎಲ್ಲರಿಂದ ಬೇರೆಯಾಗಬೇಕಾಯಿತೆಂದು ತನ್ನಲ್ಲೇ ಚಿಂತಿಸತೊಡಗಿದ.

ಹಾಕಿಂಗ್ ಭೌತಶಾಸ್ತ್ರದಲ್ಲಿ ಪ್ರಯೋಗಗಳನ್ನು ನಡೆಸುವವನಾಗಿದ್ದರೆ ಅವನ ಕೆಲಸ ಅಲ್ಲಿಗೇ ಸಂಪೂರ್ಣ ನಿಂತುಹೋಗುತ್ತಿತ್ತು. ಆದರೆ ಈ ರೋಗ ಮೆದುಳಿನ ಮುಖ್ಯ ಕರ್ತವ್ಯಗಳಾದ ಚಿಂತನೆ ಹಾಗೂ ನೆನೆಪಿನ ಶಕ್ತಿಗಳನ್ನು ಊನಗೊಳಿಸುವುದಿಲ್ಲ. ತಾತ್ತ್ವಿಕ ಭೌತಶಾಸ್ತ್ರದ ಅಧ್ಯಯನಕ್ಕೆ ಬೇಕಾದ ಒಂದೇ ಒಂದು ಸಲಕರಣೆಯೆಂದರೆ ಮೆದುಳು. ನಿರಾಶೆಯ ಮಡುವಿನಿಂದ ತನ್ನನ್ನು ತಾನೇ ಹೊರಗೆಳೆದುಕೊಂಡು ತನ್ನ ಕೆಲಸಕ್ಕೆ ಹಿಂದಿರುಗಿದ.

ಸ್ನೇಹಿತನೊಬ್ಬನ ಮನೆಯ ಸಂತೋಷ ಕೂಟದಲ್ಲಿ ಸಂಧಿಸಿದ ಜೇನ್ ವೈಲ್ಡ್ ಹಾಕಿಂಗ್ ಚೇತರಿಸಿಕೊಳ್ಳಲು ಬಹು ಮಟ್ಟಿಗೆ ಕಾರಣಳಾದಳು. ಅವಳು ಹುಡುಗಿಯರ ಸೇಂಟ್ ಆಲ್ಬನ್ಸ್ ಶಾಲೆಯಲ್ಲಿ ಓದುತ್ತಿದ್ದಳು. ಸ್ವಲ್ಪ ವಿಚಿತ್ರ ನಡುವಳಿಕೆಯ ಬೌದ್ಧಿಕತೆಯ ದುರಭಿಮಾನದ ವ್ಯಕ್ತಿಯಂತೆ ಕಂಡ ಹಾಕಿಂಗ್‌ನತ್ತ ಕೂಡಲೇ ಆಕರ್ಷಿತಳಾದಳು ಜೇನ್. ಇಬ್ಬರ ನಡುವೆ ದೃಢವಾದ ಸಂಬಂಧ ಬೆಳೆಯಿತು. ಹಾಕಿಂಗ್‌ಗೆ ಈಗ ವಿಜ್ಞಾನಿಗಳ ಸಮೂಹದಲ್ಲಿ ಹೆಸರುಗಳಿಸಿದ ಅತ್ಯಂತ ಪ್ರಮುಖ ವಿಶ್ವಶಾಸ್ತ್ರಜ್ಞನೆನಿಸಿದ ಪ್ರೊಫೆಸರ್ ಫ್ರೆಡ್ ಹಾಯ್ಲ್‌ನೊಂದಿಗೆ ಕೆಲಸ ಮಾಡುವ ಅತ್ಯಸ್ಥೈರ್ಯ ಮೂಡಿತ್ತು. ಹಾಯ್ಲ್ ಬ್ರಹ್ಮಾಂಡದ "ಸ್ಥಿರ-ಸ್ಥಿತಿ (ಸ್ಟಡಿ ಸ್ಟೇಟ್ ಥಿಯರಿ) ಸಿದ್ಧಾಂತದ" ಬಗ್ಗೆ ಕೆಲಸಮಾಡುತ್ತಿದ್ದ.

ಹಾಯ್ಲ್, ತಾನು ಹೊಸದಾಗಿ ಕಂಡುಹಿಡಿದ ವಿಷಯಗಳನ್ನು ಬ್ರಿಟನ್ನಿನ ನ್ಯಾಷನಲ್ ಅಕ್ಯಾಡೆಮಿ ಆಫ್ ಸೈನ್ಸ್‌ನ ರಾಯಲ್ ಸೊಸೈಟಿಯ ವಿಜ್ಞಾನಿಗಳೆದುರು ಹೇಳುತ್ತಾ "ಈ ಬಗ್ಗೆ ಯಾರಾದರೂ ಪ್ರಶ್ನೆ ಮಾಡುವುದಿದೆಯೇ" ಎಂದು ಕೇಳಿದಾಗ ಹಾಕಿಂಗ್ ತನ್ನ ಊರುಗೋಲಿನ ಸಹಾಯದಿಂದ ಮೆಲ್ಲನೆ ಮೇಲೇಳುತ್ತಾ, ತಾನದರ ಬಗ್ಗೆ ಲೆಕ್ಕಾಚಾರ ಹಾಕಿರುವುದಾಗಿ ಹೇಳಿ ಹಾಯ್ಲ್‌ನ ಗಣಿತದ ಲೆಕ್ಕಾಚಾರಕ್ಕೆ ಸವಾಲೆಸೆದ.

ವಿಚಿತ್ರ ನಗೆ ಕೊಠಡಿಯಲ್ಲಿ ಸುಳಿಯಿತು, ಹಾಯ್ಲ್‌ನ ನೂತನ ಸಿದ್ಧಾಂತ ತಪ್ಪೆಂದು ಸಾಬೀತಾಯಿತು. ಹಾಕಿಂಗ್ ಆಗಲೇ ಪ್ರಸಿದ್ಧನಾಗ ತೊಡಗಿದ್ದ. ಖಾಯಿಲೆ ತನ್ನ ಅಧಿಪತ್ಯ ಸ್ಥಾಪಿಸಿದಾಗ ದೇಹಸ್ಥಿತಿ ಹದಗೆಡುತ್ತಾ ಬಂತು. ಹಾಕಿಂಗ್‌ಗೆ ನಡೆಯಲು ವಿಪರೀತ ಕಷ್ಟವಾಗುತ್ತಿತ್ತು. ಯಾರ ಸಹಾಯ ತೆಗೆದುಕೊಳ್ಳಲು ಹಿಂಜರಿಯುತ್ತಿದ್ದರೂ, ಅವನ ಸ್ನೇಹಿತರು ಸಾಧ್ಯವಾದಷ್ಟು ಸಹಾಯ ಮಾಡುತ್ತಿದ್ದರು. ರೋಗದೊಂದಿಗೆ ರಾಜಿ ಮಾಡಿಕೊಂಡ ಹಾಕಿಂಗ್. ಜೇನ್ ವೈಲ್ಡ್ ಳೊಂದಿಗೆ ತನ್ನ ಜೀವನವನ್ನು ಹಂಚಿಕೊಳ್ಳಬಹುದೆಂದು ತಿಳಿದಾಗ ಆವನ ಮುದುಡಿದ ಮನಸ್ಸು ಅರಳ ತೊಡಗಿತು. ಅವರ ಲಗ್ನ ನಿಶ್ಚಯವಾಯಿತು. ಇಬ್ಬರೂ ಸಂತಸದ ತುತ್ತತುದಿಯಲ್ಲಿದ್ದರು." ನನ್ನ ಇರುವಿಕೆಯಲ್ಲಿ ಏನಾದರೊಂದು ಉದ್ದೇಶ ಕಂಡುಕೊಳ್ಳಬೇಕಿತ್ತು. ಹಾಕಿಂಗ್‌ನನ್ನು ನೋಡಿ

ಕೊಳ್ಳುವುದರಲ್ಲಿ ನಾನು ಆ ಉದ್ದೇಶವನ್ನು ಕಂಡುಕೊಂಡೆ. ನಾವು ಒಬ್ಬರೊಬ್ಬರ ಪ್ರೇಮದ ಸುಳಿಗೆ ಸಿಕ್ಕಿದ್ದೆವು" ಎಂದಳು ಜೇನ್. ಜೇನಳೊಂದಿಗಿನ ಲಗ್ನದ ನಿಷ್ಕರ್ಷೆ, ಹಾಕಿಂಗ್‌ನ ಜೀವನದಲ್ಲಿ ನಡೆದ ಅತ್ಯಂತ ಪ್ರಮುಖ ಘಟನೆ. ಅದು ಅವನನ್ನು ಜೀವಿಸಲು ನಿರ್ಧರಿಸುವಂತೆ ಮಾಡಿಸಿತು. ಆದರೆ ಅವನ ಪಿಎಚ್‌ಡಿಯ ಸಮಸ್ಯೆಯೊಂದು ಹಾಗೆಯೇ ಉಳಿದಿತ್ತು. ಬಿಡಿಬಿಡಿ ಎಳೆಗಳನ್ನು ಸೇರಿಸಿ ಯಶಸ್ವಿ ಪದವಿಯನ್ನಾಗಿ ಅದನ್ನು ರೂಪಿಸಿಕೊಳ್ಳಬೇಕಾಗಿತ್ತು. ಅವನ ವೃತ್ತಿಯ ಭವಿಷ್ಯ, ಹತ್ತಿರ ಸಾರಿಯೂ ಸಾರದಂತೆ ದೂರವಾಗುತ್ತಿತ್ತು.

ಅವನ ಮೆದುಳು ಹೇಗೆ ಕೆಲಸಮಾಡುತ್ತಿತ್ತೆಂದು ಕೇಳಿದಾಗ "ಒಂದು ಆಲೋಚನೆ ಸರಿಯಾಗಿರಲೇಬೇಕೆಂಬ ಒಂದು ಅಂತರ್-ದೃಷ್ಟಿಯ ಮೇಲೆ ಕೆಲಸಮಾಡುತ್ತೇನೆ. ನಂತರ ಅದನ್ನು ಸಾಧಿಸಲು ಪ್ರಯತ್ನಿಸುತ್ತೇನೆ" ಎಂದ ಹಾಕಿಂಗ್. ೧೯೬೪ರ ಒಂದು ಸಂಜೆ ಅವನ ತಲೆಯಲ್ಲಿ ನುಸುಳಿದ ಒಂದು ಆಲೋಚನೆ ಅವನ ಪಿಎಚ್‌ಡಿ ಪದವಿಯನ್ನುಳಿಸಿತು. ಮಾರ್ಗದರ್ಶಿ ಡಾ|| ಸಿಯಾಮಾ, ಹಾಕಿಂಗ್ ಹಾಗೂ ಅವನ ಪಿಎಚ್‌ಡಿ ಗುಂಪಿನ ಮೂವರು ಸದಸ್ಯರನ್ನು ಲಂಡನ್‌ನ ಬಿರ್ಕ್‌ಬೆಕ್ ಕಾಲೇಜಿನಲ್ಲಿ "ಅಪ್ಲೈಡ್ ಮ್ಯಾಥಮ್ಯಾಟಿಕ್ಸ್"ನ ರೀಡರಾಗಿದ್ದ ರೋಜರ್ ಪೆನ್‌ರೋಸರೊಂದಿಗೆ ಚರ್ಚಿಸಲು ಕರೆತಂದಿದ್ದ. ಚರ್ಚೆ ಹೊಸ ಹೊಸ ಆಲೋಚನೆಗಳನ್ನು ಹೊರಗೆಡವಬಹುದೆಂದು ಅವನ ನಿರೀಕ್ಷೆ.

ಮೂವತ್ತಮೂರು ವರ್ಷದ ಪೆನ್‌ರೋಸ್ "ಕಪ್ಪುರಂಧ್ರ (ಬ್ಲಾಕ್ ಹೋಲ್)"ನ ಬಗ್ಗೆ ಆಳವಾದ ಸಂಶೋಧನೆ ನಡೆಸುತ್ತಿದ್ದ. ಕೇಂಬ್ರಿಡ್ಜ್‌ಗೆ ಹಿಂತಿರುಗುವಾಗ ರೈಲಿನಲ್ಲಿ ಕುಳಿತು ಹಾಕಿಂಗ್ ಕಿಟಕಿಯ ಮೂಲಕ ನೋಡಿದಾಗ ಓಡುತ್ತಿರುವ ಹಸಿರು ಗದ್ದೆಗಳೊಂದಿಗೆ ಗಾಜಿನಲ್ಲಿ ಪ್ರತಿಫಲಿಸುತ್ತಿದ್ದ ಪ್ರಯಾಣಿಕನೊಬ್ಬ ಕಂಡ. ಅವನ ಥೀಸಿಸ್‌ಗಾಗಿ ವಿಷಯವನ್ನಾಯ್ದುಕೊಳ್ಳುವುದು ಇದುವರೆಗೂ ಒಂದು ಸಮಸ್ಯೆಯಾಗಿತ್ತು ಹಾಕಿಂಗ್‌ಗೆ. ಈಗ ಚಲನೆಯ ವಿರುದ್ಧ ಸ್ಥಿರವಾಗಿ ನಿಂತ ಗಾಜಿನಲ್ಲಿರುವ ಮೂರ್ತಿ ಅವನನ್ನು ಪ್ರೇರೇಪಿಸಿತು. ತನ್ನ ಪಿಎಚ್‌ಡಿಯ ಕೊನೆಯ ಅಧ್ಯಾಯಕ್ಕಾಗಿ ಇದೇ ವಿಷಯವನ್ನು ಆರಿಸಿಕೊಂಡ, ಈ ಅದ್ಭುತ ಅಧ್ಯಾಯ ಅವನಿಗೆ ಪಿಎಚ್‌ಡಿಯನ್ನು ದೊರಕಿಸಿಕೊಟ್ಟದ್ದೇ ಅಲ್ಲದೇ "ವಿಜ್ಞಾನದ ಮಹಾನ್ ತಾರೆ"ಯೆನಿಸಿಕೊಳ್ಳುವ ಹಾದಿಯಲ್ಲಿ ನಡೆಸಿತು.

ಟ್ರನಿಟಿ ಹಾಲ್‌ನ ಚಾಪೆಲ್‌ನಲ್ಲಿ, ಹಾಕಿಂಗ್ ಮತ್ತು ಜೇನ್, ೧೯೬೫ರ ಜುಲೈನಲ್ಲಿ ಮದುವೆಯಾದರು. ಊರುಗೋಲನ್ನು ಆಧರಿಸಿ, ಕ್ಯಾಮರಾದತ್ತ ನೋಡುತ್ತಿರುವ ಹಾಕಿಂಗ್‌ನ ಹೆಮ್ಮೆಯ ಭಾವನೆ, ಆಳವಾದ ದೃಢನಿಶ್ಚಯ—ಇದಿನ್ನೂ ಪ್ರಾರಂಭ ಎಂದು ಹೇಳುತ್ತಿರುವ ಮುಖವನ್ನು ಕ್ಯಾಮರಾ ಸೆರೆ ಹಿಡಿದಿದೆ. ಮದುವೆಯ ಉಡುಪಿನಲ್ಲಿ ಸಂತೋಷದಿಂದ ನಸುನಗುತ್ತ ಎಲ್ಲ ಅಡೆತಡೆಗಳನ್ನೂ ಎದುರಿಸಬಲ್ಲೆನೆಂಬ ಆತ್ಮಸ್ಥೈರ್ಯದೊಂದಿಗೆ ನಿಂತಿದ್ದಾಳೆ ಜೇನ್. ಲಿಟಲ್ ಸೇಂಟ್ ಮೇರಿಸ್ ಲೇನ್‌ನ ಬಾಡಿಗೆಯ ಪುಟ್ಟ ಸುಂದರ ಮನೆಯೊಂದು ಅವರ ವಾಸಗೃಹವಾಯ್ತು.

ಡಿಪಾರ್ಟ್‌ಮೆಂಟ್ ಆಫ್ ಅಪ್ಲೈಡ್ ಮ್ಯಾಥಮ್ಯಾಟಿಕ್ಸ್ ಅಂಡ್ ಥಿಯರೆಟಿಕಲ್ ಫಿಸಿಕ್ಸ್ (ಡಿಎಎಂಟಿಪಿ)ಯಿಂದ ಕೇವಲ ನೂರು ಮೀಟರ್‌ಗಳ ಅಂತರದಲ್ಲಿದ್ದ ಮನೆ ಅವರಿಗೆ ಎಲ್ಲ ರೀತಿಯಲ್ಲಿ ಸರಿ ಹೊಂದುವಂತಿತ್ತು. ಹಾಕಿಂಗ್ ಸೈಕಲ್ ಉಪಯೋಗಿಸುವಂತಿರಲಿಲ್ಲ. ಎರಡು ಕೋಲುಗಳ ಸಹಾಯದಿಂದ ಕೇವಲ ಸ್ವಲ್ಪ ದೂರ ಮಾತ್ರ ನಡೆಯಬಲ್ಲವನಾಗಿದ್ದ. ಹಿನ್ನೆಲೆಯ ಮಹ್ಲರ್ ಸಂಗೀತದೊಂದಿಗೆ, ಅಡುಗೆ ಹಾಗೂ ಇತರ ಕೆಲಸಗಳಲ್ಲಿ ಸಹಾಯಮಾಡುವ ಸ್ನೇಹಿತರಿಂದ ತುಂಬಿದ ಪುಟ್ಟ ಮನೆ ಉಲ್ಲಾಸಭರಿತವಾಗಿತ್ತು.

ಹಾಕಿಂಗ್‌ಗೆ ತಾತ್ತ್ವಿಕ ಭೌತಶಾಸ್ತ್ರಕ್ಕಾಗಿ ಗಾನ್‌ವಿಲೆ ಮತ್ತು ಕೀಸ್ ಕಾಲೇಜುಗಳಿಂದ ಫೆಲೋಶಿಪ್ ಸಿಕ್ಕಿ, ತನ್ನ ಸಂಶೋಧನೆಯನ್ನು ಮುಂದುವರಿಸಲು ಸಾಧ್ಯವಾಗುವುದರೊಂದಿಗೆ, ಅದಕ್ಕಾಗಿ ವರಮಾನ ಕೂಡಾ ಸಿಗುತ್ತಿತ್ತು. ವೈದ್ಯರು ನುಡಿದಷ್ಟು ಬೇಗ ತಾನು ಸಾಯುವುದಿಲ್ಲವೆಂದು ಮನಗಂಡ ಹಾಕಿಂಗ್ ಕಪ್ಪುರಂಧ್ರಗಳ ಬಗೆಗೆ ಸಂಶೋಧನೆ ನಡೆಸಲು ರೋಜರ್ ಪೆನ್‌ರೋಸನೊಂದಿಗೆ ಸೇರಿದ. ಕ್ವಾಂಟಮ್ ಥಿಯರಿ ಹಾಗೂ ರಿಲೆಟಿವಿಟಿಯ ನಡುವೆ ಸಂಬಂಧ ಕಲ್ಪಿಸುವುದರಲ್ಲಿ ಯಶಸ್ವಿಯಾದ.

ಎಂಎನ್‌ಡಿ ರೋಗ ನಿರ್ದಿಷ್ಟತೆ ಇಲ್ಲದೆ ಬೆಳೆಯುತ್ತದೆ. ಅನೇಕ ವರ್ಷಗಳವರೆಗೂ ಹೆಚ್ಚು ವ್ಯತ್ಯಾಸ ಹೊಂದದ ರೋಗ ಇದ್ದಕ್ಕಿದ್ದಂತೆ ಬಿಗಡಾಯಿಸಬಹುದು. ೧೯೬೭ರಲ್ಲಿ ಹಾಕಿಂಗ್‌ನ ಪರಿಸ್ಥಿತಿ ವಿಷಮಿಸಿತು. ಸ್ವಲ್ಪ ಉಗ್ಗುವಂತಿದ್ದ ಅವನ ಮಾತು ಪೂರ್ಣ ಅಸ್ಪಷ್ಟವಾಯಿತು. ಸ್ವಲ್ಪ ತಿರುಗಾಡಲೂ ಊರುಗೋಲು ಉಪಯೋಗಿಸಬೇಕಾಯಿತು. ಕೆಳಗಿನಿಂದ ಮೆಟ್ಟಿಲು ಹತ್ತಿ ಮೇಲಿನ ಮಲಗುವ ಮನೆ ತಲುಪಲು ಹದಿನೈದು ನಿಮಿಷಗಳನ್ನು ತೆಗೆದುಕೊಂಡಿದ್ದು ನೋಡಿ ಅವನನ್ನು ನೋಡಲು ಬಂದ ಸ್ನೇಹಿತನಿಗೆ ಆಘಾತವಾಯಿತು. ಈ ಸಮಯಗಳಲ್ಲಿ ಹಾಕಿಂಗ್ ಯಾರಿಂದಲೂ ಸಹಾಯ ತೆಗೆದುಕೊಳ್ಳುತ್ತಿರಲಿಲ್ಲ. ತಾನು ಇತರರಷ್ಟೇ ಆರೋಗ್ಯವಂತನಲ್ಲ ಎಂದು ಸೂಚಿಸುವ ಯಾವುದೇ ನಡುವಳಿಕೆಯನ್ನು ಅವನು ತಿರಸ್ಕರಿಸುತ್ತಿದ್ದ.

"ಬಿಯಾಂಡ್ ದಿ ಬ್ಲಾಕ್ ಹೋಲ್: ಸ್ಟೀಫನ್ ಹಾಕಿಂಗ್ಸ್ ಯೂನಿವರ್ಸ್"ನ ಬರಹಗಾರ ಜಾನ್ ಬಾಸ್ಲೋ "ನಾನು ನೋಡಿರುವ ಅತ್ಯಂತ ಧೈರ್ಯಶಾಲಿ ಮನುಷ್ಯ" ಎಂದು ಹಾಕಿಂಗ್‌ನ ಬಗ್ಗೆ ಹೇಳಿದ್ದಾನೆ. ಕೆಲವರು ಅವನ ಗುಣವನ್ನು ಸಂಕಲ್ಪ ಹಾಗೂ ಮತ್ತಿತರರು ಅದನ್ನು ಮೊಂಡುತನ ಎನ್ನುತ್ತಾರೆ. ಒಂದಲ್ಲ ಒಂದು ಸಮಯದಲ್ಲಿ ನಾನು ಈ ಎರಡು ಗುಣಗಳೂ ಅವನಲ್ಲಿವೆ ಎಂದೊಪ್ಪಿದ್ದೇನೆ ಎನ್ನುತ್ತಾಳೆ ಜೇನ್.

ಇತರರು ಅವನ ಬಗ್ಗೆ ಹೆಚ್ಚಿನ ಅನುಕಂಪವೇನೂ ತೋರುತ್ತಿರಲಿಲ್ಲ. ಕೇಂಬ್ರಿಡ್ಜ್ ಅಕಾಡೆಮಿಯ ವಲಯಗಳಲ್ಲಿ ಅವನೊಬ್ಬ "ಕಠಿಣ ಮೇಧಾವಿ" ಎಂದೇ ಹೆಸರು ಪಡೆದಿದ್ದ. ಸಹೋದ್ಯೋಗಿಗಳು ಅವನ ವರ್ತನೆಯನ್ನು ಒಮ್ಮೊಮ್ಮೆ ಉದ್ಧಟತನವೆಂದೂ ಹೇಳುತ್ತಿದ್ದರು. ೧೯೬೬ರಲ್ಲಿ ಹಾಕಿಂಗ್‌ನ ಮೊದಲ ಮಗ ರಾಬರ್ಟ್ ಹುಟ್ಟಿದುದು ಹಾಕಿಂಗ್

ಜೀವನದ ಮತ್ತೊಂದು ತಿರುವು. ಅವನ ವೃತ್ತಿಜೀವನವೂ ಅವನನ್ನು ಮೇಲಂತಸ್ತಿಗೊಯ್ಯುತ್ತಿತ್ತು. "ಸಿಂಗ್ಯುಲ್ಯಾರಿಟೀಸ್ ಅಂಡ್ ದಿ ಜಾಮಿಟ್ರಿ ಆಫ್ ಸ್ಪೇಸ್ ಟೈಮ್" ಎಂಬ ಅವನ ಪ್ರಬಂಧಕ್ಕೆ ಗೌರವಾನ್ವಿತ ಆಡಮ್ಸ್ ಬಹುಮಾನ ದೊರೆಕಿತ್ತು. "ಐನ್‌ಸ್ಟೈನ್‌ನ ಉತ್ತರಾಧಿಕಾರಿ" ಎಂಬ ಬಿರುದು ಅವನನ್ನು ಹಿಂಬಾಲಿಸುತ್ತಿತ್ತು. ಎಲ್ಲ ಅಡಚಣೆಗಳ ನಡುವೆಯೂ ಆತ ತಂದೆಯಾಗಿದ್ದ. ಇದು ಅವನಿಗೆ ಹೊಸದೊಂದು ಹುರುಪನ್ನೇ ತಂದಿತ್ತು ಎನ್ನುತ್ತಾಳೆ ಜೇನ್.

ಅರವತ್ತರ ಅಂತ್ಯಭಾಗ ತಾರುಣ್ಯ ಹಾಗೂ ಜೀವನದ ಹೊಸ ಹೊಸ ಆಸೆಗಳ ಉದಯ ಕಾಲ. ಹಾಕಿಂಗ್ ಮತ್ತು ಜೇನ್ ಲಿಟಲ್ ಸೇಂಟ್ ಮೇರಿ ರಸ್ತೆಯ ಮನೆಯನ್ನು ಕೊಂಡರು. ಅವನ ತಂದೆ ತಾಯಿ ಆ ಮನೆಯನ್ನು ಸಜ್ಜುಗೊಳಿಸಲು ಹಣ ಕೊಟ್ಟರು. ಸ್ನೇಹಿತರು ಬಣ್ಣ ಹಾಗೂ ವಾಲ್ ಪೇಪರಿನಿಂದ ಮನೆಯನ್ನು ಸಿಂಗರಿಸಿದರು. ಆದರೆ ಮನೆಗೆಲಸಗಳ ನಡುವೆ ಬೆಳೆಯುತ್ತಿರುವ ಮಗುವನ್ನೂ, ಅಶಕ್ತ ಗಂಡನನ್ನೂ ನೋಡಿಕೊಳ್ಳುವ ಹೊಣೆಗಾರಿಕೆ ಜೇನಳ ಮೇಲೆ ಒತ್ತಡ ತರುತ್ತಿತ್ತು. ಆದರೂ ಹಲವಾರು ವರ್ಷಗಳ ನಂತರವೇ ಈ ಅದುಮಿಟ್ಟಿದ್ದ ಒತ್ತಡ ಹೊರಕಾಣಿಸಿಕೊಳ್ಳಲಾರಂಭಿಸಿದ್ದು.

ಹಾಕಿಂಗ್ ಮತ್ತು ಪೆನ್‌ರೋಸ್ ಈಗ ಐನ್‌ಸ್ಟೈನ್‌ನ ರಿಲೆಟಿವಿಟಿ ಥಿಯರಿ ಮೇಲೆ ಮತ್ತೆ ಸಂಶೋಧನೆ ನಡೆಸತೊಡಗಿದರು. ವಿಚಿತ್ರವೆಂದರೆ ಇಪ್ಪತ್ತನೆಯ ಶತಮಾನದ ವರೆಗೂ ಬ್ರಹ್ಮಾಂಡಕ್ಕೊಂದು ಆರಂಭವಿದೆ ಎಂಬ ಅಂಶದ ಬಗ್ಗೆ ಯಾವ ವಿಜ್ಞಾನಿಯೂ ಯೋಚಿಸಿಯೇ ಇರಲಿಲ್ಲ. ಬ್ರಹ್ಮಾಂಡ ಬದಲಾವಣೆ ಇಲ್ಲದೆ ಅಚಲವಾದುದೆಂದೂ, ನಕ್ಷತ್ರಗಳು ನಿರ್ದಿಷ್ಟ ಸ್ಥಳಗಳಲ್ಲಿ ತೂಗಾಡುತ್ತವೆಂದೂ ಪ್ರತೀತಿ ಇತ್ತು. ಆದರೆ ಸಂಶೋಧನೆಗಳ ಪ್ರಕಾರ ನಿಹಾರಿಕೆಗಳು (ಗ್ಯಾಲಕ್ಸಿ) ದೂರ ದೂರವಾಗುತ್ತಿವೆ ಎಂದಾದರೆ ಒಂದು ಸಮಯದಲ್ಲಿ ಅವು ಹತ್ತಿರ ಹತ್ತಿರವಿದ್ದಿರಲೇಬೇಕಲ್ಲವೆ? ಹೀಗೆ ಯೋಚಿಸಲು ಶುರುಮಾಡಿ, ೧೯೭೦ರಲ್ಲಿ ಹಾಕಿಂಗ್ ಮತ್ತು ಪೆನ್‌ರೋಸ್ "ಹದಿನೈದು ಲಕ್ಷಕೋಟಿ ವರ್ಷಗಳ ಹಿಂದೆ ಒಂದು ಅಖಂಡದಿಂದ ಬ್ರಹ್ಮಾಂಡ ಸೃಷ್ಟಿಯಾಯಿತು" ಎಂಬ "ಬಿಗ್ ಬ್ಯಾಂಗ್" ಸಿದ್ಧಾಂತಗಳನ್ನು ಪ್ರಕಟಿಸಿದರು. 'ಕಾಲಕ್ಕೆ ಒಂದು ಪ್ರಾರಂಭವಿದೆ ಎಂದು ನಾವು ತೋರಿಸಿದ್ದೇವೆ' ಎಂದ ಹಾಕಿಂಗ್. ತನ್ನ ಸ್ವಂತ ಸಂಶೋಧನೆಗಳಲ್ಲಿ ಮೊದಲನೆಯದಾದ ಇದು ಹಾಕಿಂಗ್‌ನ ಪಿಎಚ್‌ಡಿಯ ಪ್ರಬಂಧದ ಮುಂದುವರೆದ ಭಾಗ ಮಾತ್ರ ಆಗಿತ್ತು. ಹೀಗಿರುವಾಗ "ಮುಂದೆ ಮತ್ತಾವ ಸಂಶೋಧನೆ ಅವನಿಂದ ಬರಲಿದೆ" ಎಂದು ಅಚ್ಚರಿಪಟ್ಟರು ವಿಜ್ಞಾನಿಗಳು.

ಆದರೆ, ದೇಹಸ್ಥಿತಿಯನ್ನು ನೋಡಿದರೆ, ಹಾಕಿಂಗ್‌ನಿಂದ ಹೆಚ್ಚೇನನ್ನೂ ನಿರೀಕ್ಷಿಸುವಂತಿರಲಿಲ್ಲ. ೧೯೭೦ ರಿಂದ ಜೇನ್ ಹಾಗೂ ಇತರ ಸ್ನೇಹಿತರ ಬಲವಂತದಿಂದ ಹಾಕಿಂಗ್ ಊರುಗೋಲುಗಳನ್ನು ಬಿಟ್ಟು ಗಾಲಿ ಕುರ್ಚಿಯನ್ನು ಆಶ್ರಯಿಸಬೇಕಾಯ್ತು. ಕ್ರಮೇಣ ನಶಿಸುತ್ತಿದ್ದ ಅವನ ಆರೋಗ್ಯ ಸ್ಥಿತಿಯನ್ನು ಕಂಡ ಇತರರು ವಿಷಣ್ಣ-

ರಾದರೂ, ನಿರಾಸೆ ತನ್ನ ಮೇಲೆ ಅಧಿಪತ್ಯ ನಡೆಸಲು ಬಿಡಲಿಲ್ಲ ಹಾಕಿಂಗ್. ತನ್ನ ನ್ಯೂನತೆಗಳನ್ನು ಹಗುರವಾಗೆಣಿಸಿ ಯಾವಾಗಲೂ ಸಂತೋಷವಾಗಿರುತ್ತ ಉತ್ಸಾಹಪೂರ್ಣ ದೃಷ್ಟಿಯಿಂದ ಜೀವನವನ್ನು ನೋಡುವುದು ನಿಜಕ್ಕೂ ಹಾಕಿಂಗ್‌ಗೆ ದೇವರಿತ್ತ ದೊಡ್ಡ ಬಳುವಳಿ.

ತನ್ನ ಸ್ಥಿತಿಯ ಬಗ್ಗೆ ಎಂದಾದರೂ ನಿರಾಸೆಯಾಗಿದೆಯೇ ಎಂದು ಕೇಳಿದಾಗ ತಾನು ಎಂಎನ್‌ಡಿಯ ಪರೀಕ್ಷೆಗಳಿಗಾಗಿ ಆಸ್ಪತ್ರೆಯಲ್ಲಿದ್ದ ಸಮಯವನ್ನು ನೆನೆಸಿಕೊಳ್ಳುತ್ತಾನೆ—"ನನ್ನೆದುರ ಹಾಸಿಗೆಯ ಮೇಲೆ ಲ್ಯುಕೇಮಿಯಾದಿಂದಾಗಿ ಒಬ್ಬ ಹುಡುಗ ಸಾಯುತ್ತಿದ್ದ. ನನಗಿಂತಲೂ ದುಸ್ಥಿತಿಯಲ್ಲಿದ್ದ ಅನೇಕ ಜನರಿದ್ದರು. ನನ್ನ ಬಗ್ಗೆ ನಾನು ನಿರಾಸೆಯಿಂದ ಚಿಂತಿಸುವುದಾದರೆ ಆ ಹುಡುಗನನ್ನು ನಾನು ಜ್ಞಾಪಿಸಿಕೊಳ್ಳುತ್ತೇನೆ" ಎನ್ನುತ್ತಾನೆ ಹಾಕಿಂಗ್.

೧೯೭೦ರಲ್ಲಿ ಅವನ ಎರಡನೆಯ ಮಗು ಲೂಸಿಯ ಜನನ. ಹಾಗೇ ಆಧುನಿಕ ವರ್ಷಗಳಲ್ಲಿ ವಿಜ್ಞಾನದ ಅತ್ಯಂತ ಪ್ರಮುಖ ಸಂಶೋಧನೆಗಳನ್ನು ನಡೆಸಿದ್ದ ಹಾಕಿಂಗ್. ಅವನ ಸಾಧನೆಗಳು ಕೇಂಬ್ರಿಡ್ಜ್‌ನಲ್ಲಿ ಪ್ರಚಾರಪಡೆಯುತ್ತಿದ್ದವು. ಡಿಎಎಂಟಿಪಿಯ ಅವನ ಕೆಲಸಗಳೊಂದಿಗೆ, ವಾರಕ್ಕೆ ಮೂರು ದಿನ 'ಇನ್‌ಸ್ಟಿಟ್ಯೂಟ್ ಆಫ್ ಅಸ್ಟ್ರಾನಮಿಯ' ಅಧ್ಯಾಪಕ ವರ್ಗದವರೊಂದಿಗೆ ಕೆಲಸ ಮಾಡುತ್ತಿದ್ದ ಹಾಕಿಂಗ್‌ನ ಹೆಸರು ಗೌರವಾನ್ವಿತವಾಗಿತ್ತು. ಅವನೊಂದಿಗೆ ಚರ್ಚಿಸಲು ವಿಜ್ಞಾನಿಗಳ ಗುಂಪನ್ನೇ ಇನ್‌ಸ್ಟಿಟ್ಯೂಟ್ ತನ್ನತ್ತ ಸೆಳೆಯುತ್ತಿತ್ತು.

ಈ ವೇಳೆಗೆ ಕಾಗದ, ಪೆನ್ನು, ಟೈಪ್‌ರೈಟರ್‌ಗಳನ್ನೂ ಉಪಯೋಗಿಸಲಾಗುತ್ತಿರಲಿಲ್ಲ ಹಾಕಿಂಗ್‌ಗೆ. ಅತಿ ಉದ್ದದ ಲೆಕ್ಕಗಳನ್ನೂ ಬರೆದುಕೊಳ್ಳದೇ ಮಾಡಬೇಕಿತ್ತು. "ಇದೊಂದು ಅತ್ಯದ್ಭುತ ಸಾಧನೆ" ಎನ್ನುತ್ತಾನೆ ಅವನ ಸಹೋದ್ಯೋಗಿಯೊಬ್ಬ. ಸಂಗೀತವನ್ನು ಬರೆಯದೇ ಮನಸ್ಸಿನಲ್ಲೇ ಸೃಷ್ಟಿಮಾಡಿಟ್ಟುಕೊಳ್ಳುತ್ತಿದ್ದ ಮೊಜಾರ್ಟ್‌ನಷ್ಟೇ ಅದ್ಭುತ ಅವನ ಸಾಧನೆ. ಸೆಕ್ರೆಟರಿಯೊಬ್ಬನಿಗೆ ತನ್ನ ಜ್ಞಾಪಕ ಶಕ್ತಿಯಿಂದ ಹೇಳಿ ಬರೆಸಿದ ನಲವತ್ತು ಪುಟಗಳ ಸಮೀಕರಣದಲ್ಲಿ (ಇಗ್ನೇಷನ್) ತಾನು ಮಾಡಿದ ಒಂದು ತಪ್ಪನ್ನು ೨೪ ಗಂಟೆಗಳ ನಂತರ ಫೋನಿನಲ್ಲಿ ತಿಳಿಸಿದನಂತೆ ಹಾಕಿಂಗ್.

೧೯೭೩ರಲ್ಲಿ ಹಾಕಿಂಗ್ ಮತ್ತೊಬ್ಬ ಸಹೋದ್ಯೋಗಿಯೊಡನೆ ಸೇರಿ ಬರೆದ "ದಿ ಲಾರ್ಜ್ ಸ್ಕೇಲ್ ಸ್ಟ್ರಕ್ಚರ್ ಆಫ್ ಸ್ಪೇಸ್ ಟೈಮ್" ಎಂಬ ಗ್ರಂಥವನ್ನು ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಪ್ರಕಟಪಡಿಸಿತು. ಪುಸ್ತಕ ಎಷ್ಟು ಕ್ಲಿಷ್ಟವಾದ ಈಕ್ವೇಷನ್‌ಗಳಿಂದ ತುಂಬಿದೆಯೆಂದರೆ, ಅನೇಕ ವಿದ್ಯಾರ್ಥಿಗಳು ಈ ಪುಸ್ತಕ ತಮ್ಮ ಪುಸ್ತಕ ಬೀರುಗಳಲ್ಲಿ ಅದ್ಭುತವಾಗಿ ಕಾಣುತ್ತದೆಯೆಂದು ಖರೀದಿಸಿದ್ದಾರೆಂಬ ನಂಬಿಕೆ!

ಸಾಮಾನ್ಯ ಆರೋಗ್ಯವಂತ ಮನುಷ್ಯನಂತೆ ಜೀವಿಸಲು ದೃಢ ನಿಶ್ಚಯ ಮಾಡಿದ ಹಾಕಿಂಗ್‌ನ ಹೋರಾಟಗಾರ ಮನೋಭಾವ ವಿಷಯ ಕೆಂಬ್ರಿಡ್ಜ್‌ನ ಆಚೆಗೂ ಹಬ್ಬಿತು. ಭಾಷಣಗಳನ್ನು ಮಾಡುತ್ತ, ಸೆಮಿನಾರುಗಳಲ್ಲಿ ಭಾಗವಹಿಸುತ್ತ ತನ್ನ ಅದ್ಭುತ ಸಾಮರ್ಥ್ಯವನ್ನು ತೋರಿಸುತ್ತ ಸಂತೋಷ

ದಿಂದ ವಿಶ್ವವನ್ನು ಸುತ್ತಿದ ಹಾಕಿಂಗ್, ಅವನ ಅಮೆರಿಕನ್ ಸ್ನೇಹಿತ ಡೇವಿಡ್ ಸ್ಟ್ಯುವರ್ಟ್ ಗ್ರೀನ್‌ವಿಚ್ ಹಳ್ಳಿಯ ಒಂದು ಸಂತೋಷಕೂಟಕ್ಕೆ ಹಾಕಿಂಗ್‌ನನ್ನು ಕರೆದೊಯ್ದಾಗ ಗಾಲಿಕುರ್ಚಿಯನ್ನು ತಿರುಗಿಸುತ್ತಾ ಜೇನಳೊಂದಿಗೆ ನರ್ತಿಸಿದ!

೧೯೭೩ರ ವೇಳೆಗೆ ಹಾಕಿಂಗ್ ಕಪ್ಪುರಂಧ್ರಗಳ ಬಗ್ಗೆ ಸಂಶೋಧನೆ ನಡೆಸುತ್ತಿದ್ದ. ಅದುವರೆಗೂ, "ಕಪ್ಪುರಂಧ್ರದಿಂದ ಏನೂ ತಪ್ಪಿಸಿಕೊಂಡು ಹೋಗುವಂತಿಲ್ಲ—ಬೆಳಕು ಕೂಡಾ" ಎಂಬ ನಂಬಿಕೆ ಇತ್ತು. ಇದನ್ನೂ, ಹಾಗೂ ರಿಲೆಟಿವಿಟಿ ಥಿಯರಿಯ ಪ್ರಕಾರ "ಕಪ್ಪುರಂಧ್ರದ ಮೇಲ್ಪದರ ಕುಗ್ಗುವುದಿಲ್ಲ" ಎಂಬುದನ್ನೂ ಸುಳ್ಳೆಂದು ಸಾಬೀತು ಪಡಿಸಿ, ಕಪ್ಪುರಂಧ್ರ ಕುಗ್ಗುವುದಷ್ಟೇ ಅಲ್ಲ, ಶಕ್ತಿಯ ಕಣಗಳನ್ನು ಹೊರಹಾಕುತ್ತದೆಂದೂ ತೋರಿಸಿದ. ೧೯೭೪ರ ಫೆಬ್ರವರಿಯಲ್ಲಿ ವಿಜ್ಞಾನಿಗಳ ಮೇಳವನ್ನು ಉದ್ದೇಶಿಸಿ ಮಾತಾಡಿದ ಹಾಕಿಂಗ್‌ನ ಅಭಿಪ್ರಾಯಗಳನ್ನು ಎಲ್ಲರೂ ಅಲ್ಲಗಳೆದರು. "ಬ್ಲಾಕ್ ಹೋಲ್ ಎಕ್ಸ್‌ಪ್ಲೋಷನ್ಸ್?" ಎಂಬ ಲೇಖನವನ್ನು ಹಾಕಿಂಗ್ "ನೇಚರ್" ವಿಜ್ಞಾನ ಪತ್ರಿಕೆಯಲ್ಲಿ ಪ್ರಕಟಿಸಿದ. ಈ ಲೇಖನ "ಭೌತಶಾಸ್ತ್ರದ ಇತಿಹಾಸದಲ್ಲೇ ಅತ್ಯದ್ಭುತ" ಎಂದು ಡಾ|| ಸಿಯಾಮಾ ಅಭಿಪ್ರಾಯಪಟ್ಟರು. ಇದರಿಂದ ಎಲ್ಲ ಭೌತಶಾಸ್ತ್ರದ ಪ್ರಯೋಗಶಾಲೆಗಳಲ್ಲಿ ಮಾತಿನ ಕೇಂದ್ರವಾದ ಹಾಕಿಂಗ್. ಹಾಕಿಂಗ್‌ನ ಸಿದ್ಧಾಂತ ಸರಿಯೆಂದು ಸ್ವೀಕರಿಸಲ್ಪಟ್ಟಿತು.

ಅಂದಿನಿಂದ ಬ್ಲ್ಯಾಕ್‌ಹೋಲ್‌ಗಳಿಂದ ಹೊರಬಂದ ಕಣಗಳು "ಹಾಕಿಂಗ್ ರೇಡಿಯೇಷನ್" ಎಂದೇ ಹೆಸರಾದವು. ವಿಜ್ಞಾನ ಕ್ಷೇತ್ರದಲ್ಲೇ ಅತ್ಯುತ್ತಮವೆನಿಸಿದ ಗೌರವ ಅವನಿಗೆ ದೊರೆಯಿತು. ತನ್ನ ೩೨ನೆಯ ವಯಸ್ಸಿಗೇ ರಾಯಲ್ ಸೊಸೈಟಿಯ "ಫೆಲೋ" ಎನಿಸಿದ ಹಾಕಿಂಗ್ 'ಆಧುನಿಕ ಯುಗದ ಅತಿ ಕಿರಿಯ ವಯಸ್ಸಿನ ಹಿರಿಯ ವಿಜ್ಞಾನಿ' ಎಂದು ಹೆಸರಾದ. ರಿಲೆಟಿವಿಟಿ ಥಿಯರಿ ಹಾಗೂ ಕ್ವಾಂಟಮ್ ಥಿಯರಿಯ ಒಂದು ಭಾಗವನ್ನು ಒಟ್ಟು ಸೇರಿಸಿ ಆಧುನಿಕ ಭೌತಶಾಸ್ತ್ರದ "ಥಿಯರಿ ಆಫ್ ಎವೆರಿಥಿಂಗ್"ನ್ನು ಸಾಧಿಸುವತ್ತ ಮೊದಲ ಹೆಜ್ಜೆ ಇರಿಸಿದ. ಲಾಸ್ ಏಂಜಲೀಸ್‌ನ ಪಸಾಡೆನಾದಲ್ಲಿರುವ ಕ್ಯಾಲಿಫೋರ್ನಿಯಾದ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಒಂದು ವರ್ಷ ತನ್ನಲ್ಲಿ ವಿಶ್ವಶಾಸ್ತ್ರವನ್ನು ಅಭ್ಯಸಿಸುವಂತೆ ಹಾಕಿಂಗ್‌ನನ್ನು ಆಮಂತ್ರಿಸಿತು. ಜೇನ್ ಮತ್ತು ಅವನ ಇಬ್ಬರು ಮಕ್ಕಳು ಅವನ ಜೊತೆಗೂಡಿದರು.

೧೯೭೫ರಲ್ಲಿ ಕ್ಯಾಲಿಫೋರ್ನಿಯಾದಿಂದ ಹಿಂತಿರುಗಿದಾಗ ನಾಲ್ಕು ಮಂದಿಗೆ ಮನೆ ಸಾಲದೆನಿಸಿದಾಗ ಮೆಟ್ಟಿಲು ಹತ್ತಲಾಗದ ಹಾಕಿಂಗ್ ದೊಡ್ಡ ತೋಟವಿದ್ದ ಕೆಳ ಅಂತಸ್ತಿನ ವಿಕ್ಟೋರಿಯನ್ ಮನೆಗೆ ವಾಸ್ತವ್ಯ ಬದಲಿಸಿದ. ಹಾಕಿಂಗ್‌ನ ಸಂಶೋಧನಾ ವಿದ್ಯಾರ್ಥಿಯೊಬ್ಬ ಅವನೊಡನೆ ವಾಸಿಸಲು ಬಂದ. ತನಗೆ ದೊರೆಯುತ್ತಿದ್ದ ಮುಫತ್ತಾದ ವಾಸ್ತವ್ಯದ ಅನುಕೂಲಕ್ಕೆ ಬದಲಾಗಿ ಆತ ಹಾಕಿಂಗ್‌ನ ಕಾರ್ಯದರ್ಶಿಯಾಗಿ, ಸಹಾಯಕನಾಗಿ ಕೆಲಸ ಮಾಡಿದ. ಇನ್ನೊಂದು ಸುಧಾರಣೆಯೆಂದರೆ, ವಿದ್ಯುತ್ ಗಾಲಿಕುರ್ಚಿ. ಇದು ತಿರುಗಾಟ

ದಲ್ಲಿ ಹಾಕಿಂಗ್‌ಗೆ ಸಂಪೂರ್ಣ ಸ್ವಾತಂತ್ರ್ಯವಿತ್ತು. "ಅವನಿಗೆ ಭಯವೆಂಬುದೇ ಇಲ್ಲ" ಎನ್ನುತ್ತಾನೆ ಪತ್ರಕರ್ತನೊಬ್ಬ. ತನ್ನ ವ್ಯಕ್ತಿತ್ವವನ್ನು ವ್ಯಕ್ತಪಡಿಸಲು ಗಾಲಿ ಕುರ್ಚಿಯನ್ನು ಉಪಯೋಗಿಸುತ್ತಾನೆ ಹಾಕಿಂಗ್. ಕೂಗಲು ಸಾಧ್ಯವಿಲ್ಲದ ಹಾಕಿಂಗ್, ಯಾರಾದರೂ ತನ್ನ ಸಮಯವನ್ನು ವ್ಯರ್ಥಗೊಳಿಸುತ್ತಿದ್ದಾರೆಂದು ತಿಳಿದೊಡನೆ ಕುರ್ಚಿಯನ್ನು ನಿಂತಲ್ಲೇ ತಿರುಗಿಸಿ, ಸಿಟ್ಟಿನಿಂದ ಆಚೆ ಹೋಗುತ್ತಾನೆ. ಅವನ ವಿದ್ಯಾರ್ಥಿಗಳು ಸಹೋದ್ಯೋಗಿಗಳು ಅತಿ ಶೀಘ್ರವಾಗಿ ಅವನ ಪ್ರತಿಕ್ರಿಯೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ.

ನಾಲ್ಕನೆಯ ಬದಲಾವಣೆ ಜೇನಳಿಗೆ ಸಂಬಂಧಿಸಿದ್ದಾಗಿದೆ. ಹಾಕಿಂಗ್ ತನ್ನ ಯಶಸ್ಸಿಗಾಗಿ, ಒಳಿತಿಗಾಗಿ ಜೇನ್ ದುಡಿದುದನ್ನು ಹೆಮ್ಮೆಯಿಂದ ಹೊಗಳುತ್ತಾನೆಂದು ಸ್ನೇಹಿತರು ಜ್ಞಾಪಿಸಿಕೊಳ್ಳುತ್ತಾರೆ. ಆದರೆ ಅವನ ಪ್ರತಿಷ್ಠೆ ಹೆಚ್ಚಿದಂತೆ ೧೯೭೪–೭೬ ರಲ್ಲೇ ಆತ ಆರು ಹಿರಿಯ ಪ್ರಶಸ್ತಿಗಳನ್ನು ಪಡೆದ— ತನ್ನನ್ನು ಆತ ಕಡೆಗಾಣಿಸುತ್ತಿದ್ದಾನೆಂದು ನೋವನುಭವಿಸಿದಳು ಜೇನ್. "ಕೆಲವು ಸಭೆಗಳಿಗೆ, ಸಂತೋಷ ಕೂಟಗಳಿಗೆ ಹೋದಾಗ ನನ್ನನ್ನು ಜನರಿಗೆ ಪರಿಚಯಿಸುವುದಿಲ್ಲ. ಹಿಂದೆಯೇ ಉಳಿಯುವ ನಾನು ಯಾರೊಂದಿಗೆ ಮಾತಾಡುತ್ತಿದ್ದೇನೆಂದೂ ಅರ್ಥವಾಗಿರುವುದಿಲ್ಲ" ಎಂದಳು ಜೇನ್. ಲಂಡನ್ ವಿಶ್ವವಿದ್ಯಾಲಯದಿಂದ ಆಧುನಿಕ ಭಾಷೆಗಳನ್ನು ಅಭ್ಯಾಸ ಮಾಡಿ ಪದವಿ ಪಡೆದಿದ್ದಳು ಜೇನ್. ಈಗ ಮಧ್ಯ ಕಾಲೀನ ಭಾಷೆಗಳ ಬಗ್ಗೆ ಪಿಎಚ್‌ಡಿ ಮಾಡಲು ನಿರ್ಧರಿಸಿದಳು. ಅದೇನೂ ಸಂತಸಕರ ಅನುಭವವಾಗಿರಲಿಲ್ಲ. ಆದರೂ ವಿದ್ಯಾಭ್ಯಾಸ ಮುಂದುವರಿಸಿ ಜೇನ್ ಫ್ರೆಂಚ್ ಹಾಗೂ ಸ್ಪ್ಯಾನಿಷ್ ಭಾಷೆಗಳ ಶಿಕ್ಷಕಿಯಾಗಿ ಕೇಂಬ್ರಿಡ್ಜ್ ಸೇರಿದಳು.

ತಾನು ಒಳ್ಳೆಯ ಗಣಿತಜ್ಞಳಲ್ಲವೆನ್ನುವುದು ವಿಷಾದನೀಯ ಎಂದು ಜೇನ್ ತಿಳಿದಿದ್ದಳು. ಇದರಿಂದ ಹಾಕಿಂಗ್‌ನ ಕೆಲಸಗಳನ್ನು ಸಂಪೂರ್ಣ ಅರ್ಥಮಾಡಿಕೊಳ್ಳುವುದು ಹಾಗೂ ಹಾಕಿಂಗ್ ಅವಳಿಗೆ ಅದನ್ನು ವಿವರಿಸಿ ಹೇಳುವುದು ಎರಡೂ ಕಷ್ಟದಾಯಕವಾಗಿತ್ತು. ಹಾಗೇ ಧಾರ್ಮಿಕ ಜೀವನದ ಬಗ್ಗೆ ಸಮಸ್ಯೆಗಳೇಳುತ್ತಿದ್ದವು. ಧರ್ಮದಲ್ಲಿ ನಂಬಿಕೆಯಿಟ್ಟು ಬೆಳೆದವಳು ಜೇನ್. ದೇವರಲ್ಲಿ ನನಗೆ ನಂಬಿಕೆ ಇಲ್ಲದಿದ್ದರೆ ನಾನು ಹಾಕಿಂಗ್‌ನನ್ನು ಮದುವೆಯಾಗಲು ಮತ್ತು ಅವನ ಜೊತೆ ಬಾಳಲು ಸಾಧ್ಯವಾಗುತ್ತಲೇ ಇರಲಿಲ್ಲ" ಎನ್ನುತ್ತಿದ್ದಳು ಜೇನ್. ಆದರೆ ವಿಜ್ಞಾನಿ ಹಾಕಿಂಗ್‌ನ ಪ್ರಕಾರ "ಬ್ರಹ್ಮಾಂಡದ ಸೃಷ್ಟಿಯ ಬಗೆಗಿನ ನನ್ನ ಕೆಲಸ ವಿಜ್ಞಾನ ಹಾಗೂ ಧರ್ಮದ ಸೀಮೆಯ ಮೇಲೆ ನಿಂತಿದೆ. ಆದರೆ ನಾನು ವಿಜ್ಞಾನದ ಪರವಾಗಿದ್ದೇನೆ."

೧೯೭೭ರಿಂದ ಹಾಕಿಂಗ್‌ನ ಸಾಧನೆಗಳು ಹೆಚ್ಚು ಹೆಚ್ಚು ಎತ್ತರಕ್ಕೇರುತ್ತಿರುವುದರ ಬಗ್ಗೆ ಎಲ್ಲೆಡೆ ಪ್ರಚಾರವಾಗತೊಡಗಿತು. ಹೆಚ್ಚು ಹೆಚ್ಚು ಗೌರವ ಪದವಿಗಳು ಅವನನ್ನರಸಿ ಬಂದವು. ೧೯೭೮ರಲ್ಲಿ ವಾಷಿಂಗ್ಟನ್ನಿನ ಕೂಟವೊಂದರಲ್ಲಿ ಹಾಕಿಂಗ್‌ಗೆ ಗೌರವಾನ್ವಿತ "ಆಲ್ಬರ್ಟ್ ಐನ್‌ಸ್ಟೈನ್ ಪಾರಿತೋಷಕ"ವನ್ನು ನೀಡಲಾಯಿತು. ಮುಂದಿನ ನೊಬೆಲ್ ಪ್ರಶಸ್ತಿ ಅವನದೇ ಎಂಬ ವದಂತಿಯೂ ಇತ್ತು. ಆದರೆ ಅದು ಸಾಧ್ಯವಿಲ್ಲದ ಮಾತು.

ಇದುವರೆಗೂ ಕೇವಲ ಇಬ್ಬರು ಮಾತ್ರ ಖಗೋಳಶಾಸ್ತ್ರಜ್ಞರು ಈ ಪ್ರಶಸ್ತಿ ಪಡೆದಿದ್ದಾರೆ.

೧೯೭೯ರಲ್ಲಿ ಜೇನ್ ಮತ್ತು ಹಾಕಿಂಗ್‌ರ ಮೂರನೆಯ ಮಗು ಟಿಮೊಥಿ ಹುಟ್ಟಿದಾಗ ಮನೆ ಮತ್ತೊಮ್ಮೆ ಹರ್ಷದಿಂದ ತುಂಬಿತು. ಜೇನ್‌ಗೆ ತನ್ನ ಶಿಕ್ಷಕಿಯ ಕೆಲಸದ ಬಗ್ಗೆ ತೃಪ್ತಿ ಇತ್ತು. ಎಲ್ಲಕ್ಕೂ ಗರಿ ಮೂಡಿಸಿದ್ದು ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಹಾಕಿಂಗ್‌ನನ್ನು "ಲುಕೇಸಿಯನ್ ಗಣಿತಶಾಸ್ತ್ರದ ಪ್ರೊಫೆಸರ್" ಆಗಿ ನೇಮಿಸಿದ್ದು. ಹಿಂದೆ ಆ ಸ್ಥಾನವನ್ನಲಂಕರಿಸಿದವನು ಸರ್ ಐಸಾಕ್ ನ್ಯೂಟನ್.

ಪ್ರಾರಂಭೋತ್ಸವದಲ್ಲಿ ಹಾಕಿಂಗ್ ಅತ್ಯಂತ ಪ್ರತಿಭಾಪೂರ್ಣ ಭಾಷಣ ಮಾಡಿ, "ಈ ಶತಮಾನದ ಅಂತ್ಯದ ವೇಳೆಗೆ "ಥಿಯರಿ ಆಫ್ ಎವೆರಿಥಿಂಗ್"ಅನ್ನು ಸಾಧಿಸಬಹುದು" ಎಂದ. ಸಭಾಂಗಣದಿಂದ ಹೊರಹೊರಟ ವೀಕ್ಷಕರು ಇದನ್ನು ಯಾರಾದರೂ ಸಾಧಿಸಬಹುದಾಗಿದ್ದರೆ ಗಾಲಿಕುರ್ಚಿಯಲ್ಲಿ ಕುಳಿತು, ಆತ್ಮವಿಶ್ವಾಸದಿಂದ ಪ್ರಬಲ ಹೇಳಿಕೆಗಳನ್ನು ನೀಡುತ್ತಿದ್ದ ಹಾಕಿಂಗ್‌ನಿಂದ ಮಾತ್ರ ಸಾಧ್ಯ ಎಂಬುದನ್ನರಿತಿದ್ದರು.

ಲುಕೇಸಿಯನ್ ಪ್ರೊಫೆಸರ್ ಆದುದು ಕೇಂಬ್ರಿಡ್ಜ್‌ನಲ್ಲಿ ಹಾಕಿಂಗ್‌ನ ಸಾಮಾಜಿಕ ಪ್ರತಿಷ್ಠೆಯನ್ನು ಹೆಚ್ಚಿಸಿತು. ಸಮಾಜದ ಗಣ್ಯವ್ಯಕ್ತಿಗಳೆಂದು ಪರಿಗಣಿಸಲ್ಪಟ್ಟ ಹಾಕಿಂಗ್ ದಂಪತಿಗಳು ಅನೇಕ ವೇಳೆ ಸಂಗೀತ ಸಭೆಗಳಲ್ಲಿ, ಭೋಜನ ಕೂಟಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಹಾಕಿಂಗ್‌ನ ಅಶಕ್ತತೆ ಅವನನ್ನು ತಿಳಿಯದವರಲ್ಲಿ ಕೆಲವೊಮ್ಮೆ ಗಲಿಬಿಲಿಯನ್ನುಂಟುಮಾಡುತ್ತಿತ್ತು. ಆದರೆ ರೋಗ ಹಾಕಿಂಗ್‌ಗೆ ಮುಖ್ಯವಾದುದಾಗಿರಲಿಲ್ಲ. ಅವನ ಶರೀರದ ಅತಿ ಮುಖ್ಯ ಭಾಗವಾದ ಮೆದುಳಿಗೆ ಮಾತ್ರ ರೋಗ ತಾಕಿರಲಿಲ್ಲ, ಅವನ ಕೆಲಸಕ್ಕೂ ಯಾವುದೇ ತೊಂದರೆಯನ್ನು ತಂದಿರಲಿಲ್ಲ. "ಖಾಯಿಲೆ ಪ್ರಾರಂಭವಾಗುವ ಮೊದಲು ನಾನು ಜೀವನದ ಬಗ್ಗೆ ಬಹಳ ಬೇಸರದಿಂದಿದ್ದೆ. ನಾನೀಗ ಹೆಚ್ಚು ಸಂತೋಷವಾಗಿದ್ದೇನೆ. ಶಾರೀರಿಕವಾಗಿ ನೀವು ಅಶಕ್ತರಾಗಿದ್ದರೂ, ಮಾನಸಿಕವಾಗಿ ಅಶಕ್ತರಾಗಿರಲು ಸಾಧ್ಯವಿಲ್ಲ." ಒಮ್ಮೆ ಈ ರೋಗದಿಂದ ನೀವು ಯಾವುದಕ್ಕೆ ಪಶ್ಚಾತ್ತಾಪ ಪಟ್ಟುಕೊಳ್ಳುತ್ತೀರೆಂದು ಕೇಳಿದ್ದಕ್ಕೆ "ಶಾರೀರಿಕವಾಗಿ ನನ್ನ ಮಕ್ಕಳೊಂದಿಗೆ ಆಡಲು ಸಾಧ್ಯತೆ ಇಲ್ಲದಿರುವುದು" ಎಂದಿದ್ದ ಹಾಕಿಂಗ್. ಕುರ್ಚಿಯಲ್ಲಿ ಕುಳಿತೇ ತೋಟದ ತುಂಬ ಮಕ್ಕಳನ್ನು ಓಡಿಸಿಕೊಂಡು ಹೋಗುತ್ತಿದ್ದ ಹಾಕಿಂಗ್ ಅವರೊಂದಿಗೆ ಹೆಚ್ಚು ಹೆಚ್ಚು ಆಡಲು ಅಪೇಕ್ಷಿಸುತ್ತಿದ್ದ. ನೀವಿರುವ ಸ್ಥಿತಿಯಲ್ಲೇ ನಿಮಗಾಗುವುದನ್ನು ಅತ್ಯುತ್ತಮವಾಗಿ ಮಾಡಬೇಕೆನ್ನುತ್ತಿದ್ದ.

ಪಟ್ಟಣದ ನಡುವಿನ ಸಿಲ್ವರ್ ಸ್ಟ್ರೀಟ್‌ನ, ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಡಿಎಎಂಟಿಪಿ ೧೯೭೯ರಲ್ಲಿ ಹಾಕಿಂಗ್ ಲುಕೇಸಿಯನ್ ಪ್ರೊಫೆಸರ್ ಆದಾಗಿನಿಂದ ಕೆಲ ಬದಲಾವಣೆಗಳನ್ನು ಕಂಡಿದೆ. ಕಂಪ್ಯೂಟರ್ ಕಪ್ಪು ಹಲಗೆಯಾಗಿ ಪರಿವರ್ತಿತವಾಗುತ್ತದೆ. ಹ್ಯಾಂಡ್‌ಸೆಟ್ ಇಲ್ಲದ ಮೈಕ್ರೊಫೋನ್ ಮತ್ತು ಲೌಡ್‌ಸ್ಪೀಕರ್ ಅಳವಡಿಸಿದ ದೂರವಾಣಿ, ಎತ್ತರದ ವೇದಿಕೆಯ ಮೇಲಿಟ್ಟ ಪುಸ್ತಕದ ಹಾಳೆಗಳನ್ನು

ತನ್ನಷ್ಟಕ್ಕೇ ಮಡಚುವ ಸಾಧನ ಎಲ್ಲವನ್ನೂ ಆ ಕೊಠಡಿಯಲ್ಲಿ ಅಳವಡಿಸಲಾಗಿದೆ. ದೊಡ್ಡ ಹಜಾರದಲ್ಲಿ ಪ್ರತಿದಿನ ಬೆಳಗ್ಗೆ ಮಧ್ಯಾಹ್ನ ಎಲ್ಲರೂ ಕಾಫಿಗಾಗಿ ಸೇರುತ್ತಾರೆ. ಯಾರಿಗಾದರೂ ಗಣಿತದ ಹೊಸ ಸೂತ್ರವೇನಾದರೂ ಹೊಳೆದಲ್ಲಿ ಎಲ್ಲರಿಗೂ ಅದನ್ನು ತಿಳಿಸುತ್ತಾರೆ. ೧೯೮೦ರ ವೇಳೆಗೆ ಹಾಕಿಂಗ್ ಕಾಲಕ್ಕೆ 'ಆದಿ ಇದೆಯೇ' ಎಂಬ ಬಗ್ಗೆ ಪ್ರಶ್ನಿಸತೊಡಗಿ ಅದಕ್ಕೆ 'ಆದಿ ಅಂತ್ಯ'ಗಳೆರಡೂ ಇದೆ ಎಂಬ ಸಿದ್ಧಾಂತಕ್ಕೆ ಬಂದಿದ್ದ.

ಹಾಕಿಂಗ್ ಈಗ ಬ್ರಿಟನ್‌ನ ಲೈಸೆಸ್ಟರ್ ಹಾಗೂ ನ್ಯೂಯಾರ್ಕ್, ಪ್ರಿನ್ಸ್‌ಟನ್ ಮತ್ತು ನಾಟರ್‌ಡೇಮ್ ವಿಶ್ವವಿದ್ಯಾಲಯಗಳ ಗೌರವ ವಿಜ್ಞಾನಿಯಾಗಿ ನೇಮಕವಾದ. ಈ ಪದವಿಗಳೇನೋ ಪ್ರತಿಷ್ಠೆ ತರುವಂಥವು. ಆದರೆ ಕೇವಲ ಪ್ರತಿಷ್ಠೆ ಹೊಟ್ಟೆ ತುಂಬಿಸಲಾರದು. ಪ್ರೊಫೆಸರನಿಗೆ ಸಿಗುವ ಸಂಬಳವೇನೂ ಅತಿ ಹೆಚ್ಚಿನದಲ್ಲ. ರಾಬರ್ಟ್, ಲೂಸಿಯರ ಶಾಲಾ ವಿದ್ಯಾಭ್ಯಾಸದ ಖರ್ಚು, ಭವಿಷ್ಯದ ಬಗೆಗೇನು? ಹಾಕಿಂಗ್‌ನ ಅನಾರೋಗ್ಯ ಒಂದೇ ಸಮನಿದ್ದು ಯಾವ ಕ್ಷಣಕ್ಕಾದರೂ ಬಿಗಡಾಯಿಸಬಹುದಾಗಿತ್ತು. ಆಗ ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ಭರಿಸಬೇಕು. ಕೆಲವು ದಿನಗಳಿಂದ ಮನದಲ್ಲಿ ಮೂಡಿದ ನಿರ್ಧಾರದಂತೆ ಜನಪ್ರಿಯ ವಿಜ್ಞಾನ ಪುಸ್ತಕವೊಂದನ್ನು ಬರೆಯಬೇಕು. ಅದು ಚೆನ್ನಾಗಿ ಮಾರಾಟವಾಗಿ ಅಸಂಖ್ಯಾತ ಓದುಗರನ್ನು ತಲುಪಬೇಕು, ಎಂದು ನಿರ್ಧರಿಸಿದ.

ನ್ಯೂಯಾರ್ಕ್‌ನ ಬ್ಯಾಂಟಮ್ ೨೫೦,೦೦೦ ಡಾಲರ್‌ಗಳನ್ನು "ಫ್ರಮ್ ದಿ ಬಿಗ್ ಬ್ಯಾಂಗ್ ಟು ಬ್ಲಾಕ್ ಹೋಲ್ಸ್" ಗ್ರಂಥಕ್ಕಾಗಿ ಮುಂಗಡ ಹಣ ನೀಡಿತು. ಆ ಪುಸ್ತಕ ಅಮೆರಿಕಾದ ಎಲ್ಲ ವಿಮಾನನಿಲ್ದಾಣಗಳಲ್ಲಿ ಮಾರಲ್ಪಡಬೇಕೆಂಬ ಸಲಹೆ ಹಾಕಿಂಗ್‌ಗೆ ಸಂತಸ ತಂದಿತು. ೧೯೮೩, ಕೃತಿಯ ಮೊದಲ ಕರಡು ತಯಾರಿಸುವುದರಲ್ಲೇ ಕಳೆಯಿತು. ತನ್ನ ಸಂಶೋಧನೆಗಳ ನಡುವೆ ಚೈನಾಗೆ ಉಪನ್ಯಾಸಕನಾಗಿ ಹೋದ. ದೂರ ದೇಶಗಳ ಸಂಚಾರಕ್ಕೆ ಯಾವುದೇ ಆತಂಕವಿರಲಿಲ್ಲ. ಬೀಜಿಂಗ್‌ನ್ನು ಸುತ್ತಿ, ತನ್ನ ಗಾಲಿಕುರ್ಚಿಯಲ್ಲೇ ಚೀನಾದ ದೊಡ್ಡಗೋಡೆಯ ಮೇಲೆ ಸುತ್ತಾಡಿದ. ೧೯೮೫ರಲ್ಲಿ ತನ್ನ ಉಪನ್ಯಾಸಗಳ ಸಂಬಂಧದಲ್ಲಿ ವಿಶ್ವಪರ್ಯಟನೆಮಾಡಿ, ತಾನು ಬರೆಯುತ್ತಿದ್ದ ಪುಸ್ತಕಕ್ಕಾಗಿ ವಿಷಯ ಸಂಗ್ರಹಿಸಲು ಜಿನೀವಾದ ನ್ಯೂಕ್ಲಿಯರ್ ರಿಸರ್ಚ್ ಸಂಸ್ಥೆಗೆ ಹಾಕಿಂಗ್ ಭೇಟಿ ನೀಡಿದ. ಬರವಣಿಗೆಯ ನಡುವಿನ ಒಂದು ಬೆಳಗಿನ ಜಾವ ೩ ಘಂಟೆಗೆ ಅವನ ಶ್ವಾಸ ಕಟ್ಟಿತು. ನೀಲಿಗಟ್ಟಿದ ಮುಖದೊಂದಿಗೆ ಆಸ್ಪತ್ರೆಗೆ ದಾಖಲಾದ ಹಾಕಿಂಗ್‌ನನ್ನು ಅದೃಷ್ಟವಶಾತ್ ದೂರದರ್ಶನದ ಕಾರ್ಯಕ್ರಮವೊಂದರಲ್ಲಿ ನೋಡಿ, ಅವನ ರೋಗದ ಬಗ್ಗೆ ಪರಿಚಿತರಾಗಿದ್ದ ವೈದ್ಯರು, ಕೂಡಲೇ ನ್ಯೂಮೋನಿಯಾಕ್ಕಾಗಿ ಚಿಕಿತ್ಸೆ ನೀಡಿದರು. ಎಎನ್‌ಡಿ ಖಾಯಿಲೆ ಇರುವವರಿಗೆ ನ್ಯೂಮೋನಿಯಾ ತಗುಲುವುದು ಸಾಮಾನ್ಯ. ಇದು ಮರಣಾಂತಕವೂ ಆಗಬಹುದು. ಜೇನ್ ಆಸ್ಪತ್ರೆಗೆ ಬಂದಾಗ ತುರ್ತುಚಿಕಿತ್ಸಾವಿಭಾಗದಲ್ಲಿದ್ದ ಹಾಕಿಂಗ್‌ಗೆ ಆಕ್ಸಿಜನ್ ಅಳವಡಿಸಲಾಗಿತ್ತು.

ವೈದ್ಯರು ಶ್ವಾಸನಾಳದಲ್ಲಿ ರಂಧ್ರಮಾಡದೆ ಹಾಕಿಂಗ್ ಬದುಕುವ ಸಾಧ್ಯತೆ ಇಲ್ಲವೆಂದರು. ಶ್ವಾಸನಾಳವನ್ನು ಸೀಳಿ ಉಸಿರಾಡುವ ಯಂತ್ರವೊಂದನ್ನು ಅಲ್ಲಿ ಅಳವಡಿಸಬೇಕಾಗಿತ್ತು. ತೊಂದರೆ ಎಂದರೆ ಮುಂದೆ ಹಾಕಿಂಗ್ ಏನೊಂದೂ ಸ್ವರವನ್ನು ಹೊರಡಿಸುವಂತಿಲ್ಲ. ಜೇನ್‌ಳಿಗೀಗ ಶಸ್ತ್ರಚಿಕಿತ್ಸೆ ಮಾಡಿಸಬೇಕೇ ಬೇಡವೇ ಎಂದು ತುಮುಲ. ಭವಿಷ್ಯ ಆಶಾದಾಯಕವೇನಲ್ಲ. "ಶಸ್ತ್ರಚಿಕಿತ್ಸೆ ಮಾಡಿಸಲು ನಿರ್ಧರಿಸಿದೆ. ಆದರೆ ಅವನನ್ನು ನಾನಂಥ ಜೀವನಕ್ಕೆ ದೂಡಿದೆ", ಎಂದಳು ಜೇನ್. ಅವಳು ಅಷ್ಟೊಂದು ಯೋಚಿಸಬೇಕಾಗಿರಲಿಲ್ಲ. ಮರಣದೊಂದಿಗೆ ಹೋರಾಡಿ ಹಿಂತಿರುಗಿದ ಹಾಕಿಂಗ್, ಕ್ಯಾಲಿಫೋರ್ನಿಯಾದ ನುರಿತ ಕಂಪ್ಯೂಟರ್ ಎಂಜಿನಿಯರ್‌ನಿಂದ ತನ್ನ ಆಫೀಸ್ ಕಂಪ್ಯೂಟರ್‌ನಲ್ಲೊಂದು 'ಕಾರ್ಯಸೂಚಿ' (ಪ್ರೋಗ್ರಾಂ) ಮಾಡುವುದನ್ನು ಕಲಿತ. ಮೂರುಸಾವಿರ ಪದಗಳಿಂದ ಆರಿಸಿದ ಶಬ್ದಗಳನ್ನು ಸೇರಿಸಿ ಮಾಡಿದ ವಾಕ್ಯವನ್ನು ಧ್ವನಿಸಂಯೋಜಕ (ವಾಯ್ಸ್ ಸಿಂಥಸೈಸರ್) ಮಾತನಾಡುತ್ತಿತ್ತು. ನಿಮಿಷಕ್ಕೆ ಹತ್ತು ಶಬ್ದಗಳನ್ನು ಮಾತಾಡಬಹುದಿತ್ತು. "ಅದು ಸ್ವಲ್ಪ ನಿಧಾನವೆನಿಸುತ್ತಿತ್ತು. ನಾನು ಯೋಚಿಸುವುದೂ ನಿಧಾನವೇ. ಆದ್ದರಿಂದ ನನಗದು ಸರಿಯಾಗಿ ಹೊಂದಿಕೆಯಾಗಿತ್ತು", ಎನ್ನುತ್ತಾನೆ ಹಾಕಿಂಗ್. ಶಸ್ತ್ರಚಿಕಿತ್ಸೆ ಆಗುವ ಮೊದಲಿಗಿಂತ ಈಗ ಹೆಚ್ಚು ವ್ಯವಹರಿಸಬಲ್ಲವನಾಗಿದ್ದ. ಈಗವನ ಅಸ್ಪಷ್ಟ ಭಾಷಣವನ್ನು ಯಾರೂ ಸ್ಪಷ್ಟವಾಗಿ ಹೇಳಬೇಕಾಗಿರಲಿಲ್ಲ.

ಹಾಕಿಂಗ್ ಬರೆಹ ಮುಂದುವರೆಸಿದ. ಸಂಪಾದಕ ಪೀಟರ್ ಗುಜರ್ಡಿ "ಎ ಬ್ರೀಫ್ ಹಿಸ್ಟರಿ ಆಫ್ ಟೈಮ್" ಎಂದು ಪುಸ್ತಕಕ್ಕೆ ಶೀರ್ಷಿಕೆ ನೀಡಿದ. ೧೯೮೮ರ ವಸಂತದಲ್ಲಿ ಹಾಕಿಂಗ್‌ನ ಗೌರವಾರ್ಥ ಔತಣಕೂಟವೊಂದರಲ್ಲಿ ಪುಸ್ತಕ ಬಿಡುಗಡೆಗೊಂಡಿತು. ಕೇವಲ ಹದಿಮೂರು ವಾರಗಳ ಅವಧಿಯಲ್ಲಿ ಸುಪ್ರಸಿದ್ಧ ಪುಸ್ತಕಗಳ ಪಟ್ಟಿಯಲ್ಲಿ ಮೊದಲೆನಿಸಿತು. ಚಿಕಾಗೋದಲ್ಲಿ ಅವನ ಅಭಿಮಾನಿಗಳ ಸಂಘವೊಂದು ಶುರು ಆಯಿತು. ಬ್ರಿಟನ್‌ನಲ್ಲೂ ಪುಸ್ತಕ ಹೆಸರಾಯಿತು. ತಮ್ಮ ಮೆಚ್ಚುಗೆ ವ್ಯಕ್ತಪಡಿಸಲು ಜನ ಹಾಕಿಂಗ್‌ನನ್ನು ರಸ್ತೆಯಲ್ಲೇ ನಿಲ್ಲಿಸುತ್ತಿದ್ದರು. ಪುಸ್ತಕಗಳ ಮಾರಾಟ ಹಾಕಿಂಗ್‌ನ ನಿರೀಕ್ಷೆಯನ್ನು ಮೀರಿತ್ತು. "ನನಗೆ ಅಚ್ಚರಿ ಆಗುತ್ತಿದೆ. ೪೬ ವರ್ಷದ ಗಣಿತ ಪ್ರೊಫೆಸರನೊಬ್ಬನ ಈ ಪುಸ್ತಕ ಐದುಬಾರಿ ಪುನರ್ಮುದ್ರಣಗೊಂಡು ೫೦ ಸಾವಿರಕ್ಕೂ ಹೆಚ್ಚು ವಿಶೇಷ ಪ್ರತಿಗಳು ಮಾರಾಟವಾಗಿವೆ" ಎನ್ನುತ್ತಾನೆ "ದಿ ಸಂಡೆ ಟೈಮ್ಸ್"ನ ಸೈಮನ್ ಜೆನ್ಕಿನ್ಸ್.

೧೯೮೯ರ ಜೂನ್ ಹನ್ನೊಂದರಂದು ರಾಷ್ಟ್ರದ ಅತ್ಯುತ್ತಮ ಪಾರಿತೋಷಕವನ್ನು ಹಾಕಿಂಗ್‌ಗೆ ನೀಡಲಾಯಿತು. ಮರುವಾರ ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಅವನಿಗೆ 'ಗೌರವ ಡಾಕ್ಟರೇಟ್' ಪದವಿ ಇತ್ತು ಸನ್ಮಾನಿಸಿತು. ರಸ್ತೆಯುದ್ದಕ್ಕೂ ಸಾಲುಗಟ್ಟಿದ ಜನರ ನಡುವೆ, ಉನ್ನತವ್ಯಕ್ತಿಗಳಿದ್ದ ಮೆರವಣಿಗೆಯಲ್ಲಿ, ಗಾಲಿಕುರ್ಚಿಯಲ್ಲಿ ಕುಳಿತು ಸೆನೇಟ್ ಹಾಲ್ ಸೇರಿದ. ಅವನ ಗೌರವಾರ್ಥ ಸಂಗೀತ ಕಛೇರಿ ನಡೆಯಿತು. ತನ್ನ ಗಾಲಿಕುರ್ಚಿಯಲ್ಲೇ ವೇದಿಕೆಯ ಮೇಲೆ

ಬಂದು ಜನರಿಗೆ ಧ್ವನಿ ಸಂಯೋಜಕದ ಮೂಲಕ ತನ್ನ ವಂದನೆ ಸಲ್ಲಿಸಿದಾಗ ಜನ ಎದ್ದು ನಿಂತು ಗೌರವ ಸೂಚಿಸಿದರು. ಅವನ ಧೈರ್ಯ ಹಾಗೂ ಮೇಧಾವಿತನದ ಬಗ್ಗೆ ಮೆಚ್ಚಿಗೆ ಸೂಚಿಸುವಂತೆ ನೆರದ ಜನರ ಕಣ್ಣಲ್ಲಿ ನೀರಿಳಿಯಿತು. ಶ್ವಾಸನಾಳದಲ್ಲಿ ರಂಧ್ರ ಮಾಡಿದಾಗಿನಿಂದ ಹಾಕಿಂಗ್‌ಗೆ ೨೪ ಗಂಟೆಗಳ ದುಬಾರಿ ಶುಶ್ರೂಷೆಯ ಅವಶ್ಯಕತೆ ಇತ್ತು. ಅದಕ್ಕಾಗಿ ಜೇನ್ ಅಮೆರಿಕಾ ಹಾಗೂ ಬ್ರಿಟನ್‌ನ ಧರ್ಮಾರ್ಥ ನಿಧಿಗಳಿಂದ ಸಹಾಯ ಬೇಡಿದ್ದಳು ಈಗವನ ಪುಸ್ತಕದ ರಾಯಲ್ಟಿಯಾಗಿ ಹಣ ಹರಿದುಬಂತು. ಮಿಲಿಯಗಟ್ಟಲೆ ಪುಸ್ತಕಗಳು ಮಾರಾಟವಾದವು ಖರ್ಚುಭರಿಸಿ ಸುಖಜೀವನಕ್ಕೆ ಆಧಾರವಾಯಿತು.

ಇಂದು ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಿರುವವನೇ ಹಾಕಿಂಗ್. ದಿನದಿನವೂ ಕುತೂಹಲಭರಿತ ಪ್ರಶ್ನೆಗಳನ್ನು ಹೊತ್ತ ಉತ್ತರಿಸಲಾರದಷ್ಟು ಅಂಚೆ ಅವನ ಮನೆ ತಲುಪುತ್ತದೆ, ಇದೀಗ ಹಾಕಿಂಗ್ ಪತ್ರಿಕೆ, ರೇಡಿಯೋ ಹಾಗೂ ದೂರದರ್ಶನಗಳು ಬಯಸುವ ಮನುಷ್ಯ. ಅವನ ಉಪನ್ಯಾಸಕ್ಕೆ ಹೋಗುವುದೊಂದು ಅಪೂರ್ವ ಅನುಭವ. ಅವನ ಗಾಲಿಕುರ್ಚಿಯನ್ನು ವೇದಿಕೆಗೆ ತಂದು ಧ್ವನಿ ಸಂಯೋಜಕವನ್ನು ಮೈಕ್‌ಗೆ ಅಳವಡಿಸಲಾಗುತ್ತದೆ. ಅವನ ಟಿಪ್ಪಣಿಗಳನ್ನು ಕುರ್ಚಿಯ ಹಿಂಬದಿಯ ಕಂಪ್ಯೂಟರ್‌ಗೆ ಅಳವಡಿಸಲಾಗುತ್ತದೆ. ಚಲನೆ ಇಲ್ಲದಂತೆ ಕುಳಿತ ಹಾಕಿಂಗ್‌ನ ಎರಡು ಬೆರಳುಗಳು ಮಾತ್ರ ಕಂಪ್ಯೂಟರಿನ ಮೇಲಾಡುತ್ತವೆ. ಪರಿಚಯದ ನಂತರ ಇದ್ದಕ್ಕಿದ್ದಂತೆ ಧ್ವನಿ ಸಂಯೋಜಕದಿಂದ “ನಾನಿಲ್ಲಿ ಚರ್ಚಿಸಬಯಸುವ ವಿಷಯ....” ಎನ್ನುವ ಸ್ವರ ಹೊರಹೊಮ್ಮುತ್ತದೆ. ಭಾಷಣದ ನಂತರ ಪ್ರೇಕ್ಷಕರು ಪ್ರಶ್ನೆ ಕೇಳಿದಾಗ ಅದಕ್ಕುತ್ತರಿಸಲು ಹಾಕಿಂಗ್‌ಗೆ ಹತ್ತು ನಿಮಿಷ ಕಾಲಾವಕಾಶ ಬೇಕು. “ಅಲ್ಲಿಯವರೆಗೆ ವೃತ್ತಪತ್ರಿಕೆಗಳನ್ನೋದಿ” ಎನ್ನುತ್ತಾನೆ. ಕೆಲವೊಮ್ಮೆ ಪ್ರಶ್ನೆಗಳನ್ನು ಪುನರುಚ್ಚರಿಸುವಂತೆ ಬೇಕೆಂದೇ ಐದು ನಿಮಿಷ ಕಾಯುತ್ತಾನೆ. ವಯಸ್ಸು ಬೆಳೆದರೂ ಬಾಲಿಶತನದ ತುಂಟತನವಿನ್ನೂ ಅವನಿಂದ ದೂರ ಸರಿದಿಲ್ಲ.

೧೯೯೦ರ ಜನವರಿಯಲ್ಲಿ ಮೂರು ಮಿಲಿಯನ್ ಡಾಲರುಗಳ ಅಂದಾಜಿನಲ್ಲಿ ಅವನ “ಎ ಬ್ರೀಫ್ ಹಿಸ್ಟರಿ ಆಫ್ ಟೈಂ”ನ ಚಿತ್ರೀಕರಣ ಪ್ರಾರಂಭವಾಯಿತು. ಇದರಲ್ಲಿ ಮುಖ್ಯವಾದ ಸೆಟ್ ಎಂದರೆ ಹಾಕಿಂಗ್‌ನ ಕಛೇರಿ. ಸಣ್ಣ ಸಣ್ಣ ವಿಷಯಗಳಿಗೂ ಲಕ್ಷ್ಯ ಕೊಟ್ಟು ಅವನ ಕಛೇರಿಯನ್ನು ಚಿತ್ರೀಕರಿಸಲಾಗಿದೆ. ಹಾಕಿಂಗ್ ಸೆಟ್ ಮೇಲೆ ಬಂದಾಗ ಒಂದು ಗೌರವ ಪೂರ್ಣ ಶಾಂತಿ ನೆಲೆಸುತ್ತಿತ್ತು. ತನ್ನ ಅಶಕ್ತತೆಯ ನಡುವೆಯೂ ಮೊದಲ ಬಾರಿಗೆ ಅವನನ್ನು ಕಂಡವರ ಮೇಲೆ ಆತನ ಪ್ರಭಾವಶಾಲಿ ವ್ಯಕ್ತಿತ್ವ ತನ್ನ ಪರಿಣಾಮ ಬೀರುತ್ತದೆ.

೧೯೯೦ರ ವಸಂತದಲ್ಲಿ ನಡೆಯಬಾರದ ಅನಿರೀಕ್ಷಿತ ಘಟನೆಯೊಂದು ನಡೆಯಿತು. ಜೇನ್ ಹಾಗೂ ಹಾಕಿಂಗ್ ಇಪ್ಪತ್ತೈದು ವರ್ಷಗಳ ವೈವಾಹಿಕ ಜೀವನ ನಂತರ ಬೇರಾದರು. ಜನ ದುಃಖಿತರಾದರು, ದಿಗ್ಭ್ರಾಂತರಾದರು. ಹೊರಗಿನವರಿಗೆ ಅವರ ಸಂಬಂಧ ಅನ್ಯೋನ್ಯವಾಗಿ ಕಾಣುತ್ತಿದ್ದರೂ, ಹಾಕಿಂಗ್ ತನ್ನ ವೃತ್ತಿಯಲ್ಲಿ

ಮೇಲೇರಿದಂತೆ ಜೇನ್‌ಗೆ ಏಕಾಕಿತನ ಕಾಡಿತು. ಹಾಕಿಂಗ್‌ನನ್ನು ನೋಡಿಕೊಳ್ಳುವ ಹೊಣೆ ಇಲ್ಲದ್ದು, ಪುಸ್ತಕ, ಸಂಗೀತ, ತೋಟಗಾರಿಕೆಯತ್ತ ತನ್ನ ಲಕ್ಷ್ಯ ಹರಿಸಿದ್ದಳು. "ಎ ಬ್ರೀಫ್ ಹಿಸ್ಟರಿ ಆಫ್ ಟೈಂ" ಅಚ್ಚಾಗುತ್ತಿದ್ದಂತೆ ಒಳಗೇ ಅದುಮಿದ್ದ ಅವರ ಧಾರ್ಮಿಕ ಭಿನ್ನಾಭಿಪ್ರಾಯಗಳು ಮೇಲೆದ್ದವು.

ತನ್ನ ಕುರ್ಚಿಗೆ ಕಂಪ್ಯೂಟರನಳವಡಿಸಿದ ಎಂಜಿನಿಯರ್ ಡೇವಿಡ್‌ನ ಪತ್ನಿ ಎಲೈನ್ ಮೇಸನ್‌ಳೊಂದಿಗೆ ಹಾಕಿಂಗ್ ಜೇನಳಿಂದ ದೂರಾಗಿ ವಾಸ್ತವ್ಯ ಹೂಡಿದ. ಮಕ್ಕಳು ಘಾಸಿಗೊಂಡರು. ಆಗ ಮೊದಲನೆಯವ ೨೩ ವರ್ಷದ ರಾಬರ್ಟ್ ಆಗಷ್ಟೇ ಕೇಂಬ್ರಿಡ್ಜಿನಿಂದ ಭೌತಶಾಸ್ತ್ರದ ಪದವಿ ಪಡೆದಿದ್ದ. ಆಕ್ಸ್‌ಫರ್ಡ್‌ನಲ್ಲಿ ಆಧುನಿಕ ಭಾಷೆಗಳ ವ್ಯಾಸಂಗ ನಡೆಸುತ್ತಿದ್ದಳು ಲೂಸಿ. ಹನ್ನೊಂದು ವರ್ಷದ ಟಿಮೊಥಿಗೆ ತಂದೆ ಏಕೆ ಮನೆ ಬಿಟ್ಟನೆಂದು ಅರ್ಥವಾಗದ ವಯಸ್ಸು. ದಂಪತಿಗಳು ಇಂದಿಗೂ ಪರಸ್ಪರ ಭೇಟಿಯಾಗುತ್ತಾರೆ. ತನ್ನಂತೆಯೇ ಇರುವ ಟಿಮೊಥಿಯನ್ನು ಹೆಚ್ಚು ಹೆಚ್ಚು ನೋಡುತ್ತಾನೆ, ಅವನೊಂದಿಗೆ ಆಡುತ್ತಾನೆ. ಹಾಕಿಂಗ್.

ಸಹೋದ್ಯೋಗಿಗಳಿಗೆ ಹಾಕಿಂಗ್‌ನ ವಿಚ್ಛೇದನೆ ವಿಜ್ಞಾನದ ಅಭ್ಯಾಸಕ್ಕೆ ತಡೆ ಬರುವುದೆನಿಸಿತ್ತು. ಹಾಗಾಗಲಿಲ್ಲ. ಅವನ ಆಳವಾದ ಅಭ್ಯಾಸ ಎಂದಿನಂತೆ ಮುಂದುವರಿದಿದೆ.

ಧ್ವನಿಸಂಯೋಜಕ ಅಳವಡಿಸಿದ ಘಟನೆಯ ನಂತರ ಅವನ ಆರೋಗ್ಯ ಈಗೊಂದು ಘಟ್ಟ ಮುಟ್ಟಿದೆ. ಎಷ್ಟು ದಿನ ಹೀಗೆಂದು ಹೇಳಬರುವಂತಿಲ್ಲ. ಇನ್ನೊಮ್ಮೆ ಕ್ಷೀಣಿಸಿದರೆ ಎಲ್ಲ ಮುಗಿದಂತೆ ಎಂಬ ಲೆಕ್ಕಾಚಾರ ತಪ್ಪಾಗಲೂಬಹುದು. ಏಕೆಂದರೆ ೨೫ ವರ್ಷಗಳಿಂದ ಈ ಲೆಕ್ಕಾಚಾರ ತಪ್ಪಾಗುತ್ತಲೇ ಇದೆ.

ಹಾಕಿಂಗ್‌ನ ಸಂಶೋಧನೆಗಳು ವಿಜ್ಞಾನದ ಜಗತ್ತಿಗೆ ಆತನಿತ್ತಿರುವ ಕಾಣಿಕೆಗಳು, ಅತ್ಯದ್ಭುತ ಸಾಧನೆಗಳು. ಅಶಕ್ತತೆಯ ಮೇಲೆ ವಿಜಯ ಸಾಧಿಸಿದ ಅವನ ಆತ್ಮಬಲ. ಈ ಲೋಕದಲ್ಲಿ ಸ್ಟೀಫನ್ ಹಾಕಿಂಗ್ ಮೇಲೆ ಮೇಲೇರುತ್ತಲೇ ಇದ್ದಾನೆ.

ಕನ್ನಡಿಗರು ಒಟ್ಟಾಗಲು ಇರುವ ಏಕಮಾತ್ರ ಸಾಧನ ಅವರ ನುಡಿ. ಸಾವಿರಾರು ವರ್ಷಗಳಿಂದ ದಷ್ಟಪುಷ್ಟವಾಗಿ ಕಲ್ಪವೃಕ್ಷದಂತೆ ಬೆಳೆದು ಸಕಲ ಇಷ್ಟಾರ್ಥಗಳನ್ನು ಕೊಡಬಲ್ಲ ಅವರ ನುಡಿ. ಆದ್ದರಿಂದ ನಾವು ಮೊದಲು ಕನ್ನಡಿಗರು, ಅನಂತರ ಭಾರತೀಯರು ಎಂದರೆ ಅದು ಸ್ವಾಭಾವಿಕ, ಕಾರ್ಯಸಾಧ್ಯ.

—ಎ. ಆರ್. ಕೃಷ್ಣಶಾಸ್ತ್ರಿ

ಮಾಸ್ತರ ಶಿಸ್ತು

ಡಾ|| ಸ. ಜ. ನಾಗಲೋಟಿಮಠ
೨೫, "ಶಾಂತಾ" ಬಸವ ಕಾಲನಿ
ಬೆಳಗಾವಿ–೫೯೦ ೦೧೦

"ದಯವಿಲ್ಲದ ಧರ್ಮದಾವುದಯ್ಯಾ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲಿ ದಯವೇ ಧರ್ಮದ ಮೂಲವಯ್ಯಾ: ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ!" ಕಠೋರ ಶಿಸ್ತಿನ ಕಟೂಗ್ರ ಗುರುವಿಗೆ ಕೂಡಲಸಂಗನ ದರ್ಶನವಾದದ್ದು ಹರಿದ ಅಂಗಿಯಲ್ಲೋ ಬೆನ್ನ ಮೇಲಿನ ಬಾಸುಂಡೆ ಬರೆಯಲ್ಲೋ ಶಿಷ್ಯನ ಕರ್ಣಏಕಾಗ್ರತೆಯಲ್ಲೋ?

ಬೆಳಗಾವಿಯ ಸಮೀಪದ ಒಂದು ಊರು. ಆ ಊರಿನಲ್ಲಿ ಒಂದು ಕ್ರೈಸ್ತ ಸಂಸ್ಥೆ. ಸಂಸ್ಥೆಯವರು ಮಾದರಿ ಶಾಲೆ ನಡೆಸುತ್ತಿದ್ದರು. ಶಾಲೆಯ ಕಟ್ಟಡ, ಸುತ್ತಲಿನ ವಾತಾವರಣ ಸುಂದರವಾಗಿದ್ದವು. ಕ್ರೈಸ್ತ ಸಂಸ್ಥೆಯವರು ಶಾಲಾ ಶಿಕ್ಷಕರನ್ನು ಆಯುವಾಗ ಶ್ರದ್ಧೆ ವಹಿಸಿ ಒಳ್ಳೆಯವರನ್ನು ತೆಗೆದುಕೊಳ್ಳುತ್ತಿದ್ದರು. ಆ ಶಾಲೆಯಲ್ಲಿ ಶಿಕ್ಷಕರೆಂದು ಸೇರಿದವರೂ ಶ್ರದ್ಧೆ ವಹಿಸಿ ಕೆಲಸ ಮಾಡುತ್ತಿದ್ದರು. ಮುಖ್ಯ ಗುರುಗಳು ನಿಜವಾಗಿಯೂ ಆದರ್ಶ ವ್ಯಕ್ತಿ ಆಗಿರುತ್ತಿದ್ದರು. ಉಳಿದ ಶಿಕ್ಷಕರು ಮುಖ್ಯ ಗುರುಗಳನ್ನು ಅಂದರೆ ಹೆಡ್‌ಮಾಸ್ತರರನ್ನು ನೋಡಿ ಕಲಿಯುತ್ತಿದ್ದರು. ಶಾಲೆಯ ಮಕ್ಕಳು ನಿಜವಾಗಿಯೂ ಒಳ್ಳೆಯ ಶಿಕ್ಷಣ ಹಾಗೂ ಸಂಸ್ಕೃತಿಯನ್ನು ಅಲ್ಲಿ ಪಡೆಯುತ್ತಿದ್ದರು. ಎಂಥವರಿಗೂ ತಮ್ಮ ಮಕ್ಕಳು ಅಂಥ ವಿದ್ಯಾಕೇಂದ್ರದಲ್ಲಿ ಕಲಿಯಲಿ ಎನಿಸುತ್ತಿತ್ತು. ಮಕ್ಕಳೆಲ್ಲ ಸಮವಸ್ತ್ರ ಧರಿಸಿ ನಿರ್ಮಲವಾಗಿ ಶಾಲೆಗೆ ಬರುತ್ತಿದ್ದರು. ವೇಳೆಗಂತೂ ಬಹಳೇ ಕಟ್ಟುನಿಟ್ಟು. ಸರಿಯಾದ ಸಮಯಕ್ಕೆ ವಿದ್ಯಾರ್ಥಿ ಬರದೇ ಹೋದರೆ ಅಂಥವರಿಗೆ ಶಿಕ್ಷೆ ಕಟ್ಟಿಟ್ಟದ್ದೇ.

ಒಂದು ಸಲ ಆ ಶಾಲೆಯ ಮುಖ್ಯ ಶಿಕ್ಷಕರು ರಜೆಯ ಮೇಲೆ ಹೋದರು. ಹೋಗುವಾಗ ತಮ್ಮ ಸಹಾಯಕ ಶಿಕ್ಷಕರಿಗೆ ಅಧಿಕಾರ ಕೊಟ್ಟು, ಶಿಸ್ತು ಕಾಯಬೇಕೆಂದು ಹೇಳಿ ಹೋಗಿದ್ದರು. ಸಹಾಯಕ ಶಿಕ್ಷಕರು ಇನ್ನೂ ಯುವಕರು. ಶಿಸ್ತು ಕಾಪಾಡುವಲ್ಲಿ ತಾವೇನೂ ಕಡಿಮೆ ಇಲ್ಲ ಎನ್ನುವ ಛಲ ಹೊಂದಿದವರು. ಮುಖ್ಯ ಗುರುಗಳು ಹೇಳಿದ ಮಾತನ್ನು ನೆನಪಿನಲ್ಲಿಟ್ಟು ಕಾರ್ಯ ನಿರ್ವಹಿಸಿದರು. ಒಂದು ದಿನ ಅವರು ಶಾಲೆಯ ಬಾಗಿಲ ಬಳಿ ನಿಂತಿದ್ದರು. ವಿದ್ಯಾರ್ಥಿಗಳು ತಡಮಾಡಿ ಬಂದರೆ ಅವರನ್ನು ಶಿಕ್ಷಿಸುವ ವಿಚಾರ ಅವರದಾಗಿತ್ತು. ಅವರ ಎಣಿಕೆ

ಮುಂಚೆ ಒಬ್ಬ ವಿದ್ಯಾರ್ಥಿ ಓಡುತ್ತ ಶಾಲೆಗೆ ಬಂದ. ಹತ್ತು ನಿಮಿಷ ತಡವಾಗಿತ್ತು. ಯುವ ಶಿಕ್ಷಕರಿಗೆ ಒಂದು ಸುಸಂಧಿ. ತಾವು ಶಿಸ್ತಿನ ಸಿಪಾಯಿ ಎಂದು ತೋರಿಸಲು ಒಳ್ಳೆಯ ಅವಕಾಶ.

ಶಿಕ್ಷಕರು : ಏನು? ನಿನ್ನ ಹೆಸರೇನು?

ವಿದ್ಯಾರ್ಥಿ : ಮಲ್ಲಿಕಾರ್ಜುನ

ಶಿಕ್ಷಕರು : ಈಗ ವೇಳೆ ಎಷ್ಟಾಗಿದೆ ನಿನಗೆ ಗೊತ್ತೋ?

ವಿದ್ಯಾರ್ಥಿ : ಹೌದ್ರಿ ಸರ್ ಇವತ್ತು ನಾನು ತಡಮಾಡಿ ಬಂದಿರುವೆ, ಕ್ಷಮಿಸಿರಿ.

ಶಿಕ್ಷಕರು : ಓಹೋ! ತಡಮಾಡಿ ಬಂದರೆ ಅಶಿಸ್ತು ಎಂಬುದು ತಿಳಿದಿದೆಯೋ?

ವಿದ್ಯಾರ್ಥಿ : ಹೌದು ಸರ್, ದಯಮಾಡಿ ಕ್ಷಮಿಸಿರಿ —ಎಂದು ಅಂಗಲಾಚಿದ.

ಶಿಕ್ಷಕರು : ನೀನು ಸಮವಸ್ತ್ರವನ್ನು ಧರಿಸಿಲ್ಲ.

ವಿದ್ಯಾರ್ಥಿ : ನಿಜ ಸರ್

ಶಿಕ್ಷಕರು ಬೆಂಕಿಯಾದರು. ಅವರ ಕೈಯಲ್ಲಿ ಒಂದು ಬಡಿಗೆ ಇತ್ತು. ಎರಡು ತಪ್ಪುಗಳನ್ನು ಮಾಡಿ ಕ್ಷಮಿಸಿರಿ ಎನ್ನುತ್ತಿರುವ ವಿದ್ಯಾರ್ಥಿಯ ಧೈರ್ಯ ಅವರನ್ನು ಕುದಿಯಲು ಹಚ್ಚಿತ್ತು.

ಶಿಕ್ಷಕರು : ಕೈ ಮುಂದೆ ಮಾಡು. ನಿನಗೆ ಬೆತ್ತದ ರುಚಿ ತೋರಿಸುತ್ತೇನೆ. ಇನ್ನು ಜೀವನದಲ್ಲಿ ಒಮ್ಮೆಯೂ ಇಂಥ ತಪ್ಪು ಮಾಡಬಾರದೆಂದು ನೆನಪಿಡುವಂತಾಗಬೇಕು.

ಶಿಕ್ಷಕರು ಕಣ್ಣು ಕೆಂಪಗೆ ಮಾಡಿದ್ದರು. ಮೈ ನಡುಗುತ್ತಿತ್ತು. ವಿದ್ಯಾರ್ಥಿ ಭಯದಿಂದ ಕೈ ಮುಂದೆ ಮಾಡಿದ. ಶಿಕ್ಷಕರು ಜೋರಿನಿಂದ ಹೊಡೆದರು. ವಿದ್ಯಾರ್ಥಿ ಕಣ್ಣು ಮುಚ್ಚಿ ಮುಖ ಕಿವುಚಿದ. ಅಷ್ಟು ಜೋರಾಗಿತ್ತು ಆ ಪೆಟ್ಟು. ಶಿಕ್ಷಕರು ಮತ್ತೆರಡು ಬಿಗಿದರು. ವಿದ್ಯಾರ್ಥಿ ಸುಮ್ಮನೇ ನಿಂತಿದ್ದ. ಅವನು ಚೀರಲಿಲ್ಲ, ಅಳಲಿಲ್ಲ. ಶಿಕ್ಷಕರ ಎಣಿಕೆ ತಪ್ಪಿತು. ವಿದ್ಯಾರ್ಥಿ ನೋವಿನಿಂದ ಒದ್ದಾಡಬೇಕೆಂಬುದು ಅವರ ಬಯಕೆ ಆಗಿತ್ತು. ಅದು ಅವರಿಗೆ ಅವಮಾನವೆನಿಸಿ, ಸಿಟ್ಟು ನೆತ್ತಿಗೇರಿತು. ಬೆತ್ತವನ್ನು ಬೀಸಿ ಕೈಗೆ ಹೊಡೆಯದೇ ಬೆನ್ನಿಗೆಬಿಟ್ಟರು. ರಪ್ಪ ಎಂಬ ಶಬ್ದ. ಮಗು ಚೀರಿದ. ದೂರ ಸರಿದು ನಿಂತ. "ಸರ್ ದಯಮಾಡಿ ಹೊಡೆಯಬೇಡಿರಿ."

ಶಿಕ್ಷಕರು : "ಮಗನೇ, ನನಗೆ ನೀನು ಆಜ್ಞೆ ಮಾಡುವೆಯಾ?" ಎಂದು ಹೊಡೆಯಲು ಮುಂದೆ ಹೆಜ್ಜೆ ಇಟ್ಟರು. ವಿದ್ಯಾರ್ಥಿ ಮತ್ತೆ ಹಿಂದೆ ಸರಿದು ವಿನಂತಿಸಿದ— "ಸರ್ ಒಂದು ಮಿನಿಟು ನನ್ನ ಮಾತು ಕೇಳಿರಿ. ಆಮೇಲೆ ಬೇಕಾದಷ್ಟು ಹೊಡೆಯಿರಿ."

ಶಿಕ್ಷಕರಿಗೆ ವಿಚಿತ್ರ ಎನಿಸಿತು. ಆದರೂ ಮಗು ಚೀರಿದ್ದು, ರೋದಿಸಿದ್ದು ಕೇಳಿ ಸ್ವಲ್ಪ ಸಮಾಧಾನವಾಗಿತ್ತು. ಅದೇ ಅವರ ಗುರಿಯಾಗಿತ್ತು. ನಿಂತು ಕೇಳಿದರು.

"ಏನು ಬೊಗಳು. ಬೇಗನೆ ಹೇಳು."

ವಿದ್ಯಾರ್ಥಿ ಹೇಳಿದ "ಒಂದು ಮಿನಿಟಿನಲ್ಲಿ ನನ್ನ ಅಂಗಿ ಬಿಚ್ಚಿ ಇಡುತ್ತೇನೆ. ನನ್ನ ಬರಿಮೈ ಮೇಲೆ ಹೊಡೆಯಿರಿ." ಎಂದು ಹೇಳಿ ಅಂಗಿ ಕಳೆದು ಬೆನ್ನು ತೋರಿಸಿ ನಿಂತ. ಬೆನ್ನಿನ ಮೇಲೆ ಬೆತ್ತದ ಬಾರು ಕೆಂಪಗಾಗಿ ಕಾಣುತ್ತಿದೆ. ಮಗುವಿನ ಎಳೆಯ ಮೈ ಮೇಲೆ ಅದು ಬರೆ ಕೊಟ್ಟಂತೆ ಕಾಣುತ್ತಿತ್ತು. ಮಗುವು ಬಾಗಿ ನಿಂತು ಅಂಗಿ ಪರೀಕ್ಷಿಸ ತೊಡಗಿತ್ತು. ಅಂಗಿಯ ಬೆನ್ನು ಏನಾಗಿದೆ ನೋಡುತ್ತಿತ್ತು. ಶಿಕ್ಷಕರಿಗೆ ಇದು ವಿಚಿತ್ರ ಎನಿಸಿತು. "ಏನು ನೋಡುತ್ತಿರುವೆ" ಎಂದರು.

ವಿದ್ಯಾರ್ಥಿ : "ಅಂಗಿ ಹರಿದು ಹೋಯಿತೊ ಏನೋ ಎಂದು ನೋಡುತ್ತಿದ್ದೆ. ಸರ್, ನೀವು ಹೊಡೆಯಿರಿ" ಎಂದು ಬೆನ್ನು ತೋರಿಸಿತು.

ಶಿಕ್ಷಕರು : "ಅಂಗಿ ಯಾಕೆ ಕಳಚಿದೆ?"

ವಿದ್ಯಾರ್ಥಿ : "ಸರ್, ನನಗೂ ನನ್ನ ಅಣ್ಣನಿಗೂ ನಡುವೆ ಒಂದೇ ಅಂಗಿ ಇದೆ. ಅವನು ಮಧ್ಯಾಹ್ನ ಇದನ್ನು ತೊಟ್ಟು ಹೈಸ್ಕೂಲಿಗೆ ಬರುತ್ತಾನೆ. ನಾನು ಮುಂಜಾನೆ ತೊಡುತ್ತೇನೆ. ಒಂದು ವೇಳೆ ಅಂಗಿ ಹರಿದರೆ ಇಬ್ಬರಿಗೂ ಇಲ್ಲದಂತಾಗುತ್ತದೆ." ವಿದ್ಯಾರ್ಥಿ ಅಂಗಿಯನ್ನು ಮಡಚಿ ಹಿಡಿದುಕೊಂಡು ನಿಂತ. ಬೆತ್ತದ ಪೆಟ್ಟು ಜಾಸ್ತಿ ಹತ್ತಿದ್ದು ವಿದ್ಯಾರ್ಥಿಯ ಬೆನ್ನಿಗೆ ಅಲ್ಲ, ಅಂಗಿಯ ಬೆನ್ನಿಗೆ ಅಂದರೆ ಶರ್ಟಿಗೆ, ವಿದ್ಯಾರ್ಥಿ ಚೀರಿದ್ದು ದುಃಖಿಸಿದ್ದು ಅಂಗಿ ಹರಿಯಿತೇನೋ ಎಂದು. ತನ್ನ ಬೆನ್ನಿನ ಮೇಲೆ ಉದ್ದನೆಯ ಬಾಸುಂಡೆ ಮೂಡಿದ್ದರೂ ಹುಡುಗ ಸುಮ್ಮನಿದ್ದ. ಅಷ್ಟೆ ಅಲ್ಲ ಹೊಡೆಸಿಕೊಳ್ಳಲು ಸಿದ್ಧವಾಗಿ ಬೆನ್ನು ಮುಂದೆ ಮಾಡಿದ್ದ.

ಶಿಕ್ಷಕರು : "ತಡಮಾಡಿ ಯಾಕೆ ಬಂದೆ?" ಮಾತು ಮೃದುವಾಗಿತ್ತು.

ವಿದ್ಯಾರ್ಥಿ : "ಸರ್, ನಾವು ಬಡ ಜಂಗಮರು. ಮುಂಜಾನೆ ನನ್ನ ಅಣ್ಣ ಹಿಟ್ಟಿನ ಭಿಕ್ಷೆಗಾಗಿ ಊರಲ್ಲಿ ಜೋಳಿಗೆ ತೆಗೆದುಕೊಂಡು ಹೋಗುತ್ತಾನೆ. ಇದೇ ಶರ್ಟ ಧರಿಸಿ ಹೋಗುತ್ತಾನೆ. ಅವನು ಭಿಕ್ಷೆ ಮುಗಿಸಿ ಬರುವುದು ತಡವಾಯಿತು. ಅವನು ಬಂದು ಶರ್ಟ ಬಿಚ್ಚಿ ಕೊಟ್ಟ. ನಾನು ಅದನ್ನು ತೊಟ್ಟುಕೊಂಡು ಓಡುತ್ತ ಬಂದೆ. ಆದರೂ ತಡವಾಯಿತು. ಅದು ನನ್ನ ತಪ್ಪು. ಹೊಡೆಯಿರಿ. ಈಗ ಬೇಕಾದಷ್ಟು ಹೊಡೆಯಿರಿ."

ಶಿಕ್ಷಕರಿಗೆ ಆಘಾತವಾಗಿತ್ತು. ಕೈಯಲ್ಲಿಯ ಬಿಗಿ ಕಡಿಮೆಯಾಗಿತ್ತು. ಬೆತ್ತ ನೆಲದ ಮೇಲೆ ಬಿತ್ತು. ನಿಂತಲ್ಲಿಯೇ ಶಿಕ್ಷಕರು ಕುಸಿದರು. ವಿದ್ಯಾರ್ಥಿ ಗಾಬರಿಯಾಗಿ ಗುರುಗಳನ್ನು ಹಿಡಿಯಲು ಹೋದ. ಶಿಕ್ಷಕರು

ಮಗುವನ್ನು ಅಪ್ಪಿಕೊಂಡರು. ವಿದ್ಯಾರ್ಥಿಗೆ ಗಾಬರಿ ಆಗಿತ್ತು. ತನ್ನ ಗುರುಗಳಿಗೆ ಏನೋ ಆಯಿತೆಂದು, ಕೇಳಿದ "ಸರ್, ತಮಗೆ ತೊಂದರೆಯಾಯಿತೇ? ಕುಡಿಯಲು ನೀರು ತರಲೇ?" ಶಿಕ್ಷಕರಿಗೆ ನೀರು ಬೇಕಾಗಿರಲಿಲ್ಲ. ಅವರ ಎರಡೂ ಕಣ್ಣು ಹಾಗೂ ಮೂಗು ಗಳಿಂದ ನೀರು ಹರಿಯತೊಡಗಿತ್ತು. ಒಂದೆರಡು ಹನಿ ಬೆಚ್ಚನೆಯ ಕಣ್ಣೀರು ಬೆನ್ನ ಬಾಸುಂಡೆಯ ಮೇಲೆ ಹರಿದವು. ಶಿಕ್ಷಕರ ಬೆರಳು ಬಾಸುಂಡೆಯ ಮೇಲೆ ಸರಿದಾಡಿದುವು. ಬಾಸುಂಡೆ ವಿದ್ಯಾರ್ಥಿಯ ಬೆನ್ನ ಮೇಲೆ, ನೋವು ಹಾಗೂ ಯಾತನೆ ಶಿಕ್ಷಕರ ಎದೆಯಲ್ಲಿ. ಶಿಕ್ಷಕರು ವಿದ್ಯಾರ್ಥಿಯನ್ನು ಇನ್ನೂ ಜೋರಿನಿಂದ ಅಪ್ಪಿಕೊಂಡರು. ಅಂಗಿ ಅವರಿಬ್ಬರ ನಡುವೆ ಸಿಕ್ಕು ಮುದ್ದೆಯಾಗಿತ್ತು. ಅಂಗಿಯಲ್ಲಿ ಈಗ ದೇವರು ನಿಂತಿದ್ದ. ಶಿಕ್ಷಕರ ಅಪ್ಪುಗೆ ಬಿಗಿ ಆದಂತೆ ದೇವರಿಗೆ ಉಸಿರಾಡಲೂ ತೊಂದರೆ ಆಗುತ್ತಿತ್ತು. ಆದರೆ ಆ ಬಿಗಿಯಲ್ಲಿ ದೇವರಿಗೆ ಖುಷಿಯೋ ಖುಷಿ.

ಅಂದಿನಿಂದ ಶಿಕ್ಷಕರ ಕೈಯಲ್ಲಿದ್ದ ಬೆತ್ತ ಹತ್ತಿಯಂತೆ ಮೃದುವಾಯಿತಂತೆ. ಮಗುವಿನ ಶಿಕ್ಷಣದ ವೆಚ್ಚವನ್ನೆಲ್ಲ ಅವರೇ ಕೊಟ್ಟರಂತೆ. ಅಂದಿನ ವಿದ್ಯಾರ್ಥಿ ಇಂದು ದೊಡ್ಡ ಅಧಿಕಾರಿ. ತನ್ನನ್ನು ಶಿಕ್ಷಿಸಿದ ಶಿಕ್ಷಕರನ್ನು ಅಧಿಕಾರಿ ತಂದೆಯಂತೆ ಕಾಣುತ್ತಾನೆ, ಪೂಜಿಸುತ್ತಾನೆ. ಶಿಕ್ಷಕರಿಗೆ ಈ ಘಟನೆಯ ನೆನಪಾದರೆ ಅವರ ಕಣ್ಣು ತುಂಬುತ್ತದೆ. ಗಂಟಲು ಬಿಗಿಯುತ್ತದೆ. ಆದರೆ ಮುಗುಳು ನಗೆ ಕಾಣುತ್ತದೆ.

ಕನ್ನಡದ ನೆಲದ ಪುಲ್ಲಿನಗೆ ಪಾವನ ತುಲಸಿ!
ಕನ್ನಡದ ನೆಲದ ನೀರ್ವೊನಲೆನಗೆ ದೇವನದಿ!
ಕನ್ನಡದ ನೆಲದ ಕಲ್ಲೆನಗೆ ಶಾಲಿಗ್ರಾಮ ಶಿಲೆ!
ಕನ್ನಡ ದೈವಮ್ಮ

ಕನ್ನಡ ಶಬ್ದಮೆನಗೋಂಕಾರ ಮೀಯೆನ್ನ
ಕನ್ನಡದ ನುಡಿಯೆ ಗಾಯತ್ರಿಯದ್ಭುತ ಮಂತ್ರ-
ಮಿನ್ನಾವುದೈ ಪರತು ಕನ್ನಡದ ಸೇವೆಯಿಂದಧಿಕಮೀ

—ಸಾಲಿ ರಾಮಚಂದ್ರರಾಯ

ಜಲಜನ್ಯ ರೋಗ ನಿಯಂತ್ರಣ: ಸರಳ ತಂತ್ರ ವಿದ್ಯೆ ತೋರಿಸಿರುವ ಹಾದಿ

ಡಾ|| ಕೆ. ಎಸ್. ಮಂಜ
ವಿಜ್ಞಾನಿ, ಡಿ.ಎಫ್.ಆರ್.ಎಲ್.
ಮೈಸೂರು–೧೧

ಕಲುಷಿತ ನೀರಿನ ಸೇವನೆ ಸರ್ವರೋಗಗಳ ಮೂಲ, ನೀರನ್ನು ಪೂರ್ವಭಾವೀಯಾಗಿ ಪರೀಕ್ಷಿಸಿ ತಿಳಿಯುವುದೊಂದೇ ಯೋಗ್ಯ ಮಾರ್ಗ. ಇಂಥ ಒಂದು ವಿಧಾನ ಸುಲಭವಾಗಿರಬೇಕು. ಮಿತವೆಚ್ಚದ್ದಾಗಿರಬೇಕು, ಯಾರು ಎಲ್ಲಿ ಎಂದು ಬೇಕಾದರೂ ಅನುಸರಿಸುವಂತಿರಬೇಕು. ಸಾಧ್ಯವೇ ? ಡಾ|| ಕೆ. ಎಸ್. ಮಂಜ ರವರ ಆವಿಷ್ಕಾರ ರಮ್ಯ ಕಥಾನಕದಂತೆ ಭಾಸವಾಗುತ್ತದೆ. ಸ್ವತಃ ಆವಿಷ್ಕರ್ತೃ ಸ್ವಂತ ಭಾಷೆಯಲ್ಲಿ ಈ ರೋಮಾಂಚಕ ಸಾಹಸವನ್ನು ವಿವರಿಸಿದ್ದಾರೆ. ವೈಜ್ಞಾನಿಕ ವಿಧಾನದ ಹಂತಗಳನ್ನು ಕಾದಂಬರಿಯ ಅಧ್ಯಾಯಗಳಂತೆ ವಿವರಿಸುವ ಲೇಖನ, ಅಂದ ಹಾಗೇ ಸೃಷ್ಟಿಕರ್ತನ ಕಾದಂಬರಿಯಲ್ಲವೇ ನಿಸರ್ಗ ?

೮೦ ಪ್ರತಿಶತ, ಸಾಂಕ್ರಾಮಿಕ ರೋಗಗಳು ಕಲುಷಿತ ನೀರಿನಿಂದ ಬರುತ್ತವೆ ಮತ್ತು ಮಕ್ಕಳ ಸಾವುಗಳಲ್ಲಿ ೫೦ ಪ್ರತಿಶತ ಇದೇ ಕಾರಣದಿಂದಾಗಿ ಉಂಟಾಗುತ್ತವೆ. ಆದಾಗ್ಯೂ ನೀರಿನಲ್ಲಿರುವ ಮಲಜನ್ಯ ಕೀಟಾಣುಗಳನ್ನು ಪತ್ತೆ ಹಚ್ಚುವ ತಂತ್ರ ವಿದ್ಯೆ ಬರೀ ಪ್ರಯೋಗ ಶಾಲೆಗಳಲ್ಲಿ ಉಳಿದು ಜನರಿಗೆ ಎಟುಕಲಾಗದ ಸಂಗತಿ. ಜಲಮಂಡಳಿಗಳಿಂದ ನಾಗರೀಕರಿಗೆ ಒದಗುವ ನೀರು ಬಹುತೇಕ ಯಾವುದೇ ಪರೀಕ್ಷಣೆಗಳಿಗೆ ಒಳಪಟ್ಟಿರುವುದಿಲ್ಲ. ಅಂದ ಮೇಲೆ ಕಲುಷಿತ ನೀರನ್ನು ಕುಡಿಯುವ ದೌರ್ಭಾಗ್ಯ ಬಹುಜನರದಾಗಿದೆ. ನಾವು ಕುಡಿಯುವ ನೀರು ಶುದ್ಧವೇ ಅಲ್ಲವೇ ಎಂದು ಸುಲಭವಾಗಿ ಪತ್ತೆ ಹಚ್ಚುವುದು ಸಾಧ್ಯವೇ ? ಇ ಕೋಲೈ ಮನುಷ್ಯನ ಕರುಳಿನಲ್ಲಿ ಇರುವ ಜೀವಾಣು. ವಾತಾವರಣದಲ್ಲಿ ಇದರ ಅಸ್ತಿತ್ವವು ಮಲಜನ್ಯ ಮಾಲಿನ್ಯ ಸೂಚಕ. ಈ.... ಕೀಟಾಣುಗಳು ಲ್ಯಾಕ್ಟೋಸ್ ಉಪಯೋಗಿಸಿ ೩೫ ಡಿಗ್ರಿ ಸೆಲ್ಸಿಯಸ್‌ನಲ್ಲಿ ಆಮ್ಲ ತಯಾರಿಸುತ್ತವೆ. ಯುಕ್ತ ಪಿ. ಹೆಚ್. ವರ್ಣದರ್ಶಕದಿಂದ ಆಮ್ಲ ಪ್ರಭಾವವನ್ನು ಪತ್ತೆ ಹಚ್ಚಬಹುದು. ಇಂಥ ಕೀಟಾಣುಗಳು ನೀರಿನಲ್ಲಿದ್ದರೆ ಅತಿ ಅಪಾಯಕರ ರೋಗಗಳಾದ ಟೈಫಾಯಿಡ್, ಕಾಲರಾ, ಜಾಂಡೀಸ್ ಇತ್ಯಾದಿಗಳ ಕೀಟಾಣುಗಳು ಇರುವ ಸಾಧ್ಯತೆ ಇದೆಯೆಂದೇ ಅರ್ಥ.

ಈ ಪರೀಕ್ಷಣಾ ವಿಧಾನಕ್ಕೆ ಪ್ರಯೋಗಾಲಯ ಕೋರುವ ವೆಚ್ಚ ರೂ. ೪೦೦–೧೫೦೦. ಇದರ ನಿರ್ವಹಣೆ ನುರಿತ ತಂತ್ರವಿದನಿಂದ ಮಾತ್ರ ಸಾಧ್ಯ, ಸಾಮಾನ್ಯ ಮಂದಿಗೆ ಎಟುಕಲಾಗದ ಪ್ರಯೋಗವಿದು. ಇದರ ಬದಲಾಗಿ ಸರಳ ತಂತ್ರ ವಿದ್ಯೆ ಸಾಧ್ಯವೇ? ಈ ಪ್ರಶ್ನೆ ೧೯೭೫ರಲ್ಲಿ ಗ್ವಾಲಿಯರ್‌ನ ಪ್ರಯೋಗಾಲಯದಲ್ಲಿ ನನ್ನ ಎದುರು ಬಂತು. ಅನಕ್ಷರಸ್ಥನೂ ಗ್ರಹಿಸಬಲ್ಲಷ್ಟು ಮತ್ತು ಯೋಧ ಉನ್ನತ ಪರ್ವತ ಪ್ರದೇಶಗಳಲ್ಲೂ ಉಪಯೋಗಿಸಬಲ್ಲಷ್ಟು ಸರಳವಾಗಿರಬೇಕು ಪರಿಹಾರ. ಸಾಧ್ಯವೇ? ಖರ್ಚು? ಇಂಥ ಸಂದರ್ಭದಲ್ಲಿ ಆರಂಭದಿಂದ ಆರಂಭಿಸುವುದೇ ಋಜುಮಾರ್ಗವೆಂದು ವಿಜ್ಞಾನಿಗಳಿಗೆ ತಿಳಿದಿದೆ. ಏಕಾಣು ಜೀವಿಗಳಿಗೆ ವಿಶಿಷ್ಟವಾದ ಜೀವ ರಾಸಾಯನಿಕ ವಿಶ್ಲೇಷಣಾ ಗುಣಗಳಿರುತ್ತವೆ. ಇವನ್ನೆಲ್ಲಾ ಒಂದೊಂದಾಗಿ ಪರೀಕ್ಷಿಸಿ ನಾನು ಕೊನೆಗೆ ಹೈಡ್ರೋಜನ್ ಸಲ್ಫೈಡ್ ತಯಾರಿಸುವ ಏಕಾಣು ಜೀವಿಗಳು ಮಲಜನ್ಯ ಪ್ರಮಾಣವನ್ನು ತೋರಿಸುತ್ತವೆಂದು ತೀರ್ಮಾನಿಸಿ ಆ ದಿಶೆಯಲ್ಲಿ ಕಾರ್ಯಮಗ್ನನಾದೆ.

ಜೀವಾಣುರಹಿತ ಬಾಟಲಿಯಲ್ಲಿ ಯುಕ್ತ ರಾಸಾಯನಿಕ ಪದಾರ್ಥಗಳನ್ನು ಇಡಬೇಕು. ಪರೀಕ್ಷಣೆಗೆ ತೆಗೆದುಕೊಂಡ ನೀರನ್ನು ಬಾಟಲಿಯ ಮೇಲುಮಟ್ಟಕ್ಕೆ ತುಂಬಿಸಿ ೩೦–೩೫ ಸೆಂಟಿಗ್ರೇಡ್ ಉಷ್ಣತೆಯಲ್ಲಿ ೧೮–೨೪ ಗಂಟೆಗಳ ಕಾಲ ಇರಿಸಬೇಕು. ಶೀತ ವಾತಾವರಣದಲ್ಲಾದರೆ ಈ ಬಾಟಲಿಯನ್ನು ಜೇಬಿನಲ್ಲಿರಿಸಿಕೊಂಡು ಮಲಗಿದರಾಯಿತು. ಆಗ ದೇಹದ ಉಷ್ಣತೆ ಅಗತ್ಯ ಪ್ರಮಾಣದಲ್ಲಿ ದೊರೆಯುವುದು. ಪರೀಕ್ಷೆಯ ಅವಧಿಯ ನಂತರ ನೀರಿನ ಬಣ್ಣ ಕಪ್ಪಾಯಿತೆನ್ನಿ, ಆಗ ನೀರು ಕುಡಿಯಲು ಯೋಗ್ಯವಲ್ಲ. ನೀರಿನ ಬಣ್ಣ ಬದಲಾಗದಿದ್ದರೆ ನೀರು ಕುಡಿಯಲು ಯೋಗ್ಯ. ಈ ಬಗೆಯ ಪತ್ತೆಗೆ ಯಾವ ದುಬಾರಿ ಉಪಕರಣವೂ ಬೇಕಾಗಿಲ್ಲ. ಪರೀಕ್ಷೆ ಮಾಡುವವರಿಗೆ ತರಬೇತಿ, ಕೌಶಲ್ಯ ಇತ್ಯಾದಿಗಳ ಅವಶ್ಯವಿಲ್ಲ. ಸಾಮಾನ್ಯ ತಾಪಮಾನದಲ್ಲಿ ಇದನ್ನು ಕೆಡದಂತೆ ದೀರ್ಘಕಾಲ ಇಡಬಹುದು. ಇದರ ರಾಸಾಯನಿಕ ಸಾಮಗ್ರಿ ಬೆಲೆ ಕೇವಲ ೫೦ ಪೈಸೆ. ಆದರೆ ಬಾಟಲಿ ಬೆಲೆ ಎಲ್ಲಾ ಸೇರಿ ರೂ. ೧೦–೦೦.

ತಂತ್ರ ವಿದ್ಯೆಯ ಸೃಷ್ಟಿ ಏನೋ ಆಗಿತ್ತು. ಆದರೆ ಇನ್ನಷ್ಟು ವಿಜ್ಞಾನಿಗಳು ಪುನಃ ಪರೀಕ್ಷಿಸಿ ದೃಢೀಕರಿಸಬೇಕು. ರಕ್ಷಣಾ ವೈದ್ಯಕೀಯ ಮಹಾ ವಿದ್ಯಾಲಯ ಪುಣೆಯಲ್ಲಿ ಈ ಸುಲಭೋಪಾಯವನ್ನು ಒರೆಗೆ ಹಚ್ಚಲಾಯಿತು. ಆದರೆ ಮಾನವ ಯಥಾಸ್ಥಿತಿಯನ್ನು ಮೆಚ್ಚುವುದೇ ಹೆಚ್ಚು. ಬದಲಾವಣೆಗೆ ವಿರೋಧ. ಇದು ನನ್ನ ಅನುಭವ. ಪುಣೆಯಲ್ಲಿಯ ಸೂಕ್ಷ್ಮಜೀವ ವಿಭಾಗಾಧಿಕಾರಿಗಳು ನನ್ನ ಆವಿಷ್ಕಾರವನ್ನು ತಿರಸ್ಕರಿಸಿದರು. ಮುಂದೆ ಇದನ್ನು ಗ್ವಾಲಿಯರ್‌ನ ಪ್ರಯೋಗಶಾಲೆಯ ನಿರ್ದೇಶಕರಾದ ಡಾ|| ರಾಮಚಂದ್ರನ್ ಇವರ ಗಮನಕ್ಕೆ ತರಲಾಯಿತು. ಈ ವಿಧಾನವನ್ನು ಒಂದು ಜಲ ಪ್ರಯೋಗಾಲಯದಲ್ಲಿ ಪುನಃ ಪರೀಕ್ಷಿಸಬೇಕೆಂದು ಕಿಂಗ್ ಇನ್‌ಸ್ಟಿಟ್ಯೂಟ್ ಮದ್ರಾಸಿನಲ್ಲಿ ಇದನ್ನು ತಪಾಸಿಸಬೇಕೆಂದು ನನಗೆ ಆದೇಶವಾಯಿತು. ಸಾಮಾನ್ಯ ೧೫೦ ಮಾದರಿ ಪರೀಕ್ಷಾ ಬಾಟಲಿಗಳೊಂದಿಗೆ ನಾನು ಮದ್ರಾಸಿನಲ್ಲಿ

ಮೂರು-ನಾಲ್ಕು ಜಲ ಮಾದರಿಗಳನ್ನು ಪರೀಕ್ಷಿಸಿ ಉಳಿದುದನ್ನು ವಿಜ್ಞಾನಿಗಳಲ್ಲಿ ಮೌಲ್ಯಮಾಪನ ಮಾಡಲು ಕೇಳಿಕೊಂಡೆ. ನಾಲ್ಕು ತಿಂಗಳಲ್ಲಿ ಈ ನೂತನ ಆವಿಷ್ಕಾರದ ಮೊಳಕೆ ಇನ್ನಷ್ಟು ಉದ್ದವಾಗಿ ಬೆಳೆದಿತ್ತು. ಅಲ್ಲಿಯ ತನಕ ಬಳಸಲಾಗುತ್ತಿದ್ದ ತಂತ್ರವಿದ್ಯೆ ಏನನ್ನು ಧೀರ್ಘ ಪ್ರಯೋಗ ನಂತರ ಸಾಧಿಸುತ್ತಿತ್ತೋ, ಅದನ್ನು ನನ್ನ ಸರಳ ವಿಧಾನ ಶೇಕಡ ೮೮ರ ವರೆಗೆ ಅತಿ ಕ್ಷಿಪ್ರವಾಗಿ ಸಾಬೀತು ಪಡಿಸಲಾಗಿತ್ತು.

ಈ ಆಂಶಿಕ (ಶೇಕಡ ೮೮) ವಿಜಯದಿಂದ ಉತ್ತೇಜಿತನಾಗಿ ಇದನ್ನು ಕುರಿತ ಸಂಶೋಧನಾ ಪ್ರಬಂಧವನ್ನು ಭಾರತದ ವಿಜ್ಞಾನ ಪತ್ರಿಕೆಗೆ ಪ್ರಕಟಿಸಲು ಕಳುಹಿಸಿದೆ. ತಿರಸ್ಕೃತವಾಯಿತು. ಇದರಿಂದ ಧೃತಿಗೆಡದೆ ಇದೇ ಪರೀಕ್ಷೆಯಲ್ಲಿ ತಿರುವನಂತಪುರ, ಕಲ್ಕತ್ತ, ಪಾಟ್ನಾಗಳಲ್ಲೂ ಮಾಡಲು ಪ್ರಯತ್ನಿಸಿದ್ದಾಯಿತು. ಇದಕ್ಕಾಗಿ ಆಗಸ್ಟ್ ೧೯೭೮ರಲ್ಲಿ ಗ್ವಾಲಿಯರ್‌ನಿಂದ ೮ ತಿಂಗಳ ಪುತ್ರಿ ಮತ್ತು ಪತ್ನಿಯೊಂದಿಗೆ ಐದನೂರು ಬಾಟಲಿಗಳನ್ನು ಹಿಡಿದು ರೈಲ್ವೆ ಸ್ಟೇಷನ್‌ಗೆ ಹೋದೆ. ನೆರೆಯಿಂದ ಎಲ್ಲಾ ಗಾಡಿಗಳು ರದ್ದಾಗಿದ್ದ ಕಾರಣದಿಂದಾಗಿ ಕಲ್ಕತ್ತಕ್ಕೆ ಹೋಗುವ ಟ್ರೈನಿನ ಪ್ರಥಮ ದರ್ಜೆಯೊಂದರಲ್ಲಿ ಮಾತ್ರ ಜಾಗವಿತ್ತು. ವೆಚ್ಚ ಹೆಚ್ಚಾದರೂ ಹೋಗಲೇಬೇಕು ಮತ್ತು ಈ ತಂತ್ರವಿದ್ಯೆಯನ್ನು ಪರೀಕ್ಷಿಸಲೇಬೇಕೆಂಬ ಉಮ್ಮಸ್ಸಿನಿಂದ ಗಾಡಿ ಏರಿ ಖರಗಪುರಕ್ಕೆ ಬಂದರೆ ಮುಂದಿನ ೮೦ ಕಿ.ಮೀ. ದಾರಿ ಜಲಾವೃತವಾಗಿತ್ತು. ಆದಗ್ಯೂ ಕಲ್ಕತ್ತಾಗೆ ಹೋಗಿ ಅಖಿಲ ಭಾರತ ಜನಸ್ವಾಸ್ಥ್ಯ ಸಂಸ್ಥೆಯ ಸೂಕ್ಷ್ಮ ಜೀವ ವಿಭಾಗದಲ್ಲಿ ಸರಳ ತಂತ್ರವಿದ್ಯೆಯನ್ನು ಪ್ರದರ್ಶಿಸಿದೆ. ಮೂರು ದಿನಗಳ ನಂತರ ಪಾಟ್ನಾಕ್ಕೆ ಹೋಗಬೇಕೆಂದು ರೈಲ್ವೆ ನಿಲ್ದಾಣಕ್ಕೆ ಬಂದಾಗ ಪ್ಲಾಟ್‌ಫಾರಂ ಖಾಲಿ ಇತ್ತು. ಕಾರಣ ನೆರೆ. ನಾಲ್ಕು ಗಂಟೆಗಳ ಕಾದ ನಂತರ ಒಂದು ಟ್ರೇನ್ ಪಾಟ್ನಾಕ್ಕೆ ಹೊರಟಿತು. ಪಾಟ್ನಾಕ್ಕೆ ಬಂದು ಅಲ್ಲಿಯ ಜನಸ್ವಾಸ್ಥ್ಯ ಸಂಸ್ಥೆಯಲ್ಲಿ ಪರೀಕ್ಷಿಸಲೆಂದು ಡಾ|| ಸಿನ್ಹಾ ಅವರನ್ನು ಭೇಟಿ ಮಾಡಿ ಅದರ ವಿಶಿಷ್ಟತೆಯನ್ನು ವಿವರಿಸಿದೆ. ಅದರ ಸರಳತೆಯನ್ನು ಕೇಳಿ ಅವರು ದಿಗ್ಭ್ರಾಂತರಾಗಿ "ಕ್ಯಾ ದಿಮಾಗ್ ಹೈ ಬಾಯಿ" ಅಂದರು. ಅರ್ಥಾತ್ ಅದೆಂತಹ ಭರವಸೆಯುಕ್ತ ಸರಳ ತಂತ್ರವಿದ್ಯೆಯತ್ತ ತಲೆ ಓಡಿರಬಹುದು. ಇದರ ಪ್ರಯೋಗವನ್ನು ಇಲ್ಲಿ ಪ್ರದರ್ಶಿಸಿ ಉಳಿದ ಬಾಟಲಿಗಳ ಮೂಲ್ಯಾಂಕನಕ್ಕಾಗಿ ಜನಸ್ವಾಸ್ಥ್ಯ ಸಂಸ್ಥೆಗೆ ಬಿಟ್ಟುಬಂದೆ. ಮೂರು ತಿಂಗಳ ನಂತರ ಎಲ್ಲಾ ಪ್ರಯೋಗಾಲಯಗಳ ಫಲಿತಾಂಶಗಳ ಮೂಲ್ಯಾಂಕನ ಮಾಡಿದಾಗ ಹೊಸ ತಂತ್ರವಿದ್ಯೆ ಶೇಕಡಾ ೮೦ರಿಂದ ೯೮ರ ವರೆಗೆ ಯಶಸ್ವಿಯಾಗಿತ್ತು. ಅಂದರೆ ಆಯ್ದ ನೀರಿನ ಮಾದರಿ ಕಲುಷಿತವೇ? ಅಲ್ಲವೇ ಎಂಬುದನ್ನು ಸ್ಥಿರೀಕರಿಸುವುದರಿಂದ ಈ ಸುಲಭ ಪ್ರಯೋಗ ಸಫಲವಾಗಿತ್ತು. ಈ ಮಧ್ಯೆ ಗ್ವಾಲಿಯರ್ ಪಟ್ಟಣದಲ್ಲಿ ಕಾಮಾಲೆ ಒಮ್ಮೆಲೆ ಜಾಸ್ತಿಯಾಗತೊಡಗಿತ್ತು. ಅಲ್ಲಿಯ ಸ್ವಾಸ್ಥ್ಯ ತಾಂತ್ರಿಕ ವಿಭಾಗ ನೀರಿನ ವಿಶ್ಲೇಷಣೆ ಮಾಡಿದಾಗ ಅದರಲ್ಲಿ ಕ್ಲೋರಿನ್ ಅಂಶ ಇದ್ದುದರಿಂದ ಇದು ನೀರಿನಿಂದ ಬಂದ ಖಾಯಿಲೆ ಅಲ್ಲ ಎಂದು ತೀರ್ಮಾನಿಸಿದರು. ಅಲ್ಲಿಯ

ವಿಭಾಗಾಧ್ಯಕ್ಷರು ನೀರನ್ನು ಪರೀಕ್ಷಿಸಲಿಕ್ಕಾಗಿ ನನ್ನ ನೆರವನ್ನು ಕೋರಿದರು. ಜನರು ಖಾಯಿಲೆಯುಲ್ಲಿ ಮಲಗಿದ್ದರೆ ರಕ್ಷಣಾ ವಿಜ್ಞಾನಿಯಾದ ನಾನು ಏಕೆ ತಲೆಕೆಡಿಸಿಕೊಳ್ಳಬೇಕೆಂದು ನನ್ನನ್ನು ಪ್ರಶ್ನಿಸಿದವರು ಇದ್ದರು, ಇದು ಹಾಗಿರಲಿ. ಅವರು ಒದಗಿಸಿದ ಜೀಪ್ ಒಂದರಲ್ಲಿ ಸಂಚರಿಸಿ ನಾನು ಮೂರು ಗಂಟೆಯ ಅವಧಿಯಲ್ಲಿ ೫೪ ನೀರಿನ ಮಾದರಿಗಳನ್ನು ನಗರದ ವಿವಿಧ ಭಾಗಗಳಿಂದ ನಮ್ಮ ಪ್ರಯೋಗ ಬಾಟಲಿಗಳಲ್ಲಿ ತುಂಬಿಸಿ ಪ್ರಯೋಗಾಲಯಕ್ಕೆ ಮರಳಿದೆ. ಮರುದಿನ ಅವುಗಳಲ್ಲಾದ ತಪ್ಪು ಬದಲಾವಣೆಗಳನ್ನು ಪರಾಂಭರಿಸಿದಾಗ ೧೭ ಬಾಟಲಿಗಳಲ್ಲಿ ನೀರು ಕಲುಷಿತವಾಗಿತ್ತು. ಈ ಕಲುಷಿತ ನೀರಿನನೆಲೆ ಮತ್ತು ಕಾಮಾಲೆ ಆದ ಪ್ರದೇಶವನ್ನು ನಗರದ ನಕ್ಷೆಯಲ್ಲಿ ಗುರುತಿಸಿದಾಗ ಅವರೆಡು ಒಂದೇ ಎಡೆಯಲ್ಲಿ ಕಂಡು ಬಂದುವು. ಅಲ್ಲಿಯ ನೀರಿನ ಕೊಳವೆಗಳಲ್ಲಿ ಬೇರೆ ಬೇರೆ ಕಡೆ ನೀರಿನ ಮಾದರಿ ಎತ್ತಿ ಪರೀಕ್ಷಿಸಿದಾಗ ಕೊಳವೆ ಬಾವಿಗಳೇ ಕಲುಷಿತವಾಗಿದೆ ಎಂದು ತಿಳಿದು ಬಂತು. ಉಳಿದದ್ದೇನು? ಕೊಳವೆ ಬಾವಿಗಳ ನೀರಿನ ಸಂಪರ್ಕ ಕಡಿತ ಹೀಗೆ ಮಾಡಿದ್ದೇ ತಡ ರೋಗ ಪೂರ್ಣ ಹತೋಟಿಗೆ ಬಂತು. ಗ್ವಾಲಿಯರ್ ನಗರಕ್ಕೆ ಪರಿಷ್ಕೃತ ಮಲಜನ್ಯ ಜೀವಾಣುರಹಿತ ನೀರಿನ ಸರಬರಾಜು ವ್ಯವಸ್ಥೆ ಇದೆ. ಆದರೆ ಬೇಸಿಗೆಯಲ್ಲಿ ನೀರಿನ ಒತ್ತಡ ಕಡಿಮೆ ಇರುವುದರಿಂದ ಕೆಲವು ಕೊಳವೆ ಬಾವಿಗಳನ್ನು ತೋಡಿ ಅವುಗಳ ನೀರನ್ನು ಪರಿಷ್ಕರಿಸದೇ ಸೀದಾ ಪರಿಷ್ಕರಿಸಿದ ನೀರಿನ ನಳಿಗೆಗಳಿಗೆ ಹೂಡಲಾಗಿತ್ತು. ಇದರಿಂದಾಗಿ ಈ ಬೆರಕೆ ನೀರಿನಲ್ಲಿ ಸ್ವಲ್ಪ ಅಂಶ ಕ್ಲೋರಿನ್ ಇದ್ದರೂ ೩೦ ನಿಮಿಷಗಳ ಸ್ಪರ್ಶಕಾಲ ದೊರೆಯದ್ದರಿಂದ ಮಲಜನ್ಯ ಜೀವಾಣುಗಳನ್ನು ಕೊಲ್ಲಲು ಕ್ಲೊರೀನ್ ಅಸಮರ್ಥವಾಯಿತು. ನನ್ನ ಪ್ರಯತ್ನ ಸಫಲವಾಯಿತು. ಈ ಪ್ರತ್ಯಕ್ಷ ಪ್ರಮಾಣವನ್ನೇ ಆಧರಿಸಿ ನಾನು ನಿಜ ಜೀವನದಲ್ಲಿ ರೋಗ ಹರಡಿದಾಗ ಈ ಸರಳ ತಂತ್ರ ವಿದ್ಯೆ ಹೇಗೆ ಕಾಮಾಲೆ ರೋಗವನ್ನು ಹತೋಟಿಗೆ ತರಬಲ್ಲುದು ಎಂಬುದರ ಬಗ್ಗೆ ಒಂದು ವಿಜ್ಞಾನ ಪ್ರಬಂಧವನ್ನು ಬರೆದೆ. ಆ ಮೊದಲು ಭಾರತದ ವಿಜ್ಞಾನ ಪತ್ರಿಕೆ ಲೇಖನವನ್ನು ತಿರಸ್ಕರಿಸಿದ ಕಹಿಯ ಅನುಭವ ನನ್ನ ಮನದಿಂದ ಮಾಸಿರಲಿಲ್ಲ. ಎಂದೇ ಈ ಹೊಸ ಪ್ರಬಂಧವನ್ನು ವಿಶ್ವ ಸ್ವಾಸ್ಥ್ಯ ಸಂಸ್ಥೆ ಸ್ವಿಟ್ಸರ್‌ಲ್ಯಾಂಡ್‌ಗೆ ಕಳುಹಿಸಿದೆ. ಕೆಲವೇ ದಿನಗಳಲ್ಲಿ ಸಿಹಿ ಸುದ್ದಿ: ಅವರು ಅದನ್ನು ಸ್ವೀಕರಿಸಿದ್ದರು. ಅದೇ ವರ್ಷ ಏಪ್ರಿಲ್ ಮಾಸದಲ್ಲಿ ಭೋಪಾಲದ ಮಿಲಿಟರಿ ನಗರವೊಂದರಲ್ಲಿ ಕಾಮಾಲೆ ಹರಡಿದಾಗ ಅಲ್ಲಿಗೆ ನನ್ನನ್ನು ಕರೆಸಿದರು. ಒಂದೆರಡು ದಿನಗಳಲ್ಲಿ ಕಲುಷಿತ ನೀರಿನ ಮೂಲವನ್ನು ಗುರುತಿಸಿದ್ದಾಯ್ತು. ಈ ನಗರಕ್ಕೆ ಪರಿಷ್ಕೃತ ನೀರಿನ ಸರಬರಾಜಿದೆ. ಆದರೆ ನೀರು ಶೇಖರಣಾ ಜಾಗವನ್ನು ಚೊಕ್ಕ ಮಾಡಬೇಕಾದುದರಿಂದ ಜನರಿಗೆ ನಿರ್ಧಿಷ್ಟ ಪ್ರಮಾಣದಲ್ಲಿ ಮಾತ್ರ ನೀರು ಒದಗಿಸಲಾಗುತ್ತಿತ್ತು. ನೀರಿನ ಕೊರತೆ ಇದ್ದುದರಿಂದ ಜನರು ಹತ್ತಿರದ ಬಾವಿಯಿಂದ ನೀರನ್ನು ಉಪಯೋಗಿಸುತ್ತಿದ್ದರು. ನೀರು ನೋಡಲಿಕ್ಕೇನೋ ಚೊಕ್ಕವಾಗಿಯೇ ಇತ್ತು. ಆದರೆ ಈ ಬಾವಿ ಆಸ್ಪತ್ರೆ

ರೋಗಿಗಳ ಮಲಶೇಖರಣಾ ಹೊಂಡದಿಂದ (ಸೆಪ್ಟಿಕ್ ಟ್ಯಾಂಕ್) ಬರೀ ೯೦ ಮಿ. ದೂರದಲ್ಲಿದ್ದ ಬಾವಿಗೆ ೫ ಅಶ್ವ ಸಾಮರ್ಥ್ಯದ ಮೋಟಾರನ್ನು ನೀರು ಹಾಯಿಸಲೆಂದು ಇಟ್ಟಿದ್ದರು. ಇಲ್ಲಿ ನಾನು ಒಂದು ವಿಶಿಷ್ಟ ರಾಸಾಯನಿಕ ಬಣ್ಣವನ್ನು ಮಲ ಶೇಖರಣಾ ಹೊಂಡಕ್ಕೆ ಹಾಕಿ ೬ ಗಂಟೆಗೊಮ್ಮೆ ಬಾವಿಯ ನೀರನ್ನು ತೆಗೆದು ಬಣ್ಣಕ್ಕಾಗಿ ಪರೀಕ್ಷಿಸತೊಡಗಿದೆ. ೩೦–೩೬ ಗಂಟೆಗಳಲ್ಲಿ ತೆಗೆದ ನೀರಿನ ಅಂಶಗಳಲ್ಲಿ ಬಣ್ಣ ಕಂಡು ಬಂದಿತು. ಅಂದರೆ ಮಲ ಶೇಖರಣಾ ಹೊಂಡದಿಂದ ನೀರು ಕೀಟಾಣುಗಳೊಂದಿಗೆ ಬಾವಿಗೆ ಸಲೀಸಾಗಿ ಬರುತ್ತಿತ್ತು. ಅಲ್ಲದೇ ಬಾವಿಗೆ ಅಳವಡಿಸಿದ ನೀರಿನ ಪಂಪಿನಿಂದಾಗಿ ಹತ್ತಿರದ ಪ್ರದೇಶದಿಂದ ನೀರನ್ನು ಹೀರುವ ಕ್ಷಮತೆ ಕೂಡಾ ಹೆಚ್ಚಾಗಿದ್ದುದರಿಂದ ಮಲದ ಹೊಂಡದ ನೀರು ನೆಲದಡಿಯಿಂದ ಬರುತ್ತಿತ್ತು. ಸರಳ ಪರೀಕ್ಷಾ ವಿಧಾನ ಮತ್ತೆ ಯಶಸ್ಸು ಗಳಿಸಿತು.

ವಿಶ್ವ ಸ್ವಾಸ್ಥ್ಯ ಸಂಘಟನೆ ನನ್ನ ಪ್ರಬಂಧವನ್ನು ಪ್ರಕಟಿಸಿತು. ಖೈಬರ್ ವೈದ್ಯಕೀಯ ಮಹಾ ವಿದ್ಯಾಲಯ ಪೇಶಾವರದ ಡಾ|| ಉಪ್ಪಲ್ ಅವರ ಗಮನ ಇದರತ್ತ ಹರಿಯಿತು. ಅಮೇರಿಕಾ ಸಂಯುಕ್ತ ಸಂಸ್ಥಾನಗಳು, ನಿರಾಶ್ರಿತರ ಸಂಸ್ಥೆ, ನಿರಾಶ್ರಿತರ ಠಾಣೆಗಳಲ್ಲಿ ಪರೀಕ್ಷಣೆಗಾಗಿ ಡಾ|| ಉಪ್ಪಲ್‌ರನ್ನು ಕೇಳಿದಾಗ ಅವರು ನನ್ನ ವಿಧಾನ ಅತ್ಯಂತ ಸರಳ ಮತ್ತು ಉಪಯುಕ್ತವೆಂದು ಸೂಚಿಸಿದರು. ಕೂಡಲೇ ಕಾರ್ಯಕ್ಕಿಳಿದ ಸಂಯುಕ್ತ ರಾಷ್ಟ್ರ ನಿರಾಶ್ರಿತರ ಸಂಸ್ಥೆಗೆ ಅಚ್ಚರಿ ಕಾದಿತ್ತು. ಸರಳವಾಗಿ ಹಾಗೂ ನಿಖರವಾಗಿ ನೀರಿನಲ್ಲಿ ಮಲಜನ್ಯ ಮಾಲಿನ್ಯವನ್ನು ಪತ್ತೆ ಹಚ್ಚುವ ವಿಧಾನ ನಿರಾಶ್ರಿತರ ಠಾಣೆಗೆ ಸುಲಭವಾಗಿ ಮಾಡುವ ಸಾಮರ್ಥ್ಯ ಇದೆ ಎಂದು ಮನಗಂಡಿತು. ಇದರಿಂದಾಗಿ ನಿರಾಶ್ರಿತರ ಠಾಣೆಗಳಲ್ಲಿ ಜಲಜನ್ಯ ರೋಗಗಳನ್ನು ಹತೋಟಿಗೆ ತರಲು ಸಾಧ್ಯವಾಯಿತು. ಮುಂದೆ ಗ್ವಾಲಿಯರ್ ಸೈನ್ಸ್ ಸೆಂಟರ್ ಇದನ್ನು ಹಳ್ಳಿಹಳ್ಳಿಗಳಲ್ಲಿ ಹಾಗೂ ಆರೋಗ್ಯ ಮಂತ್ರಿಗಳ ಮನೆಯ ನೀರನ್ನು ಪರೀಕ್ಷಿಸಿ, ನೀರಿನ ಗುಣಮಟ್ಟವನ್ನು ಅಲ್ಲೇ ತೋರಿಸಿದರು. ಸರಳ ತಂತ್ರ ವಿದ್ಯೆಯ ಬಗ್ಗೆ ಅಂತೆಯೇ ವೈಜ್ಞಾನಿಕ ವಿಧಾನದ ಬಗ್ಗೆ ಜನರಿಗೆ ಅಪಾರ ನಂಬಿಕೆ ಮೂಡಿತು. ಈ ಸಂಸ್ಥೆ ನನಗೆ "ವಿಜ್ಞಾನ ರತ್ನ" ಗೌರವ ಪ್ರದಾನಿಸಿತು. ಇದನ್ನು ಪಡೆಯಲೆಂದು ನಾನು ಕರ್ನಾಟಕ ಎಕ್ಸ್‌ಪ್ರೆಸ್‌ನಲ್ಲಿ ಬೆಂಗಳೂರಿನಿಂದ ಹೊರಟಾಗ ಎರಡು ಗಂಟೆಗಳಲ್ಲಿ ಭೀಕರ ಅಪಘಾತಕ್ಕೊಳಗಾಗಿ ೮೦ ಮಂದಿ ಮೃತಪಟ್ಟರು. ಸಧ್ಯ ನನಗೇನು ಆಗಲಿಲ್ಲ.


ಕೆನಡಾದ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ನೀರಿನ ಎಲ್ಲಾ ಸರಳ ಪರೀಕ್ಷಾ ವಿಧಿಗಳ ಮೂಲ್ಯಾಂಕನ ಮಾಡಬೇಕೆಂದು ಮೂರು ಖಂಡಗಳಿಂದ ಎಂಟು ದೇಶಗಳನ್ನು ಗುರುತಿಸಿ ಆರು ವರ್ಷಗಳ ದೀರ್ಘ ಅಧ್ಯಯನ ನಡೆಸಿತು. ೧೯೯೧ರಲ್ಲಿ ಪರಿಣಾಮ ಈ ರೀತಿ ಘೋಷಿಸಿತು. "ಡಾ|| ಮಂಜರ ವಿಧಾನ ಎಲ್ಲಾ ವಿಧಾನಗಳಿಗಿಂತಲೂ ಅತಿ ಸರಳ ಮತ್ತು ಅತಿ ಉತ್ತಮ." ಇದು ಜರ್ಮನ್ ಪತ್ರಿಕೆಯ ಮೂಲಕ ನನಗೆ ತಿಳಿಯಿತು. ಆಗಲೇ ಹಲವು ದಕ್ಷಿಣ ಅಮೇರಿಕಾದ ದೇಶಗಳು ಈ ವಿಧಾನ

ವನ್ನು ತಮ್ಮಲ್ಲಿ ಅಳವಡಿಸಿಕೊಂಡಿದ್ದವು. ಐ.ಐ.ಟಿ. ಖಾನ್‌ಪುರದ ಡಾ॥ ಮಲಾಯಿ ಚೌಧರಿಯವರು ೧೯೯೦ರಲ್ಲಿ ಮೆಕ್ಸಿಕೋಗೆ ಭೇಟಿಯಿತ್ತಾಗ ನನ್ನ ಈ ಸರಳ ವಿಧಾನ ವನ್ನು ಅಲ್ಲಿ ನೋಡಿದವರು ಅಲ್ಲಿಯ ವಿಜ್ಞಾನಿಗಳನ್ನು ಇದು ಎಲ್ಲಿಯ ತಂತ್ರವಿದ್ಯೆ ಎಂದು ಕೇಳಿದರು. ಅದು ನಿಮ್ಮ ಭಾರತದ್ದೇ ಎಂದಾಗ ಪ್ರೊ॥ ಚೌಧರಿ ಯವರಿಗೆ ಅಚ್ಚರಿ. ಭಾರತಕ್ಕೆ ಹಿಂದಿರುಗಿದ ಅವರು ತಮ್ಮ ಸಹೋದ್ಯೋಗಿ ಪ್ರೊ॥ ವೆಂಕೋಬಾಚಾರ್ ಅವರೊಡನೆ ಚರ್ಚಿಸಿ ಯೂನಿಸೆಫ್ ಸಹಯೋಗದೊಂದಿಗೆ ಒಂದು ಕಮ್ಮಟವನ್ನು ಖಾನ್‌ಪುರ ದಲ್ಲಿ ನಡೆಸಲಾಯಿತು. ಯೂನಿಸೆಫ್‌ನ ಶ್ರೀ ವೈಶ್, ಇದರ ಸೂತ್ರಧಾರಿ. ನಾನು ಅಲ್ಲಿಗೆ ಆಮಂತ್ರಿತ ವಿಜ್ಞಾನಿ. ಅತಿಥಿ ಗೃಹ ದಲ್ಲಿ ವೈಶ್ ಅವರು ನನ್ನನ್ನು ಭೇಟಿಯಾ ದಾಗ ಕೇಳಿದ ಪ್ರಶ್ನೆ "ಯು ಲುಕ್ ಲೈಕ್ ದಿಸ್ ?" ವೈಶ್ ಅವರು ನನ್ನನ್ನು ದೊಡ್ಡ ಅಜಾನುಬಾಹು ಹಾಗೂ ವೃದ್ಧ ವಿಜ್ಞಾನಿ ಯೆಂದು ಭಾವಿಸಿದ್ದಿರಬೇಕು. ನೀವು ನಿಮ್ಮ ವಿಧಾನದಿಂದಲೂ ಹೆಚ್ಚು ಸರಳವಾಗಿದ್ದೀರಿ ಎಂದರು. ಮುಂದೆ ಉತ್ತರ ಪ್ರದೇಶದಲ್ಲಿ ಈ ವಿಧಾನವನ್ನು ಉಪಯೋಗಿಸಿ ಜಲಜನ್ಯ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟ ಲಾಯಿತು. ೧೯೯೫ರ ಅಲಹಾಬಾದಿನ ಕುಂಭಮೇಳದಲ್ಲಿ ಒಂದು ಕೋಟಿಗೂ ಹೆಚ್ಚು ಜನರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ನೀರಿನ ಗುಣಮಟ್ಟವನ್ನು ಪರೀಕ್ಷಿಸಲು ಈ ವಿಧಾನವನ್ನು ಅಳವಡಿಸಿ ದರು. ನೀರು ಕಲುಷಿತವೆಂದು ಕಂಡು ಬಂದಾಗ ಕ್ಲೋರಿನ್ ಪ್ರಮಾಣ ಹೆಚ್ಚಿಸ ಲಾಯಿತು. ಪರಿಣಾಮ ! ಕುಂಭಮೇಳದ ಚರಿತ್ರೆಯಲ್ಲಿ ಪ್ರಥಮ ಬಾರಿ ಜಲಜನ್ಯ ರೋಗವಿರಲಿಲ್ಲ. ಶ್ರೀ ವೈಶ್ ಅವರಿಗೆ ಅದೇನೋ ಸಾಧಿಸಿದ ಸಂತೋಷ. ಅದರ ವಿಚಾರದಲ್ಲಿ ನಾವು ಜಲಜನ್ಯರೋಗಗಳ ಸಮಸ್ಯೆಯ ಹತೋಟಿಯ ದಿಶೆಯಲ್ಲಿ ಇನ್ನು ತುಂಬಾ ಸಾಧಿಸಲಿಕ್ಕಿದೆ.

"ರಾಜೀವ ಗಾಂಧಿ ರಾಷ್ಟ್ರೀಯ ಕುಡಿ ಯುವ ನೀರಿನ ಮಿಶನ್ ಈ ಸರಳ ವಿಧಾನ ವನ್ನು ಹಳ್ಳಿ ಹಳ್ಳಿಗೂ ಹಮ್ಮಿಕೊಂಡಿದೆ. ಈಗಾಗಲೇ ದಕ್ಷಿಣ ಅಮೇರಿಕಾದ ಪರಾಗ್ವೆ, ಚಿಲಿ, ಬ್ರೆಜಿಲ್, ಮಪುಚಿ ಇಂಡಿಯನ್ ಅಲ್ಲದೇ ಕೊಲಂಬಿಯಾ, ಹವಾಯಿದ್ವೀಪಗಳು, ಮೊರಾಕೋ, ಕೆನಡಾದ ಹಳ್ಳಿಗೂ, ಇಂಡೋನೇಷಿಯ ಈ ಸರಳ ತಂತ್ರ ವಿದ್ಯೆಯನ್ನು ಉಪಯೋ- ಗಿಸುತ್ತಿವೆ. ಈಗಾಗಲೇ, ೧೫ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ವಿಜ್ಞಾನ ಪತ್ರಿಕೆಗಳಲ್ಲಿ ಈ ಸರಳ ವಿಧಾನವನ್ನು ಮಾನ್ಯ್ಯಂಕರಿಸಿ ಮೆಚ್ಚಲಾಗಿದೆ.

ಮೈಸೂರು ವೀಣಾವಾಣಿಯ ಮುಖವಾಣಿ ದೊರೆಸ್ವಾಮಿ ಅಯ್ಯಂಗಾರ್

ಪ್ರೊ|| ಆರ್. ಎನ್. ದೊರೆಸ್ವಾಮಿ
೬, ೧೫ನೆಯ ಮುಖ್ಯ ರಸ್ತೆ, ಜಯನಗರ
ಮೈಸೂರು-೫೭೦ ೦೧೪



ದಿವಂಗತ ವೀಣೆ ದೊರೆಸ್ವಾಮಿ ಅಯ್ಯಂಗಾರ್

ಮೈಸೂರು ವಿ. ದೊರೆಸ್ವಾಮಿ ಅಯ್ಯಂಗಾರ್ಯರ (೧೧-೮-೧೯೨೦—೨೮-೧೦-೧೯೯೭) ನಿಧನದೊಂದಿಗೆ ವೀಣೆ ಶೇಷಣ್ಣ ವಾಣಿಯ ಅರ್ಥಾತ್ ಮೈಸೂರು ವೀಣಾವಾಣಿಯ ಒಂದು ಪ್ರಮುಖ ತಂತು ಕಡಿದಂತಾಯಿತು. ಜೀವಿ ಮರ್ತ್ಯ, ಜೀವ ಅಮರ; ಅದೇ ರೀತಿ ಕಲೆ ಕೂಡ. ದೊರೆಸ್ವಾಮಿ ಅಯ್ಯಂಗಾರ್ಯರು ಹರಿಸಿದ ನಾದಲಹರಿ, ಬೆಳೆಸಿದ ಶಿಷ್ಯ ಪರಂಪರೆ, ಸ್ವತಃ ತಾವೇ ಬಾಳಿದ ಪರಿ ಎಲ್ಲವೂ ನಾಡಿನ ಅಂತಸ್ಸತ್ತ್ವದಲ್ಲಿ ಲೀನವಾಗಿದ್ದು ನವಸ್ವನಗಳ ಕೂಜನಕ್ಕೆ ಪ್ರೇರಕವಾಗುವುವು ಎಂಬುದು ಸಂದೇಹಾತೀತ: "ಶ್ರುತಗಾನಂ ಅಭಿರಾಮಂ ಅಶ್ರುತಗಾನಂ ಅಭಿರಾಮತರಂ" (ಡಿ.ವಿ.ಜಿ). ಆದರೆ ಅವರೊಂದಿಗೆ

ಶಾಶ್ವತವಾಗಿ ಮರೆಯಾಗಿ ಹೋದ ಇನ್ನೂ ಏನೋ ಒಂದು ವೈಶಿಷ್ಟ್ಯವಿದೆ: ಅವರ ಮಂದಹಾಸ, ನಿತ್ಯತೃಪ್ತಿ ಮತ್ತು ನಿರಾಡಂಬರ. ಶ್ರೀಯುತರ ಜೊತೆ ಗುರುಕುಲ ಶಿಕ್ಷಣದಲ್ಲಿ ಸಹಪಾಠಿಗಳಾಗಿದ್ದು ಕರ್ನಾಟಕದ ವೀಣೆಗೆ ಹೊಸ ಆಯಾಮ ನೀಡಿರುವ ಇಬ್ಬರು ವೈಣಿಕರು, "ಪುಸ್ತಕ ಪ್ರಪಂಚ"ದ ಕೋರಿಕೆ ಮೇರೆಗೆ, ತಮ್ಮ ನುಡಿನಮನಗಳನ್ನು ಸಲ್ಲಿಸಿದ್ದಾರೆ.

ನಾ ಕಂಡ ಯುವ ವೀಣಾವಿದ್ವಾಂಸ

ಆತ್ಮೀಯ ಮಿತ್ರ ದೊರೆಸ್ವಾಮಿ ಅಯ್ಯಂಗಾರ್ಯರ ಮರಣದಿಂದ ನಾನು ಬಲು ದುಃಖಿತನಾಗಿದ್ದೇನೆ. ನನ್ನ ಗುರುಕುಲವಾಸದ ಕೆಲವು ದೃಶ್ಯಗಳನ್ನು ನೆನಪಿನ ಅಂಗಳದಲ್ಲಿ ಕಂಡಂತೆ ಇಲ್ಲಿ ಬಿಂಬಿಸಿದ್ದೇನೆ.

ನಾನಿನ್ನೂ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ತಂದೆಯವರು ನಾನೊಬ್ಬ ಸಂಗೀತಗಾರನೇ ಆಗಬೇಕೆಂಬ ಸಂಕಲ್ಪದಿಂದ ನನ್ನನ್ನು ತಮಿಳುನಾಡಿಗೆ ಕಳುಹಿಸಿದರು. ಸುಮಾರು ೪-೫ ವರ್ಷಗಳು ಅಲ್ಲೆಲ್ಲಾ ಸುತ್ತಾಡಿ ಸೇಲಂ ದೊರೆಸ್ವಾಮಿ ಅಯ್ಯಂಗಾರ್ ಅವರಲ್ಲಿ ಗಾಯನ ಶಿಕ್ಷಣ ಪಡೆದು ಶಾರೀರದ ತೊಂದರೆಯಿಂದ ಮುಂದುವರೆಯಲಾರದೆ ಊರಿಗೆ ಹಿಂದಿರುಗಿದೆ. ಅನಂತರ ವೈಣಿಕನಾದರೂ ಆಗೋಣವೆಂದು ಬಯಸಿ ಗುರುಗಳ ಅನ್ವೇಷಣೆ ಮಾಡುತ್ತಾ ಕಡೆಗೆ ೧೯೩೯ರಲ್ಲಿ ಮೈಸೂರಿಗೆ ಬಂದೆ. ಆಗ ನನ್ನ ವಯಸ್ಸು ೨೩ ವರ್ಷ. ಆಗಿನ ಹೆಸರಾಂತ ವೈಣಿಕರೂ, ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನ ಪ್ರಮುಖರೂ ಆಗಿದ್ದ ವೀಣಾ ವೆಂಕಟಗಿರಿಯಪ್ಪನವರನ್ನು ಆಶ್ರಯಿಸಿದೆ. ಅವರು ದೊಡ್ಡ ಮನಸ್ಸು ಮಾಡಿ ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಮೈಸೂರು ವೈಣಿಕ ಪರಂಪರೆಗೆ ಕಲಶಪ್ರಾಯರಾಗಿದ್ದ ವೀಣೆ ಶೇಷಣ್ಣನವರು ನಮ್ಮ ಗುರುಗಳ ಗುರುಗಳು. ಹೀಗೆ ಮೈಸೂರು ವೀಣಾ ಪರಂಪರೆಗೆ ಸೇರುವ ಭಾಗ್ಯ ನನ್ನದಾಯಿತು. ಆಗ ನನ್ನ ಗುರುಗಳಲ್ಲಿ ಶಿಕ್ಷಣ ಪಡೆಯುತ್ತಿದ್ದ ಹಲವಾರು ಶಿಷ್ಯರಲ್ಲಿ ಹಾಗೂ ತರುಣ ದೊರೆಸ್ವಾಮಿ ಅಯ್ಯಂಗಾರ್ ಪ್ರಧಾನವಾಗಿ ಕಾಣುತ್ತಿದ್ದರು. ಅವರು ವಯಸ್ಸಿನಲ್ಲಿ ನನಗಿಂತ ನಾಲ್ಕು ವರ್ಷ ಚಿಕ್ಕವರು. ಪ್ರಥಮ ಪರಿಚಯದಲ್ಲೇ ನಾವಿಬ್ಬರೂ ಪರಸ್ಪರ ಆಕರ್ಷಿತರಾದೆವು. ಬಹಳ ಬೇಗ ಆತ್ಮೀಯ ಗೆಳೆಯರೂ ಆದೆವು. ಆ ನಮ್ಮ ಗೆಳೆತನ ಅತ್ಯಂತ ಮಧುರವೂ, ಚಿರಸ್ಥಾಯಿಯೂ ಆಗಿದ್ದು ಅದು ಇಂದಿನವರೆಗೂ ಹಾಗೆಯೇ ಮುಂದುವರೆಯಿತು.

ನಾನು ನಮ್ಮ ಗುರುಗಳಲ್ಲಿ ವೀಣಾ ಶಿಕ್ಷಣಕ್ಕೆ ಸೇರುವ ವೇಳೆಗಾಗಲೇ ದೊರೆಸ್ವಾಮಿ ಅಯ್ಯಂಗಾರ್ ಎಳು ವರ್ಷದ ಬಾಲ್ಯದಿಂದಲೇ ವೀಣಾ ಶಿಕ್ಷಣ ಪಡೆದು ಕಛೇರಿ ಮಾಡುವ ಮಟ್ಟ ತಲುಪಿದ್ದರು.

ನಮ್ಮ ಗುರುಗಳಿಗೆ ಅವರನ್ನು ಕಂಡರೆ ಪಂಚಪ್ರಾಣ. ಎಲ್ಲಾ ಶಿಷ್ಯರನ್ನೂ ಅವರು ಅತ್ಯಂತ ಪ್ರೀತಿ ವಿಶ್ವಾಸದಿಂದಲೇ ಕಾಣುತ್ತಿದ್ದರೂ, ದೊರೆಸ್ವಾಮಿ ಅಯ್ಯಂಗಾರರಿಗೆ ಅವರು ಒಂದು ವಿಶಿಷ್ಟ ಸ್ಥಾನ ಕೊಟ್ಟಿದ್ದರು. ಇವರ ಪ್ರತಿಭೆಯನ್ನು ಗುರುತಿಸಿ ಇವರನ್ನು ಬಹಳವಾಗಿ ಕೊಂಡಾಡುತ್ತಿದ್ದರು. ಹಾಗೆಯೇ ನನ್ನನ್ನೂ ನಮ್ಮ ಗುರುಗಳು ತುಂಬಾ ಮೆಚ್ಚಿಕೊಂಡಿದ್ದರು. ಇಬ್ಬರು ದೊರೆಸ್ವಾಮಿಗಳೂ ನನ್ನ ಎರಡು ಕಣ್ಣುಗಳು ಎಂದು ಎಲ್ಲರೊಡನೆ ಅವರು ಹೇಳುತ್ತಿದ್ದುದುಂಟು. ಹೀಗೆ ನಾವಿಬ್ಬರೂ ಗುರುಗಳ ಪ್ರೀತಿ-ವಾತ್ಸಲ್ಯಗಳನ್ನು ಗಳಿಸಿ ಅತ್ಯಂತ ಆತ್ಮೀಯರಾದೆವು.

ನಮ್ಮ ಗುರುಗಳು ಆಗ ಭಾರತಾದ್ಯಂತ ಅತ್ಯಂತ ಬೇಡಿಕೆಯುಳ್ಳ ವಿದ್ವಾಂಸರಾಗಿದ್ದರು. ಅವರಿಗೆ ಅನೇಕ ಕಡೆಗಳಿಂದ ಕಛೇರಿಗಳಿಗೆ ಆಹ್ವಾನಗಳು ಬರುತ್ತಿದ್ದುವು. ಮಹಾರಾಜರಿಗೆ ಅವರನ್ನು ಕಂಡರೆ ವಿಶೇಷ ಅಭಿಮಾನ, ಗೌರವ. ದೊರೆಸ್ವಾಮಿ ಅಯ್ಯಂಗಾರ್ ಆ ವಯಸ್ಸಿಗಾಗಲೇ ಮಹಾರಾಜರ ಕೃಪೆಗೆ ಪಾತ್ರರಾಗಿ ಆಸ್ಥಾನ ವಿದ್ವಾಂಸರಾಗಿದ್ದರು. ನಮ್ಮ ಗುರುಗಳು ತಮ್ಮ ಕಛೇರಿಗಳಿಗೆ ದೊರೆಸ್ವಾಮಿ ಅಯ್ಯಂಗಾರರನ್ನು ಸಹ ವಾದನಕ್ಕೆ ಇಟ್ಟುಕೊಳ್ಳುತ್ತಿದ್ದರು. ಗುರುಗಳಿಗೆ ವಯೋಧರ್ಮದ ಕಾರಣ ಹೆಚ್ಚಾಗಿ ನುಡಿಸಿದರೆ ಆಯಾಸವಾಗುತ್ತಿದ್ದುದರಿಂದ ಶಿಷ್ಯನಿಗೇ ಹೆಚ್ಚಾಗಿ ನುಡಿಸಲು ಅವಕಾಶ ಕೊಡುತ್ತಿದ್ದರು. ಆಗಿನ ನವೋತ್ಸಾಹದ ತರುಣ ದೊರೆಸ್ವಾಮಿ ಅಯ್ಯಂಗಾರ್ ಅದ್ಭುತವಾಗಿ ವೀಣೆ ನುಡಿಸಿ ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಿದ್ದರು. ಇಂಥ ಕೆಲವು ಕಛೇರಿಗಳನ್ನು ನಾನೂ ಕೇಳಿ ಆನಂದಿಸಿದ್ದೇನೆ.

ದೊರೆಸ್ವಾಮಿ ಅಯ್ಯಂಗಾರ್‌ರೂ ಗುರುಗಳಲ್ಲಿ ವಿಶೇಷ ಭಕ್ತಿ, ಗೌರವಗಳನ್ನು ಹೊಂದಿ ತಮ್ಮ ವಿನಯಶೀಲತೆಯಿಂದ ವಿಧೇಯರಾಗಿ ಗುರುಗಳ ಅನುಗ್ರಹಕ್ಕೆ ಪಾತ್ರರಾಗಿದ್ದರು.

ನಮ್ಮ ಗುರುಗಳು ತಮ್ಮ ಕಡೆಯ ದಿನಗಳಲ್ಲಿ ಸಾಂಸಾರಿಕ ಕ್ಲೇಶಗಳಿಂದ ಬಹಳವಾಗಿ ನೊಂದಿದ್ದರು. ಅವರ ಮನಸ್ಸಿಗೆ ನೆಮ್ಮದಿ ತರುತ್ತಿದ್ದುದು ದೊರೆಸ್ವಾಮಿ ಅಯ್ಯಂಗಾರ್‌ರ ವೀಣಾ ವಾದನವೊಂದೇ. ಗುರುಗಳು ಪ್ರತಿ ದಿನ ೧೧ ಗಂಟೆಗೆಲ್ಲಾ ಊಟ ಮುಗಿಸಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಆ ಸಮಯಕ್ಕೆ ದೊರೆಸ್ವಾಮಿ ಅಯ್ಯಂಗಾರ್ ಅಲ್ಲಿಗೆ ಬರುತ್ತಿದ್ದರು. ನಾನೂ ಆ ವೇಳೆಗೆ ಅಲ್ಲಿಯೇ ಇರುತ್ತಿದ್ದೆ. ಗುರುಗಳ ಅಪೇಕ್ಷೆಯಂತೆ ದೊರೆಸ್ವಾಮಿ ಅಯ್ಯಂಗಾರ್ ವೀಣೆಯನ್ನು ನುಡಿಸುತ್ತಿದ್ದರು. ಗುರುಗಳಿಗೆ ಪ್ರಿಯವಾದ ತೋಡಿ, ಭೈರವಿ, ಕಲ್ಯಾಣಿ, ಶಂಕರಾಭರಣ, ಖಮಾಚ್, ಬೇಹಾಗ್, ಕಾಪಿ, ಜುಂಜೂಟಿ ಮುಂತಾದ ರಾಗಗಳನ್ನು ನುಡಿಸುತ್ತಿದ್ದರು. ಶೇಷಣ್ಣನವರ ವೀಣಾವಾದನವನ್ನು ಅನೇಕ ಬಾರಿ ಕೇಳಿ ಆನಂದಿಸಿದ್ದ ನಮ್ಮ ಗುರುಗಳು ಅವರ ವಾದನ ತಂತ್ರಗಳನ್ನು ದೊರೆಸ್ವಾಮಿ ಅಯ್ಯಂಗಾರ್ ಅವರಿಗೆ ವಿವರಿಸಿ ಹೇಳಿಕೊಡುತ್ತಿದ್ದರು. ಅದನ್ನೆಲ್ಲಾ ಅವರು ಚೆನ್ನಾಗಿ ಸಾಧನೆ ಮಾಡಿ ಕರಗತ ಮಾಡಿ

ಕೊಂಡು ನುಡಿಸಿ ಗುರುಗಳನ್ನು ಸಂತೋಷಪಡಿಸುತ್ತಿದ್ದರು. ಗುರುಗಳು ಆನಂದ ಪರವಶರಾಗಿ ಶಿಷ್ಯನನ್ನು ಬಾಯಿತುಂಬಾ ಹೊಗಳಿ ಹರಸುತ್ತಿದ್ದರು.

೧೯೫೧ರಲ್ಲಿ ನಮ್ಮ ಗುರುಗಳು ನಿಧನರಾದಾಗ ನಾವೆಲ್ಲರೂ ಕಂಗಾಲಾದೆವು. ಈ ಆಘಾತದಿಂದ ಚೇತರಿಸಿಕೊಳ್ಳಲು ನಮಗೆ ಬಹಳ ಕಾಲಬೇಕಾಯಿತು. ದೊರೆಸ್ವಾಮಿ ಅಯ್ಯಂಗಾರ್ ಕಾಲೇಜು ವ್ಯಾಸಂಗ ಮುಗಿಸಿ ಎಲ್ಲೆಡೆ ಕಛೇರಿಗಳನ್ನು ಮಾಡುತ್ತಾ ಕೀರ್ತಿ ಶಿಖರವನ್ನೇರತೊಡಗಿದರು. ಬೆಂಗಳೂರು ಆಕಾಶವಾಣಿಯ ಸಂಗೀತ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡ ಮೇಲೆ ಅವರು ಬೆಂಗಳೂರಿನಲ್ಲೇ ನೆಲಸಿದರು. ಆಗಿನಿಂದ ನನ್ನ ಅವರ ಭೇಟಿ ಸ್ವಲ್ಪ ವಿರಳವಾಗತೊಡಗಿತು. ಆದರೂ ನಾವು ಭೇಟಿಯಾದಾಗಲೆಲ್ಲ ಅದೇ ಸ್ನೇಹ, ಪ್ರೀತಿ, ವಿಶ್ವಾಸಗಳಿಂದ ಗಂಟೆಗಟ್ಟಲೆ ಮಾತನಾಡುತ್ತಿದ್ದೆವು. ನಾನು ಬೆಂಗಳೂರು ಆಕಾಶವಾಣಿ ಕಾರ್ಯಕ್ರಮಗಳಿಗೆ ಹೋಗುತ್ತಿದ್ದಾಗ ಹಾಗೂ ಅವರು ನಮ್ಮ ಲಲಿತ ಕಲಾ ಕಾಲೇಜಿಗೆ ಸಲಹೆಗಾರರಾಗಿ, ಪರೀಕ್ಷಕರಾಗಿ ಬಂದಾಗ ನಾವಿಬ್ಬರೂ ಬಲು ಸಂತೋಷದಿಂದ ಕಾಲ ಕಳೆಯುತ್ತಿದ್ದೆವು. ಇಷ್ಟು ಹೊತ್ತಿಗಾಗಲೇ ಅಪಾರ ಖ್ಯಾತಿ ಗಳಿಸಿದ್ದ ಅವರಿಗೆ ಪ್ರಶಸ್ತಿಗಳು ಮೇಲಿಂದ ಮೇಲೆ ಬರತೊಡಗಿದವು. ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್, ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಬೆಂಗಳೂರು ಗಾಯನ ಸಮಾಜದ ಸಂಗೀತ ಕಲಾರತ್ನ ಬಿರುದು, ಮದರಾಸಿನ ಮ್ಯೂಸಿಕ್ ಅಕಾಡೆಮಿಯ ಸಂಗೀತ ಕಲಾನಿಧಿ ಪ್ರಶಸ್ತಿಗಳನ್ನು ಗಳಿಸಿಕೊಂಡರು. ಮೂರು–ನಾಲ್ಕು ಬಾರಿ ವಿದೇಶ ಪ್ರವಾಸಗಳನ್ನು ಮಾಡಿ ಮೈಸೂರು ವೀಣಾ ಶೈಲಿಯ ಕೀರ್ತಿಯನ್ನು ಜಗತ್ತಿನಾದ್ಯಂತ ಹರಡಿ ಜನಪ್ರಿಯಗೊಳಿಸಿದರು. ಸಾವಿರಾರು ಕಛೇರಿಗಳನ್ನು ಮಾಡಿ ಅಸಂಖ್ಯ ಅಭಿಮಾನಿಗಳ ಪ್ರಶಂಸೆ, ಪ್ರೀತಿ-ಗೌರವಗಳಿಗೆ ಪಾತ್ರರಾದರು.

ದೊರೆಸ್ವಾಮಿ ಅಯ್ಯಂಗಾರ್ ಅವರು ವಿದ್ವತ್ತಿನಲ್ಲಿ ಎಷ್ಟು ದೊಡ್ಡವರಾದರೋ, ಒಬ್ಬ ವ್ಯಕ್ತಿಯಾಗಿಯೂ ಅಷ್ಟೇ ದೊಡ್ಡವರೆನಿಸಿಕೊಂಡರು. ಅವರ ಸರಳತೆ, ಸೌಜನ್ಯ, ನಿರಾಡಂಬರ, ಹಿತಮಿತವಾದ ಮಾತು, ವಿನೋದಪ್ರಿಯತೆ ಮುಂತಾದ ಗುಣಗಳು ಅವರ ವಿದ್ವತ್ತಿಗೆ ಮೆರುಗು ಕೊಟ್ಟಂತಿದ್ದುವು. ಅವರು ಬದುಕಿದ್ದ ೭೭ ವರ್ಷಗಳ ಜೀವಿತ ಕಾಲದಲ್ಲಿ ೭೦ ವರ್ಷಗಳನ್ನು ಅವರು ವೀಣಾವಾದನದಲ್ಲಿಯೇ ಕಳೆದರು. ವೀಣೆಯೇ ಅವರ ಪ್ರಾಣ. ನಾದೋಪಾಸನೆಯೇ ಅವರ ತಪಸ್ಸು. ಏನನ್ನೂ ಬಯಸದ ಸರಳ ಜೀವಿಗೆ ದೇವರು ಸಕಲವನ್ನೂ ಕೊಟ್ಟ. ಸುಖವನ್ನೂ ಕಂಡರು, ದುಃಖವನ್ನೂ ಕಂಡರು. ಆದರೆ ಎರಡನ್ನೂ ಸಮಭಾವದಿಂದ ಕಂಡು ನಿರ್ಲಿಪ್ತರಾಗಿಯೇ ಉಳಿದರು. ಸುಖದಲ್ಲಿ ಹಿಗ್ಗಲಿಲ್ಲ, ದುಃಖದಲ್ಲಿ ಕುಗ್ಗಲಿಲ್ಲ. ಅವರು ಒಬ್ಬ ಕಲಾವಿದರಾಗಿ, ಒಬ್ಬ ವ್ಯಕ್ತಿಯಾಗಿ ಜೀವನವನ್ನು ನಡೆಸಿದ ರೀತಿ ಎಲ್ಲರಿಗೂ ಆದರ್ಶಪ್ರಾಯವಾದುದು.

ವೀಣಾ ಗಾರುಡಿಗನೆಂದೇ ಪ್ರಸಿದ್ಧರಾಗಿದ್ದ ದೊರೆಸ್ವಾಮಿ ಅಯ್ಯಂಗಾರ್ ಇನ್ನಿಲ್ಲ, ನಿಜ. ಆದರೆ ಅವರು ಸಂಗೀತ ಪ್ರಪಂಚದಲ್ಲಿ ಧ್ರುವತಾರೆಯಾಗಿ ಅಮರ

ರಾಗಿದ್ದಾರೆ. ಮೈಸೂರು ವೀಣಾ ಪರಂಪರೆಗೆ ಉಜ್ವಲ ಕೀರ್ತಿಯನ್ನು ತಂದುಕೊಟ್ಟ ಮಹಾನ್ ವೈಣಿಕ ದೊರೆಸ್ವಾಮಿ ಅಯ್ಯಂಗಾರ್ ತಮ್ಮ ಜೀವಿತ ಕಾಲದಲ್ಲೇ ದಂತಕತೆಯಾದರು. ಅವರ ವೀಣಾವಾದನದ ಇಂಚರ ಜನಮನದಿಂದ ಎಂದಿಗೂ ಮಾಸುವಂತಹುದಲ್ಲ. ವಿದ್ವತ್ತು, ವಿನಯ, ನಿರಹಂಕಾರಗಳ ಮೂರ್ತಿಯಾಗಿದ್ದ ದೊರೆಸ್ವಾಮಿ ಅಯ್ಯಂಗಾರ್‌ರಂತಹ ಕಲಾವಿದರು ಬಹಳ ಅಪರೂಪ. ಅಂತಹವರೊಬ್ಬರು ನಮ್ಮ ಮಧ್ಯೆ ಇದ್ದರೆಂಬುದೇ ನಮಗೆಲ್ಲಾ ಹೆಮ್ಮೆಯ ವಿಷಯ.



ಕನ್ನಡದ ನಾಡ ಜನವೆಲ್ಲವೂ ನನ್ನವರು
ಬಡಗ ತೆಂಕಣ ಮೂಡ ಕೊಡಗ ತೌಳವ ತೋಡ
ಇನ್ನೆಲ್ಲ ಕನ್ನಡಿಗರೆನ್ನವರು ಎನ್ನುಸಿರು,
ನಾವೆಲ್ಲ ಒಂದು ಮನೆಯವರಣ್ಣ ತಮ್ಮದಿರು
ನಮ್ಮೆಲ್ಲರನು ಪಡೆದುದೊಂದೆ ನಾಡಿನ ಬಸಿರು
ಎಂದು ನಾವರಿದೆವೇ ನಮಗೆ ಇನ್ನಾರೆದುರು !
ಹಾ ನನ್ನ ಸೋದರರೆ ಬನ್ನಿ ಒಂದಾಗಿ
ಜಯವಧುವ ನಿಮ್ಮ ತೋಳಿನೊಳಿಟ್ಟು ತೂಗಿ

—ಶ್ರೀನಿವಾಸ (ಮಾಸ್ತಿ ವೆಂಕಟೇಶ ಅಯ್ಯಂಗಾರ್)

ಹರಿವುದೆನ್ನ ಮನವು ಹಿಂದೆ ಕಳೆದ ದಿನದ ಹಾದಿ ಹಿಡಿದು

ವೈಣಿಕವಿದ್ವಾನ್ ಎಂ. ಜೆ. ಶ್ರೀನಿವಾಸ ಅಯ್ಯಂಗಾರ್
೪ ಎ, ೪ನೆಯ ಮುಖ್ಯ ರಸ್ತೆ, ಜಯನಗರ
ಮೈಸೂರು-೫೭೦ ೦೧೪

ವೈಣಿಕ ಶಿಖಾಮಣಿ ವೀಣೆ ಶೇಷಣ್ಣನವರ ಪರಂಪರೆಗೆ ಸೇರಿದ ನಮ್ಮ ಪೂಜ್ಯ ಗುರುಗಳಾದ ವೈಣಿಕ ಪ್ರವೀಣ, ಆಸ್ಥಾನ ವಿದ್ವಾನ್ ವೆಂಕಟಗಿರಿಯಪ್ಪನವರ ಶಿಷ್ಯರಲ್ಲಿ ಶ್ರೀ ದೊರೆಸ್ವಾಮಿ ಅಯ್ಯಂಗಾರ್ಯರು ಪ್ರಮುಖರು.

ನಮ್ಮ ತಂದೆ ಮತ್ತು ದೊರೆಸ್ವಾಮಿ ಅಯ್ಯಂಗಾರ್ಯರ ತಂದೆ ಇಬ್ಬರೂ ವೈಣಿಕರೇ. ಇವರು ನಮ್ಮ ಪೂಜ್ಯಗುರುಗಳ ತಂದೆಯವರಾದ ಚಿಕ್ಕಸುಬ್ಬರಾಯರಲ್ಲಿ ಗುರುಕುಲವಾಸಮಾಡಿ, ವೆಂಕಟಗಿರಿಯಪ್ಪನವರ ಆಪ್ತಸ್ನೇಹಿತರಾಗಿದ್ದರು. ಇವರಿಬ್ಬರನ್ನೂ ವೆಂಕಟಗಿರಿಯಪ್ಪನವರು ವೈಣಿಕ ಶಿಖಾಮಣಿ ಶೇಷಣ್ಣನವರ ಮನೆಗೆ ಜೊತೆಯಲ್ಲಿ ಕರೆದೊಯ್ಯುತ್ತಿದ್ದರು. ಇಬ್ಬರೂ ವೀಣೆಶೇಷಣ್ಣನವರ ಶೈಲಿಯ ಕಡೆಗೇ ಹೆಚ್ಚು ಗಮನ ಕೊಡುತ್ತಿದ್ದು, ಆ ಶೈಲಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದರು. ಇಬ್ಬರಿಗೂ ತಮ್ಮ ತಮ್ಮ ಪುತ್ರರಿಗೆ ವೀಣೆ ಕಲಿಸಬೇಕೆಂಬ ಅಭಿಲಾಷೆ ಇತ್ತು. ಅದರಂತೆ ಬಾಲ್ಯಪಾಠಗಳನ್ನು ತಮ್ಮ ತಮ್ಮ ಮಕ್ಕಳಿಗೆ ಮನೆಯಲ್ಲಿ ಕಲಿಸಿ, ಮುಂದೆ ಪ್ರೌಢಪಾಠಕ್ಕೆ ನಮ್ಮನ್ನು ವೆಂಕಟಗಿರಿಯಪ್ಪನವರಲ್ಲಿಗೆ ಕಳುಹಿಸಿದರು.

ದೊರೆಸ್ವಾಮಿ ಅಯ್ಯಂಗಾರ್ಯರು ನನಗಿಂತ ನಾಲ್ಕು ವರ್ಷಗಳು ಹಿರಿಯರು. ನಾನು ಮೈಸೂರಿಗೆ ಬಂದು ವೆಂಕಟಗಿರಿಯಪ್ಪನವರ ಬಳಿ ಗುರುಕುಲ ಶಿಕ್ಷಣಕ್ಕೆ ಸೇರುವುದಕ್ಕೆ ಮುಂಚೆ ದೊರೆಸ್ವಾಮಿ ಅಯ್ಯಂಗಾರ್ಯರು ಮೊದಲನೆಯ ಶಿಷ್ಯರಾಗಿದ್ದರು. ಹೀಗೆ ನಾವು ಸಹಪಾಠಿಗಳಾದೆವು. ನಾನು ಬೆಳಗಿನ ಹೊತ್ತು ಗುರುಗಳ ಮನೆಗೆ ಹೋಗುತ್ತಿದ್ದೆ. ದೊರೆಸ್ವಾಮಿ ಅಯ್ಯಂಗಾರ್ಯರು ಸಂಜೆ ಅಲ್ಲಿಗೆ ಬರುತ್ತಿದ್ದರು. ಅವರು ಹೈಸ್ಕೂಲಿನಲ್ಲಿ ಓದುತ್ತಿದ್ದುದರಿಂದ ಬೇಗ್ಗ ಬರಲು ಅವರಿಗೆ ಬಿಡುವಾಗುತ್ತಿರಲಿಲ್ಲ. ಸಾಯಂಕಾಲ ೫ ಗಂಟೆಯ ಮೇಲೆ ಗುರುಗಳ ಮನೆಯಲ್ಲಿ ಅವರಿಗೆ ಪಾಠಗಳು ನಡೆಯುತ್ತಿದ್ದವು. ಸಾಮಾನ್ಯವಾಗಿ ರಾತ್ರಿ ೯ ಗಂಟೆಯವರೆಗೂ ಅವರು ಅಲ್ಲಿಯೇ ಇರುತ್ತಿದ್ದರು. ಅನಂತರ ಗುರುಗಳ ಅಪ್ಪಣೆಪಡೆದು ಮನೆಗೆ ತೆರಳುತ್ತಿದ್ದರು. ಮನೆಯಲ್ಲಿಯೂ ಅವರ ತಂದೆಯವರು ವೀಣಾಶೇಷಣ್ಣನವರ ಶೈಲಿಗಳನ್ನು ನಿರೂಪಿಸುತ್ತಿದ್ದರು. ಸತತವಾದ

ಅಭ್ಯಾಸ, ಪರಿಶ್ರಮ, ಶ್ರದ್ಧೆ ಇವುಗಳಿಲ್ಲದರಿಂದ ಅವರು ಮುಂದೆ ಈ ಕ್ಷೇತ್ರದಲ್ಲಿ ಪ್ರಖ್ಯಾತರಾಗುವುದು ಸಾಧ್ಯವಾಯಿತು.

ಅವರು ವೀಣೆಯನ್ನು ಸಾಮಾನ್ಯವಾಗಿ ಗಾಯಕೀ ಶೈಲಿಯಲ್ಲಿಯೂ, ವಾದ್ಯ ಶೈಲಿಯಲ್ಲಿಯೂ ನುಡಿಸುತ್ತಿದ್ದರು. ಆದರೂ ಹೆಚ್ಚುಪಕ್ಷ ಶ್ರೀ ಶೇಷಣ್ಣನವರ ಸಾಂಪ್ರದಾಯಿಕ ಶೈಲಿಯೇ ಅವರ ವಾದನದಲ್ಲಿ ಎದ್ದು ಕಾಣುತ್ತಿತ್ತು.

ಗುರುಗಳಾದ ವೆಂಕಟಗಿರಿಯಪ್ಪನವರಿಗೆ ಇವರ ವಾದನದ ಬಗ್ಗೆ ಹೆಚ್ಚಿನ ಸಂತೋಷ, ಅಭಿಮಾನ, ಆಶೀರ್ವಾದ ಇವೆಲ್ಲವೂ ಇತ್ತು. ಗುರುಗಳ ಮನೆಗೆ ಯಾವ ಹಿರಿಯ ವಿದ್ವಾಂಸರು ಬಂದರೂ ಅವರೆದುರಿಗೆ ದೊರೆಸ್ವಾಮಿ ಅಯ್ಯಂಗಾರ್ಯರ ವೀಣಾ ವಿನಿಕೆ ನಡೆಯುತ್ತಿತ್ತು. ವೆಂಕಟಗಿರಿಯಪ್ಪನವರು ಎಲ್ಲಾ ಶಿಷ್ಯರ ಮೇಲೂ ವಾತ್ಸಲ್ಯವಿಟ್ಟು ತಮ್ಮ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ಶಿಷ್ಯರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದರು. ಸಾಮಾನ್ಯವಾಗಿ ದಕ್ಷಿಣ ದೇಶದ ಕಛೇರಿಗಳಿಗೆ ಅವರು ದೊರೆಸ್ವಾಮಿ ಅಯ್ಯಂಗಾರ್ಯರನ್ನು ಜೊತೆಯಲ್ಲಿಯೇ ನುಡಿಸುವಂತೆ ಹೇಳಿ ಕರೆದೊಯ್ಯುತ್ತಿದ್ದರು. ಅವರಿಗೂ ಗುರುಗಳೆಂದರೆ ಅಪಾರ ಭಕ್ತಿ. ಸಹಪಾಠಿಗಳಾಗಿದ್ದ ಆರ್. ಎನ್. ದೊರೆಸ್ವಾಮಿಯವರಲ್ಲಿಯೂ ನನ್ನಲ್ಲಿಯೂ ಅತಿಶಯ ಅಭಿಮಾನ, ಗುರುಗಳ ಬಗೆಗೆ ಅನೇಕ ವಿಚಾರಗಳನ್ನು ನಮಗೆ ಹೇಳುತ್ತಿದ್ದರು.

ಮೈಸೂರಿನ ಸಾಂಪ್ರದಾಯಿಕ ಶೈಲಿಯನ್ನು ಯಾವಾಗಲೂ ನುಡಿಸುವಂತೆ ಗುರುಗಳು ನಮಗೆಲ್ಲರಿಗೂ ಹೇಳುತ್ತಿದ್ದರು.

ದೊರೆಸ್ವಾಮಿ ಅಯ್ಯಂಗಾರ್ ಅವರಿಗೆ ಪಾಶ್ಚಾತ್ಯ ಸಂಗೀತದಲ್ಲಿಯೂ ಪರಿಶ್ರಮವಿತ್ತು. ಟ್ರಿನಿಟಿ ಕಾಲೇಜ್ ಆಫ್ ಮ್ಯೂಸಿಕ್—ಲಂಡನ್‌ನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನಮ್ಮ ಕರ್ನಾಟಕ ಸಂಗೀತಕ್ಕೆ ಇಂಗ್ಲಿಷ್ ನೊಟೇಶನ್‌ಗಳನ್ನು ಬರೆಯುತ್ತಿದ್ದರು. ಗುರುಗಳಿಗೆ ಇದರಿಂದ ತುಂಬಾ ಸಹಾಯವಾಗುತ್ತಿತ್ತು. ಕರ್ನಾಟಕ ಬ್ಯಾಂಡ್‌ಗೆ, ಇಂಗ್ಲಿಷ್ ಬ್ಯಾಂಡ್‌ಗೆ ಇದರ ಪ್ರತಿಗಳು ಹಂಚಿಕೆಯಾಗುತ್ತಿದ್ದುವು.

ನಾವು ಮೂವರೂ ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರ ಸಮ್ಮುಖದಲ್ಲಿಯೂ, ತದನಂತರ ಶ್ರೀ ಜಯಚಾಮರಾಜೇಂದ್ರ ಒಡೆಯರ ಸಮ್ಮುಖದಲ್ಲಿಯೂ ವೀಣೆಯನ್ನು ಗುರುಗಳ ಜೊತೆ ನುಡಿಸುತ್ತಿದ್ದೆವು. ಅನೇಕ ರಾಮೋತ್ಸವ ಮತ್ತು ಕೃಷ್ಣೋತ್ಸವಗಳಲ್ಲೂ ನಾವು ಒಟ್ಟಾಗಿ ವೀಣೆ ನುಡಿಸಿದ್ದೇವೆ.

ದೊರೆಸ್ವಾಮಿ ಅಯ್ಯಂಗಾರ್ಯರು ಆಕಾಶವಾಣಿಯನ್ನು ಸೇರಿದ ಬಳಿಕ ನಾವುಗಳೆಲ್ಲರೂ ಒಟ್ಟಿಗೆ ಪಂಚವೀಣಾ ಕಾರ್ಯಕ್ರಮದಲ್ಲಿ, ಮೈಸೂರು ಸದಾಶಿವರಾವ್, ವೀಣೆಶೇಷಣ್ಣ ಇವರ ಕೃತಿಗಳನ್ನು ನುಡಿಸಿದ್ದೇವೆ. ಇದಲ್ಲದೆ ಗಾಯಕ ಶಿಖಾಮಣಿ ಶ್ರಿ ಮುತ್ತಯ್ಯ ಭಾಗವತರ ಕೀರ್ತನೆಗಳನ್ನೂ ಮೈಸೂರು ವಾಸುದೇವಾಚಾರ್ಯರ ಕೃತಿಗಳನ್ನೂ ಅವರ ಜೊತೆ ನುಡಿಸಿದ್ದೇವೆ. ಇವೆಲ್ಲವೂ ಆಕಾಶವಾಣಿಯಿಂದ ಪ್ರಸಾರಗೊಂಡಿವೆ. ಆಕಾಶವಾಣಿ ಬೆಂಗಳೂರಿನ ಉದ್ಘಾಟನಾಸಮಾರಂಭದಲ್ಲಿ ನಮ್ಮಗಳ ಪಂಚವೀಣಾ ಕಾರ್ಯಕ್ರಮ ಮೊದಲು ಪ್ರಸಾರವಾಗಿದೆ. ರಷ್ಯಾದಿಂದ ಬಂದಿದ್ದ ಅಲ್ಲಿನ ಅಧ್ಯಕ್ಷರೂ ಮತ್ತು ಪ್ರಧಾನಿಗಳಾದ ಬುಲ್ಗಾನಿನ್ ಮತ್ತು

ಕ್ರಿಶ್ಚೀನ್ ಅವರ ಸಮ್ಮುಖದಲ್ಲೂ ನಮ್ಮ ಪಂಚವೀಣಾ ಕಾರ್ಯಕ್ರಮ ನಡೆದಿದೆ. ಇವುಗಳಲ್ಲದೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀಯುತ ಡ್ಯಾಗ್ ಹ್ಯಾಮರ್‌ಷೀಲ್ಡ್‌ರವರ ಸಮ್ಮುಖದಲ್ಲೂ ನಮ್ಮ ಪಂಚವೀಣಾ ಕಾರ್ಯಕ್ರಮಗಳು ನಡೆದಿವೆ.

ದೊರೆಸ್ವಾಮಿ ಅಯ್ಯಂಗಾರ್ ಅವರು ಬಲು ಸರಳರು, ಗುಣಸಂಪನ್ನರು ಮತ್ತು ನಿಗರ್ವಿಗಳು. ಜನಸಾಮಾನ್ಯರಲ್ಲೂ ಕಲೆತು ಅವರ ವಿಶ್ವಾಸ ಗಳಿಸುತ್ತಿದ್ದರು. ಇವರ ಸದ್ಗುಣಗಳಿಂದ ಇವರು ಮುಂದೆ ಬಂದು ಮೈಸೂರಿನ ಶೇಷಣ್ಣನವರ ಶೈಲಿಯನ್ನು ರಾಷ್ಟ್ರದ್ಯಂತ ಕೊಂಡೊಯ್ದು ಮೈಸೂರಿನ ಕೀರ್ತಿಯನ್ನು ಹೆಚ್ಚಿಸಿದರು. ಈಚೆಗೆ ಪಾಶ್ಚಾತ್ಯದೇಶಗಳಲ್ಲೂ ಪ್ರವಾಸಮಾಡಿ ನಮ್ಮ ಮೈಸೂರಿನ ವೀಣಾಶೈಲಿಯನ್ನು ಅಲ್ಲಿ ಪ್ರದರ್ಶಿಸಿ ವೀಣೆಯ ಕೀರ್ತಿಯನ್ನು ಎತ್ತಿಹಿಡಿದರು. ಮೈಸೂರಿನ ಅದೃಷ್ಟವಂತ ಕಲಾವಿದರಾಗಿದ್ದರು. ಧ್ರುವತಾರೆಯಂತೆ ಬೆಳಗಿ ಕಣ್ಮರೆಯಾದರು, ವೀಣಾಪ್ರಪಂಚಕ್ಕೆ ತುಂಬಾ ನಷ್ಟ. ಇಷ್ಟು ಅನಿರೀಕ್ಷಿತವಾಗಿ ಇವರು ನಿಧನರಾದುದು ನಮ್ಮಗಳಿಗೆ ಅತೀವ ದುಃಖ ತಂದಿದೆ. ಅವರ ಆತ್ಮಕ್ಕೆ ಮೋಕ್ಷ ಪ್ರಾಪ್ತಿ ಆಗಲೆಂದು ಹಾರೈಸುತ್ತೇನೆ.



ಕನ್ನಡ ನಾಡಿಗೆ ಕನ್ನಡವೇ ಗತಿ,
ಅನ್ಯಥಾ ಶರಣಂ ನಾಸ್ತಿ.
ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯುಲ್ಲ, ಕನ್ನಡ.

—ಬಿ.ಎಂ.ಶ್ರೀ

ಕ್ರಿಸ್‌ಮಸ್ ಹಬ್ಬದ ಮುನ್ನಾ ದಿನ

ಎಚ್. ಆರ್. ಚಂದ್ರವದನರಾವ್
೨೮೭೭/೧೦, ೬ನೇ ಕ್ರಾಸ್, ಚಾಮುಂಡಿಪುರಂ
ಮೈಸೂರು-೫೭೦೦೦೪

"ನಾನು ಖಂಡಿತ ಕ್ರಿಸ್‌ಮಸ್‌ನ ಮುನ್ನಾದಿನದ ಭೋಜನಕ್ಕೆ ಎಲ್ಲಿಗೂ ಹೋಗುವುದಿಲ್ಲ ಅಥವಾ ಯಾರನ್ನೂ ಕರೆಯುವುದಿಲ್ಲ" ಎಂದೆ.

ಅದನ್ನು ಕೇಳಿ ನನ್ನ ಸ್ನೇಹಿತರಿಗೆ ನಗು.

"ಏಕೆ ಅಂಥ ನಿರ್ಧಾರ?"

"ಒಂದು ಬಾರಿ ನನಗೆ ಕ್ರಿಸ್‌ಮಸ್ ಮುನ್ನಾದಿನದ ಭೋಜನ ತುಂಬಾ ತೊಂದರೆ ಕೊಟ್ಟಿತು."

"ಏನಾಯಿತು ಹೇಳು" ಎಂದರು ಸ್ನೇಹಿತರು.

"ಸರಿ, ಕೇಳಿ—"

"ಎರಡು ವರ್ಷದ ಹಿಂದೆ ಡಿಸೆಂಬರ್‌ನಲ್ಲಿ ಎಷ್ಟು ಚಳಿ ಇತ್ತೆಂದು ನಿಮಗೆ ಜ್ಞಾಪಕವಿರಬೇಕು. ಬೆಚ್ಚನೆಯ ಬಟ್ಟೆ ಇಲ್ಲದ ಅನೇಕ ಬಡವರು ಆ ಚಳಿ ತಡೆಯದೆ ಸತ್ತುಹೋದರು. ಸೀನ್ ನದಿ ಮಂಜಿನಿಂದ ಮುಚ್ಚಿತ್ತು. ರಸ್ತೆಯ ಮೇಲೆ ಬಿದ್ದಿದ್ದ ಮಂಜಿನ ಚಳಿ ಪಾದರಕ್ಷೆಯ ಮೂಲಕ ಒಳಗೆ ಹೋಗಿ ಪಾದಗಳು ಜಡವಾಗುತ್ತಿದ್ದವು. ನನಗೆ ಬರೆಯುವ ಕೆಲಸವಿತ್ತು. ಆದುದರಿಂದ ಹಬ್ಬಕ್ಕೆ ಬಂದ ಆಹ್ವಾನವನ್ನೆಲ್ಲ ತಿರಸ್ಕರಿಸಿದ್ದೆ. ಇಡೀ ರಾತ್ರಿ ಬರೆಯಬೇಕೆಂಬ ಅಪೇಕ್ಷೆ. ೧೦ ಗಂಟೆ ಇರಬಹುದು. ಪ್ಯಾರಿಸ್ ನಗರವೆಲ್ಲಾ ಸಂತೋಷ ಸಂಭ್ರಮಗಳಿಂದ ಕುಣಿದು ಕುಪ್ಪಳಿಸುತ್ತಿರುವಾಗ ನಾನೊಬ್ಬನೇ ನಾಲ್ಕು ಗೋಡೆಯ ಮಧ್ಯೆ ಉಳಿಯುವುದು ಕಷ್ಟವೆನಿಸತೊಡಗಿತು. ಪಕ್ಕದ ಮನೆಯವರು ಹಬ್ಬದ ಊಟಕ್ಕೆ ತಯಾರಿನಡೆಸುತ್ತಿದ್ದರು. ಬರವಣಿಗೆಯಲ್ಲಿ ಪೂರ್ಣ ಮನಸ್ಸು ಕೊಡಲಾಗದೆ ಬರೆಯುವುದನ್ನು ನಿಲ್ಲಿಸಿ ಕೊಠಡಿಯಲ್ಲಿ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದೆ. ಹೊರಗಿನ ಹರ್ಷದ ವಾತಾವರಣ ನನ್ನ ಮೇಲೆ ಮಾಂತ್ರಿಕ ಪ್ರಭಾವ ಬೀರಿತು. ಮನೆಯ ಹೆಣ್ಣಾಳನ್ನು ಕರೆದು ಹೇಳಿದೆ—

"ಏಂಜಿಲಾ, ಹೊರಗಿನಿಂದ ಇಬ್ಬರಿಗೆ ರಾತ್ರಿ ಊಟ ತೆಗೆದುಕೊಂಡು ಬಾ. ಆಯಿಸ್ಟರ್ಸ್, ಪಾಟ್ರಿಡ್ಜ್, ಕ್ರೇಫಿಷ್, ಹ್ಯಾಂ, ಕೇಕ್ಸ್ ಮತ್ತು ಎರಡು ಬಾಟಲು ಷಾಂಪೇನ್ ಎಲ್ಲವನ್ನೂ ಮೇಜಿನ ಮೇಲಿಟ್ಟು ನೀನು ಹೋಗು."

ಅವಳಿಗೆ ಸ್ವಲ್ಪ ಆಶ್ಚರ್ಯವಾಯಿತು. ನಾನು ಹೇಳಿದ್ದನ್ನು ಮಾಡಿ ಅವಳು ಮನೆ ಬಿಟ್ಟಳು. ನಾನು ದಪ್ಪನೆಯ ಓವರ್ ಕೋಟ್ ಧರಿಸಿ ಹೊರಕ್ಕೆ ಹೊರಟೆ. ಆದರೆ

ಮೂಲ: ಮೊಪಾಸಾನ 'ಕ್ರಿಸ್‌ಮಸ್ ಈವ್' ಕಥೆ.

ಒಂದು ಪ್ರಶ್ನೆ ಹಾಗೆಯೇ ಉಳಿಯಿತು. 'ರಾತ್ರಿ ಊಟಕ್ಕೆ ಯಾರನ್ನು ಆಹ್ವಾನಿಸಲಿ?' ನನ್ನ ಗೆಳತಿಯರು ಆಗಲೆ ಬೇರೆ ಕಡೆಗೆ ತಮಗೆ ಬಂದ ಆಮಂತ್ರಣ ಒಪ್ಪಿ ಹೊರಟು ಹೋಗಿದ್ದರು.

"ಪ್ಯಾರಿಸ್‌ನ ಬಡವರಲ್ಲಿ ಕೆಲವರು ಸುಂದರಿಯರಾದ ಹುಡುಗಿಯರೂ ಇದ್ದಾರೆ. ಅವರಿಗೆ ಒಳ್ಳೆಯ ಕಡೆ ಹೋಗಿ ಊಟ ಮಾಡುವ ಹಂಬಲವೂ ಇರುತ್ತದೆ. 'ಈ ಸಂಜೆ ನಾನು ಅಂಥ ಒಬ್ಬ ಹುಡುಗಿಯನ್ನು ಏಕೆ ಮನೆಗೆ ಕರೆದುಕೊಂಡು ಬರಬಾರದು' ಎನಿಸಿತು.

ರಸ್ತೆಯಲ್ಲಿ ನನಗೆ ಅನೇಕ ಬಡಹುಡುಗಿಯರು ಕಂಡರು. ನನ್ನ ಆಹ್ವಾನವನ್ನು ಸ್ವೀಕರಿಸುವುದಕ್ಕೆ ಅವರು ತಯಾರಾಗಿದ್ದರು. ಆದರೆ ಅವರೆಲ್ಲಾ ಸೌಂದರ್ಯವಿಲ್ಲದ, ಕೆಳು ದೇಹದ ಹುಡುಗಿಯರು. ಅವರನ್ನು ಕಣ್ಣಿಟ್ಟು ನೋಡಿದ ಕೂಡಲೆ ಶರೀರ ಶೀತಲಗೊಳ್ಳುತ್ತದೆ. ನಿಮಗೆ ಗೊತ್ತಿರಬೇಕು— 'ನನಗೆ ಮೈಕೈ ತುಂಬಿಕೊಂಡಿರುವ ಹೆಂಗಸರು ಇಷ್ಟ' ಎಂದು. ದೇಹದಲ್ಲಿ ಹೆಚ್ಚು ಮಾಂಸವಿದ್ದಷ್ಟೂ ನನಗೆ ಅಂತಹವರ ಮೇಲೆ ಹೆಚ್ಚು ಪ್ರೇಮ.

ಥಿಯೇಟರ್ ಡಿ ವೆರೈಟ ಮುಂದೆ ಹೋಗುತ್ತಿರುವಾಗ ಆಕೆಯನ್ನು ಕಂಡು ಪುಳಕಿತನಾದೆ.

'ಎಂಥ ಚಲುವೆ!' ಎಂದುಕೊಂಡೆ.

ನಾನು ಅವಳ ಮುಖ ನೋಡಬೇಕಾಗಿತ್ತು. ಹೆಂಗಸರ ಮುಖ ಊಟದ ನಂತರ ತೆಗೆದುಕೊಳ್ಳುವ ಹಣ್ಣಿನಂತೆ.

ನಾನು ಆತುರಾತುರ ಹೋಗಿ ಅವಳನ್ನು ನೋಡಿದೆ. ಅವಳು ದೀಪದ ಅಡಿಯಲ್ಲಿ ನಿಂತಿದ್ದಳು. ಚೆಲುವೆ, ಚಿಕ್ಕವಳು, ದೊಡ್ಡ ಕಪ್ಪು ಕಣ್ಣುಗಳು, ಕೆಂಗೂದಲು. ನನ್ನ ಆಹ್ವಾನವನ್ನು ಅವಳು ಮುಜುಗರವಿಲ್ಲದೆ ಒಪ್ಪಿದಳು. ಹದಿನೈದು ನಿಮಿಷಗಳೊಳಗಾಗಿ ನಾವು ಮನೆಯಲ್ಲಿದ್ದೆವು.

'ಮನೆ ಎಷ್ಟು ಅನುಕೂಲವಾಗಿದೆ' ಎಂದಳು. ಅಲ್ಲಿ ಇಲ್ಲಿ ನೋಡಿ ಮೇಜಿನ ಮೇಲಿಟ್ಟಿದ್ದ ಊಟ, ಅನಂತರ ಬೆಚ್ಚಗೆ ಮಲಗುವ ಮಂಚ ನೋಡಿ ತೃಪ್ತಿ ಸೂಚಿಸಿದಳು. ಅವಳ ಸೌಂದರ್ಯಕ್ಕೆ ನಾನು ಮಾರುಹೋಗಿದ್ದೆ. ಮುಖ್ಯವಾಗಿ ಅವಳದು ಮೈಕೈ ತುಂಬಿಕೊಂಡ ಶರೀರ.

ಅವಳು ತನ್ನ ಮೇಲಂಗಿ ಮತ್ತು ಹ್ಯಾಟನ್ನು ತೆಗೆದು ಊಟಕ್ಕೆ ಕುಳಿತಳು. ಆದರೆ ಅವಳಲ್ಲಿ ಉತ್ಸಾಹ ಕಾಣಿಸುತ್ತಿರಲಿಲ್ಲ. ತುಟಿ ಆಗಾಗ್ಗೆ ಕಚ್ಚಿಕೊಂಡು ನಡುಗುತ್ತಿದ್ದಳು.

"ಏನಾದರು ತೊಂದರೆ ಆಗುತ್ತಿದೆಯೇ?" ಎಂದು ನಾನು ಕೇಳಿದೆ.

"ತೊಂದರೆ ವಿಷಯ ಜ್ಞಾಪಿಸಬೇಡಿ."

"ಅವಳು ಷಾಂಪೇನ್ ಅನ್ನು ಬಗ್ಗಿಸಿಕೊಂಡು ಒಂದೇ ಗುಟುಕಿಗೆ ಕುಡಿದಳು. ಪುನಃ ಇನ್ನೊಂದು ಗ್ಲಾಸ್ ಖಾಲಿ ಮಾಡಿದಳು. ಅವಳ ಕೆನ್ನೆಗಳು ಕೆಂಪೇರಿದವು. ಅವಳು ನಗುವುದಕ್ಕೆ ಶುರು ಮಾಡಿದಳು.

ಅವಳನ್ನು ನಾನಾಗಲೇ ಮೆಚ್ಚಿದ್ದೆ. ಅವಳು ರಸ್ತೆಯಲ್ಲಿ ಓಡಾಡುವ ಸಾಧಾರಣ ಸ್ತ್ರೀಯಂತೆ ಕಾಣಲಿಲ್ಲ. ದಡ್ಡಿಯೂ ಅಲ್ಲ ಎನ್ನಿಸಿತು. ಅವಳಿಗೆ ಒಂದು ಮುತ್ತು ಕೊಟ್ಟೆ. ಅವಳ ಖಾಸಗಿ ಜೀವನದ ಬಗ್ಗೆ ಕೇಳಿದೆ. ಅದಕ್ಕವಳು

"ನಿನಗೆ ನನ್ನ ವಿಷಯ ಕಟ್ಟಿಕೊಂಡು ಏನು?" ಎಂದಳು.

ನಾವು ಮಲಗುವ ಹೊತ್ತಾಯಿತು. ನಾನು ಊಟದ ಮೇಜನ್ನು ಶುಚಿಗೊಳಿಸುತ್ತಿರುವಾಗ ಅವಳು ತನ್ನ ಬಟ್ಟೆ ತೆಗೆದು ಮಲಗುವ ಕೋಣೆಗೆ ಹೋದಳು.

ಪಕ್ಕದ ಮನೆಯವರ ಗಲಾಟೆ, ಹಾಡು, ನಗು. 'ನಾನು ಹೊರಗೆ ಹೋಗಿ ಅವಳನ್ನು ಕರೆದುಕೊಂಡು ಬಂದಿದ್ದು ಸರಿಹೋಯಿತು. ಈ ಗಲಾಟೆಯಲ್ಲಿ ಬರೆಯಲು ಸಾಧ್ಯವೇ?' ಎಂದುಕೊಂಡೆ.

ಆಗ ನನಗೆ ನರಳುವ ಶಬ್ದ ಕೇಳಿಸಿತು. ನಾನು ಕೇಳಿದೆ—'ಏನು ತೊಂದರೆ, ಚಿನ್ನಾ?'

ಅವಳು ಉತ್ತರ ಹೇಳಲಿಲ್ಲ. ಆದರೆ ನರಳುತ್ತಲೇ ಇದ್ದಳು.

"ಏಕೆ? ಹುಷಾರಿಲ್ಲವೇ?"

ಅವಳು ಎದೆ ಬಿರಿಯುವಂತೆ ಕಿರುಚಿದಳು. ನಾನು ಅವಳು ಮಲಗಿದ್ದ ಮಂಚದ ಬಳಿ ಹೋದೆ. ಅವಳನ್ನು ನೋಡಿದೆ. ಅವಳ ಮುಖದಲ್ಲಿ ನೋವು ಕಾಣಿಸುತ್ತಿತ್ತು. ಕೈಯನ್ನು ಹಿಸಿಕಿಕೊಳ್ಳುತ್ತಾ ನರಳುತ್ತಿದ್ದಳು. ಸ್ವಲ್ಪ ಕೋಪದಿಂದ 'ಏನಾಗಿದೆ? ಬಾಯಿಬಿಟ್ಟು ಹೇಳು' ಎಂದೆ.

ಅವಳು 'ನೋವು, ನೋವು' ಎನ್ನುತ್ತಾ ತನ್ನ ಹೊಟ್ಟೆಯ ಕಡೆ ತೋರಿಸಿದಳು. ಹೊದಿಕೆಯನ್ನು ತೆಗೆದೆ. ಸ್ನೇಹಿತರೆ, ನನಗೆ ತಕ್ಷಣ ಗೊತ್ತಾಯಿತು, ಅವಳು ಹೆರಿಗೆ ನೋವಿನಿಂದ ಒದ್ದಾಡುತ್ತಿದ್ದಳು. ನನಗೆ ಹುಚ್ಚು ಹಿಡಿದಂತಾಯಿತು. ಪಕ್ಕದ ಮನೆಗೆ ಹೋಗಿ ಬಾಗಿಲು ತಟ್ಟಿ 'ಸಹಾಯ' ಎಂದು ಕೂಗಿದೆ.

ಕೆಲವೇ ನಿಮಿಷಗಳಲ್ಲಿ ತುಂಬ ಜನ ಬಂದು ಸೇರಿದರು. ಕೆಲವರು ಸುಂದರವಾಗಿ ಉಡುಪನ್ನು ಧರಿಸಿದ ಸ್ತ್ರೀಯರು. ಏನೋ ಆಕಸ್ಮಿಕ ಅಥವಾ ದುರ್ಘಟನೆ ನಡೆದಿರಬೇಕು ಎಂದು ಅವರು ಯೋಚಿಸಿದ್ದರು. ಅವರಿಗೆ ನಾನು ಹೇಳಿದೆ—"ಆ ಕೊಠಡಿಯಲ್ಲಿರುವ ಹೆಂಗಸಿಗೆ ಹೆರಿಗೆ ನೋವಿರಬೇಕು. ನರಳುತ್ತಿದ್ದಾಳೆ."

ಬಂದ ಕೆಲವರು ಅವಳನ್ನು ನೋಡಿದರು. ಎಲ್ಲರೂ ಕುಡಿದಿದ್ದರು. ಒಬ್ಬ ತನಗೆ ಎಲ್ಲಾ ಗೊತ್ತೆಂದೂ, ಹೆರಿಗೆ ಮಾಡಿಸುತ್ತೇನೆಂದೂ ಹೇಳಿದ. ಕುಡಿದಿದ್ದ ಅವನು 'ಅವಿವೇಕ ಮಾಡಿದರೆ?' ಎನಿಸಿತು ನನಗೆ.

ನಾನು ಸೀದಾ ಪಕ್ಕದ ರಸ್ತೆಯಲ್ಲಿರುವ ಒಬ್ಬ ವೈದ್ಯರನ್ನು ಕರೆತಂದೆ. ನಾವು ಬರುವುದರೊಳಗೆ ನಮ್ಮ ಮನೆಗೆ ಬಂದವರಲ್ಲಿ ನಾಲ್ಕು ಜನ ಮೇಜಿನ ಮೇಲಿಟ್ಟಿದ್ದ ಷಾಂಪೇನ್ ಕುಡಿಯುತ್ತಿದ್ದರು. ನನ್ನನ್ನು ನೋಡಿದ ಕೂಡಲೆ ಗಟ್ಟಿಯಾಗಿ ಕೇಕೆ ಹಾಕುತ್ತಾ ನನಗೆ 'ಶುಭಾಶಯ' ಎಂದರು. ಒಬ್ಬ ಹೆಂಗಸು ಬಂದು 'ಹೆಣ್ಣು ಮಗು' ಎಂದು ಹೇಳಿ ಹೋದಳು.

ಬಂದ ವೈದ್ಯರು ಆಕೆಯನ್ನು ಪರೀಕ್ಷಿಸಿ ಸ್ಥಿತಿ ಚಿಂತಾಜನಕವಾಗಿದೆ ಎಂದು 'ಅವಳ ಸಹಾಯಕ್ಕೆ ಒಬ್ಬ ನರ್ಸನ್ನು, ಮಗುವಿಗೆ ಹಾಲುಣ್ಣಿಸುವುದಕ್ಕೆ ಒಬ್ಬ ವೆಟ್ ನರ್ಸನ್ನು ಕಳುಹಿಸುತ್ತೇನೆ' ಎಂದು ಹೇಳಿ ಹೊರಟರು.

ಒಂದು ಗಂಟೆಯ ನಂತರ ಇಬ್ಬರು ನರ್ಸ್‌ಗಳು ಅವಳ ಸಹಾಯಕ್ಕೆ ಬಂದರು. ನಾನು ರಾತ್ರಿಯೆಲ್ಲಾ ಕುರ್ಚಿಯಲ್ಲಿ ಕುಳಿತು ತೂಕಡಿಸುತ್ತಿದ್ದೆ. ಬೆಳಗ್ಗೆ ವೈದ್ಯರು ಬಂದು ಆಕೆಯನ್ನು ಪರೀಕ್ಷಿಸಿ ನನ್ನೊಡನೆ,

"ನಿಮ್ಮ ಹೆಂಡತೀ...."

"ಅವಳು ನನ್ನ ಹೆಂಡತಿಯಲ್ಲ" ಎಂದೆ ನಾನು.

"ಸರಿ ನಿಮ್ಮ ಉಪಪತ್ನಿ" ಎಂದರು.

ವೈದ್ಯರು ಆಕೆಗೆ ಏನು ಮಾಡಬೇಕೆಂದು ಹೇಳಿದರು. ಅವಳ ಊಟ ಉಪಚಾರ, ಔಷಧಿ, ಟಾನಿಕ್ಕು ತಿಳಿಸಿದರು.

ನಾನೇನು ಮಾಡಬೇಕು? ಅವಳನ್ನು ಹೊರಗೆ ಹಾಕಲೇ? ಹಾಗೆ ಮಾಡಿದರೆ ನೆರೆಹೊರೆಯವರು ನನ್ನನ್ನು ಪಶು ಎಂದು ಕರೆದಾರು. ಆದುದರಿಂದ ಆಕೆಯನ್ನು ನನ್ನ ಮನೆಯಲ್ಲೇ ಆರು ವಾರ ಇಟ್ಟುಕೊಂಡೆ. ಮಗುವನ್ನು ನೋಡಿಕೊಳ್ಳಲು ಒಬ್ಬ ರೈತನ ಮನೆಗೆ ಕಳುಹಿಸಿದೆ. ಅವರಿಗೆ ತಿಂಗಳಿಗೆ ಐವತ್ತು ಫ್ರಾಂಕ್ ಕೊಡಬೇಕು. ಬಹುಶಃ ಬದುಕಿರುವವರೆಗೂ ಖರ್ಚು ಬರುತ್ತದೆ ಎನ್ನಿಸುತ್ತದೆ. ನಂತರ ಆ ಹುಡುಗಿ ನನ್ನನ್ನೇ ಅವಳ ತಂದೆ ಎಂದೂ ತಿಳಿಯಬಹುದು.

ಅವಳು ನಾಲ್ಕೈದು ವಾರಗಳಲ್ಲಿ ಚೇತರಿಸಿಕೊಂಡಳು. ಅವಳಿಗೆ ನನ್ನ ಮೇಲೆ ಪ್ರೀತಿ ಹುಟ್ಟಿದೆ ಎಂದು ಗೊತ್ತಾಯಿತು.

"ನಂತರ?" ಕೇಳಿದರು ನನ್ನ ಸ್ನೇಹಿತರು.

ಅವಳು ಆಶ್ರಯವಿಲ್ಲದ ಬೆಕ್ಕಿನಂತೆ ತೆಳ್ಳಗಾಗಿದ್ದಳು. ಬರೀ ಮೂಳೆಚಕ್ಕಳವಿದ್ದ ಹೆಂಗಸನ್ನು ಇಟ್ಟುಕೊಂಡು ಏನು ಮಾಡುವುದು? ಅವಳನ್ನು ಹೊರಹಾಕಿದೆ. ಅವಳು ನಾನು ಓಡಾಡುವ ರಸ್ತೆಯಲ್ಲಿ ನಿಂತು ನನ್ನನ್ನೇ ಕಾಯುತ್ತಿರುತ್ತಾಳೆ. ಸಿಕ್ಕಿದಾಗ ನನ್ನ ಕೈಹಿಡಿದು ಮುತ್ತು ಕೊಡುತ್ತಾಳೆ. ಇದರಿಂದ ನನಗೆ ಹುಚ್ಚು ಬಂದಂತಾಗಿದೆ. ಆದುದರಿಂದಲೇ ನನಗೆ ಕ್ರಿಸ್‌ಮಸ್‌ನ ಮುನ್ನಾ ದಿನ ಎಂದರೆ ಗಾಬರಿ.

ಮೊದಲು ನಿನ್ನಲ್ಲಿರುವ ತಪ್ಪುಗಳನ್ನು ನೀನು ತಿದ್ದಿಕೋ; ಅನಂತರ ಇತರರ ತಪ್ಪುಗಳನ್ನು ತಿದ್ದುವುದು ನಿನಗೆ ಗೊತ್ತಾಗುತ್ತದೆ.

ನಿಮ್ಮಲ್ಲಿ ಸಾಸುವೆ ಕಾಳಿನಷ್ಟು ಆತ್ಮವಿಶ್ವಾಸವಿದ್ದರೂ ಸಾಕು; ನಿಮಗೆ ಯಾವ ಕೆಲಸವೂ ಕಷ್ಟ ಅಲ್ಲ.

ಯಾರು ಶಾಂತಿದೂತರೋ ಅವರು ಧನ್ಯರು. ಯಾಕೆಂದರೆ ಅವರು ದೇವರ ಮಕ್ಕಳೆಂದು ಕರೆಯಲ್ಪಡುತ್ತಾರೆ.

—ಏಸುಕ್ರಿಸ್ತ

ಮಸ್ತಾನಿ

ನೊಂದಲಗೆರೆ ಲಕ್ಷ್ಮೀಪತಿ
ನಂ. ೧೩೭೪, ೭ನೇ ಅಡ್ಡರಸ್ತೆ
ಚಂದ್ರಾ ಬಡಾವಣೆ, ವಿಜಯನಗರ
ಬೆಂಗಳೂರು–೫೬೦ ೦೪೦

ಭಾರತೀಯ ಇತಿಹಾಸದ ಪುಟಗಳಲ್ಲಿ ಮೊಗಲರ ನಂತರದ ಸ್ಥಾನ ರಜಪೂತರದ್ದು, ನಂತರದು ಮರಾಠರದು. ರಜಪೂತರು ಮೊಗಲರನ್ನು ಎದುರಿಸಿ ತಮ್ಮ ವೀರಗಾಥೆಯನ್ನು ಚರಿತ್ರೆಯ ಪುಟಗಳಲ್ಲಿ ದಾಖಲಿಸಿದ್ದಾರೆ. ಅವರಷ್ಟೇ ಧೈರ್ಯ, ಸಾಹಸಗಳಿಂದ ಮೊಗಲರನ್ನು ಹುದ್ದು ಬಸ್ತಿನಲ್ಲಿ ಇಟ್ಟವರು ಮರಾಠರು. ಮರಾಠರಿಂದಾಗಿಯೇ ದಕ್ಷಿಣ ಭಾರತದಲ್ಲಿ ಮೊಗಲರ ಆಳ್ವಿಕೆಯ ಕುರುಹು ಉತ್ತರ ಭಾರತದಲ್ಲಿ ಇದ್ದಷ್ಟು ಇಲ್ಲಿ ಕಾಣಬರಲ್ಲಿಲ್ಲ. ವೀರಾಗ್ರೇಸರಲ್ಲಿ ೧೭೦೦ರ ದಶಕದಲ್ಲಿ ಮರಾಠ ಸಂತತಿಯಲ್ಲಿ ಮಿಂಚಿದವನು ಪೇಶ್ವೆ ಬಾಜಿರಾವ್. ಪೇಶ್ವೆ ಬಾಜಿರಾವ್‌ನ ಗೆಳೆತನ ಬಯಸಿ ಅದು ಗಟ್ಟಿಯಾಗಿ ಉಳಿಯಲೆಂದು ಬುಂದೇಲಖಂಡದ ದೊರೆ ಛತ್ರಸಾಲನು ಒಮ್ಮೆ ಪೇಶ್ವೆ ಬಾಜಿರಾವನಿಗೆ ಓರ್ವ ಅಪೂರ್ವ ಸುಂದರ ನರ್ತಕಿಯೋರ್ವಳನ್ನು ಉಡುಗೊರೆಯಾಗಿ ಅರ್ಪಿಸಿದ. ಅವಳ ಹೆಸರು—ಮಸ್ತಾನಿ. ಈಕೆಯ ತಂದೆ ಹಿಂದೂ ತಾಯಿ ಮುಸಲ್ಮಾನ್. ಮಸ್ತಾನಿಯ ಸೌಂದರ್ಯದ್ದು ವಿಶೇಷ ಹೆಗ್ಗಳಿಕೆ. ನರ್ತನದಲ್ಲಿ ಆ ಭಾಗದಲ್ಲೆಲ್ಲ ಅವಳಿಗೆ ಸರಿಸಾಟಿ ಹೆಂಗಸರಿರಲಿಲ್ಲ. ಮಸ್ತಾನಿಗೆ ಸೊಗಸಾದ ಮೈಮಾಟ, ಯಾರೊಬ್ಬರೂ ತಲೆದೂಗುವಂಥ ಕಂಠಮಾಧುರ್ಯವಿತ್ತು. ಇಂಥ ಅಪೂರ್ವ ಉಡುಗೊರೆಯನ್ನು ಬಾಜಿರಾವ್ ತನ್ನ ಆಸ್ಥಾನಕ್ಕೆ ಸೇರಿಸಿಕೊಂಡ. ಮಸ್ತಾನಿ, ಎಲ್ಲ ಜನಾನ ಸ್ತ್ರೀಯರಂತೆ ಇರಲಿಲ್ಲ. ಅವಳ ಕ್ರಮವೇ ಬೇರೆಯದಾಗಿತ್ತು. ದೊರೆ ಆಡಳಿತದ ವ್ಯವಹಾರದಲ್ಲಿ ತನ್ನ ಮಂಡೆಯನ್ನು ಗೋಜಲುಮಾಡಿಕೊಂಡು ಬಂದಾಗ ಅದಕ್ಕೆ ಸುಲಭ ಪರಿಹಾರೋಪಾಯಗಳನ್ನು ನೀಡುತ್ತಿದ್ದಳು. ದಾರ್ಶನಿಕಳಂತೆ, ಮಂತ್ರಿಯಂತೆ, ರಣಕೌಶಲಿಯಂತೆ, ಸಂದರ್ಭಕ್ಕೆ ಅನುಸಾರವಾಗಿ ತನ್ನ ಪಾತ್ರವನ್ನು ನಿಬಾಯಿಸುತ್ತಿದ್ದಳು. ರಾಜನ ಮೂಡ ಅರಿತು ಲಲ್ಲೆಗರೆಯುವ ಹುಸಿಕೋಪ ತೋರಿ ಅವನನ್ನು ಒಲಿಸಿಕೊಳ್ಳುವ ಕಲೆ ಅವಳಿಗೆ ಕರಗತವಾಗಿತ್ತು. ಹೀಗಾಗಿ ಪೇಶ್ವೆ ಬಾಜಿರಾವ್—ಕೆಳದರ್ಜೆಯ ಮನೆತನದಲ್ಲಿ ಜನಿಸಿದ ಮಸ್ತಾನಿಯ ಪ್ರೇಮ ಅನಂತದ ತುತ್ತತುದಿಯನ್ನು ಮೀರಿಸಿತ್ತು. ಮಸ್ತಾನಿಯನ್ನು ಅರೆಕ್ಷಣವೂ ಬಾಜಿರಾವ್ ಮರೆಯದಾದ. ಅಂತೆಯೇ ಮಸ್ತಾನಿಯೂ ಒಳ್ಳೆ ಹಾಡುಗಾತಿ, ಹಾಡುಗಾರಿಕೆಯ ಸಕಲ ವಾದ್ಯಗಳನ್ನೂ ನುಡಿಸಬಲ್ಲ ಚತುರೆ. ವಿದ್ವತ್ತು, ಉತ್ತಮಗುಣ ಸಂಪನ್ನೆಯಾದ ಮಸ್ತಾನಿ ಬಾಜಿರಾವ್‌ನಿಗೆ ಅನುರೂಪೆಯಾದ ಭಾರ್ಯೆ ಎನಿಸಿಬಿಟ್ಟಳು. ಆದರೆ ಆ ವೇಳೆಗಾಗಲೇ ಬಾಜಿರಾವನಿಗೆ ಕಾಶೀಬಾಯಿಯೊಂದಿಗೆ ಮದುವೆಯಾಗಿ ನಾನಾಸಾಹೇಬ, ಜನಾರ್ದನ ಎಂಬ ಮಕ್ಕಳು ಇದ್ದರು.

ಮಸ್ತಾನಿ ಧೀರ ಹೆಂಗಸು, ಬಾಜಿರಾವ್‌ನೊಂದಿಗೆ ಯುದ್ಧರಂಗಕ್ಕೆ ಜೊತೆಗೂಡಿ ಹೋಗುತ್ತಿದ್ದಳು.

ಪುಣೆಯ ಅರಮನೆಯ ಮೊಗಸಾಲೆಯಲ್ಲಿ ವಿನಾಯಕ ಚತುರ್ಥಿಯಂದು ತನ್ನ ಕಂಠ ಮಾಧುರ್ಯದಿಂದ ಸಭಿಕರನ್ನು ತಲೆ ತೂಗಿಸುತ್ತಿದ್ದ ಸಂಗೀತ ಸಾಮ್ರಾಜ್ಞಿಯಾಕೆ. ಪಕ್ಕಾ ಹಿಂದೂ ಸ್ತ್ರೀಯಂತೆ ಉಡುಗೆ ತೊಡುಗೆಗಳನ್ನು ತೊಟ್ಟು, ನಡವಳಿಕೆಗಳಲ್ಲಿ, ಹಾವಭಾವಗಳಲ್ಲಿ, ಹಿಂದೂತನವನ್ನು ಪ್ರದರ್ಶಿಸುತ್ತಿದ್ದಳು. ಬಾಜಿರಾವ್ ೧೭೨೦ ರಲ್ಲಿ ಮಸ್ತಾನಿಗೆಂದೇ ಅರಮನೆಯೊಂದನ್ನು ನಿರ್ಮಿಸಿದ, ಅಲ್ಲದೆ ಅವಳಿಗೆ ಪುಣೆಯ ಸಮೀಪದ ಪಾಬಲ್ ಎಂಬ ಹಳ್ಳಿಯನ್ನು ಜಹಗೀರು ನೀಡಿದ. ಮಸ್ತಾನಿ ೧೭೩೪ ರಲ್ಲಿ ಶಂಶೇರ್ ಬಹದೂರ್ ಎಂಬ ಹೆಸರಿನ ಮಗನಿಗೆ ಜನ್ಮ ನೀಡಿದಳು. ಈತ ಮೊಗಲರ ವಿರುದ್ಧದ ಹಲವು ರಣರಂಗಗಳಲ್ಲಿ ಮರಾಠರ ಪರವಾಗಿ ಹೋರಾಟ ಮಾಡಿದ. ಈತನ ಸಂತತಿಯವರು ಈಗಲೂ ಮಧ್ಯಪ್ರದೇಶದ ಬಂಡ ರಾಜ್ಯದಲ್ಲಿ (ಪ್ರದೇಶದಲ್ಲಿ) ಇದ್ದಾರೆ. ಮಸ್ತಾನಿ ಬಾಜಿರಾಯನ ಮೇಲೆ ಪ್ರಯೋಗಿಸಿದ ಸನ್ಮೋಹಿನಿಯಿಂದ ಖೇದಗೊಂಡ ಬಾಜಿರಾಯನ ಪತ್ನಿ ಕಾಶೀಬಾಯಿ ಮತ್ತು ಅವಳ ಸಂಬಂಧಿಕರು ಮಸ್ತಾನಿಯ ಪ್ರಭಾವದ ವಲಯದಿಂದ ದೊರೆಯನ್ನು ಮುಕ್ತಗೊಳಿಸಲು ಸಂಚು ಹೂಡಿದರು. ಈ ವೇಳೆಗಾಗಲೇ ಮಸ್ತಾನಿಯ ಪ್ರಭಾವ ವಲಯದಿಂದ ಬಾಜಿರಾಯನನ್ನು ಬೇರ್ಪಡಿಸುವುದು ಮಳೆಯನ್ನು ಮೋಡದಿಂದ ಬೇರ್ಪಡಿಸುವಷ್ಟೆ ಶ್ರಮದ ಕೆಲಸವಾಗಿತ್ತು.

ಕಾಶೀಬಾಯಿ ಮತ್ತವಳ ಮಕ್ಕಳು ಹಾಗೂ ಬಾಜಿರಾಯನ ಇತರೆ ಹೆಂಡತಿಯರಿಂದ ಹುಟ್ಟಿದ ಮಕ್ಕಳ ಕಾಟವನ್ನು ತಪ್ಪಿಸಿಕೊಳ್ಳುವಲ್ಲಿ ಮಸ್ತಾನಿ ಪಡುಪಾಟಲು ಪಡಬೇಕಾಯಿತು. ಈ ಎಲ್ಲ ಮಂದಿ ಸೇರಿ ಬಾಜಿರಾಯನ ನೆಮ್ಮದಿಯನ್ನು ಸೂರೆ ಮಾಡಿದರು. ಒಮ್ಮೆ ೧೭೩೯ರ ಅಂಚಿನಲ್ಲಿ ಬಾಜಿರಾವ್ ಊರಿನಲ್ಲಿ ಇಲ್ಲದ ಸಮಯ ನೋಡಿ ಬಾಜಿರಾಯನ ಮಗ ನಾನಾಸಾಹೇಬ ಮತ್ತಿತರರು ಮಸ್ತಾನಿಯನ್ನು ಬಂಧಿಸಿ ಸೆರೆಯಲ್ಲಿಟ್ಟರು. ಬಾಜಿರಾಯನ ಮನೆಯವರು ಹೂಡಿದ ಈ ಒಳಸಂಚು ಅದೆಷ್ಟು ಬಿಗಿಯಾಗಿತ್ತೆಂದರೆ ಪೇಶ್ವೆ ಬಾಜಿರಾಯ, ತನ್ನ ಮನದನ್ನೆಯನ್ನು ಬಂಧನದಿಂದ ಮುಕ್ತಗೊಳಿಸಲಾರದಷ್ಟು ನಿತ್ರಾಣವಾಗಿದ್ದ. ಅವನ ಹಿತಚಿಂತಕರೆಲ್ಲರಿಗೂ ಮಸ್ತಾನಿ ಬೇಡದ, ಆದರೆ ದೊರೆಗೆ ಅಗ್ಗದ ಒಂದು ಭೋಗವಸ್ತುವಾಗಿ ಬಿಟ್ಟಿದ್ದಳು. ಮಸ್ತಾನಿಯನ್ನೇ ಎಲ್ಲರು ನಿಂದಿಸುತ್ತಿದ್ದರು. ಆದರೆ ಬಾಜಿರಾವ್ ನಿಶ್ಯಕ್ತನಾದರೂ ಮಸ್ತಾನಿಯ ಮೇಲಿನ ಪ್ರೀತಿ ಕಡಿಮೆಯಾಗಲಿಲ್ಲ. ಸದಾ ಅವಳ ಚಿಂತೆಯಲ್ಲಿ ಮಗ್ನನಾದ ಪೇಶ್ವೆ ಬಾಜಿರಾವ್ ಹಾಸಿಗೆ ಹಿಡಿದ. ಅವನ ಆರೋಗ್ಯ ಹದಗೆಡುತ್ತಾ ಬಂದಿತ್ತು. ಕುಳಿತಲ್ಲಿ, ನಿಂತಲ್ಲಿ, ಮಸ್ತಾನಿಯದೇ ನೆನಪು ಅವನನ್ನು ಕಾಡತೊಡಗಿತು. ಅವಳ ನೆನಪಲ್ಲೇ ಬಾಜಿರಾವ್ ನಿಧನನಾದ. ಈ ಸುದ್ದಿ ತಿಳಿದ ಮಸ್ತಾನಿಯೂ ಸೆರೆಮನೆಯಲ್ಲಿಯೇ ನಿಧನ ಹೊಂದಿದಳು.

ಈಗಲೂ ಮಸ್ತಾನಿಯ ಗೋರಿಯನ್ನು ಪುಣೆಗೆ ೩೨ ಕಿ.ಮೀ. ದೂರದ ಪಾಬಲ್ ಗ್ರಾಮದಲ್ಲಿ ಕಾಣಬಹುದು. ಮಸ್ತಾನಿ ನುಡಿಸುತ್ತಿದ್ದ ವೀಣೆ, ಅವಳು ಬಳಸುತ್ತಿದ್ದ ಉದ್ದನೆಯ ನಿಲುಗನ್ನಡಿ ಹಾಗೂ ಇನ್ನಿತರೆ ಪರಿಕರಗಳನ್ನು ಪುಣೆಯ ರಾಜ ಕಾಲ್ಕರ್ (ಕೇಳ್ಕರ್) ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದೆ.

(ಆಧಾರ)

ಉತ್ತರಾಯಣ—ಎಂದು?

ಡಾ|| ಬಿ. ಎಸ್. ಶೈಲಜಾ
ಜವಹರಲಾಲ್ ನೆಹರು ತಾರಾಲಯ
ಶ್ರೀ ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್
ಬೆಂಗಳೂರು-೫೬೦ ೦೦೧

ಉತ್ತರಾಯಣ ಪುಣ್ಯಕಾಲ ಎಂದು ಮಕರಸಂಕ್ರಮಣವನ್ನು (ಜನವರಿ ೧೪) ಇಂದು ಆಚರಿಸುವ ನಾವು ಈ ಘಟನೆಗಳ ನಿಜ ವೈಶಿಷ್ಟ್ಯಗಳನ್ನು ಮರೆತು ಸಂಪ್ರದಾಯಕ್ಕೆ ಅಂಧ ವಿನೀತರಾಗಿದ್ದೇವೆ. ಗಗನ ವಿದ್ಯಮಾನಗಳನ್ನು ಚಿಕಿತ್ಸಕವಾಗಿ ಪರಿಶೀಲಿಸಿದರೆ—ಹೀಗೆ ಮಾಡಲು ನೀವು ಖಗೋಳಪಂಡಿತರಾಗಬೇಕಾಗಿಲ್ಲ. ಗಣಿತ ಪ್ರಭೃತಿಗಳೂ ಆಗಿರಬೇಕಾಗಿಲ್ಲ—ಬಾನೇ ನಮಗೆ ಗುರುವಾಗಿ ನಿಜಮಾರ್ಗವನ್ನು ಬೋಧಿಸುತ್ತದೆ. ಸ್ವತಃ ಖಭೌತವಿಜ್ಞಾನಿಯಾಗಿರುವ ಡಾ. ಶ್ರೀಮತಿ ಶೈಲಜಾರವರು ಈ ಕೆಲಸವನ್ನು ಪ್ರಸಕ್ತ ಲೇಖನದಲ್ಲಿ ಮಾಡಿರುವರು. ಇದನ್ನು ಓದಿದ ಬಳಿಕ ನೀವು ದಿನ ದಿನ ಆಕಾಶವನ್ನು ನೋಡುವ ಹವ್ಯಾಸ ಬೆಳೆಸಿಕೊಂಡರೆ ಬದುಕು ಅಷ್ಟು ಹೆಚ್ಚು ಅರ್ಥಪೂರ್ಣವಾಗುತ್ತದೆ.

ಮಹಾಭಾರತ ಎಲ್ಲರಿಗೂ ಪರಿಚಿತವಾದದ್ದೇ. ಹಾಗಾಗಿ ಶರಶಯ್ಯೆಯ ಮೇಲೆ ಮಲಗಿದ ಇಚ್ಛಾಮರಣಿಯಾದ ಭೀಷ್ಮರು ಐವತ್ತೆಂಟು ದಿನ ಕಾದು ಸ್ವರ್ಗಾರೋಹಣ ಮಾಡಿದ ವಿಷಯವೂ ಎಲ್ಲರಿಗೆ ತಿಳಿದದ್ದೇ. ಈ ಪ್ರಸಂಗ ಕುತೂಹಲ ಕೆರಳಿಸಿರುವುದು ಎರಡು ಕಾರಣಗಳಿಗಾಗಿ: ಮೊದಲನೆಯದು ಶರಶಯ್ಯೆಯ ಮೇಲೆ ಐವತ್ತೆಂಟು ದಿನ ಜೀವ ಉಳಿದದ್ದು ಹೇಗೆ ಎಂಬುದು; ಎರಡನೆಯದು ಈ ಉತ್ತರಾಯಣದ ಆಧಾರದ ಮೇಲೆ ಮಹಾಭಾರತ ಯುದ್ಧದ ಕಾಲ ನಿರ್ಣಯಿಸುವುದು.

ಮಹಾಭಾರತದ ಕಾಲದ ಬಗ್ಗೆ ಅನೇಕ ಜಿಜ್ಞಾಸೆಗಳಿದ್ದವೆ. ಕ್ರಿ. ಪೂ. ೩೦೦೦ ಅಥವಾ ಅದಕ್ಕೂ ಹಿಂದೆ ಎಂದು ಸಾಧಾರಣವಾಗಿ ಹೇಳಬಹುದಾದರೂ ವಿವಿಧ ಇತಿಹಾಸಕಾರರು ಬಳಸಿರುವ ಅಳತೆಗೋಲು ಬೇರೆ ಬೇರೆ. ಪ್ರತಿಯೊಂದು ವಿಧಾನದಲ್ಲೂ ಉತ್ತರಾಯಣ ಮತ್ತು ಶರಶಯ್ಯೆಯ ಪ್ರಸಂಗದ ಉಲ್ಲೇಖ ಬಂದೇ ಬರುತ್ತದೆ. ಈ ಉತ್ತರಾಯಣದ ಮಹತ್ವ ಎಂತಹುದು ಎಂದು ತಿಳಿಯುವ ಮೊದಲು, ಉತ್ತರಾಯಣ ಎಂದರೇನು ಎಂಬುದನ್ನೇ ತಿಳಿಯೋಣ.

ಪ್ರತಿದಿನ ಸೂರ್ಯೋದಯ ಅಥವಾ ಸೂರ್ಯಾಸ್ತವನ್ನು ಗಮನಿಸುವ ಅವಕಾಶ ನಿಮಗೆ ಸಿಗುತ್ತಿದೆ ಎಂದುಕೊಳ್ಳಿ, ಸೂರ್ಯ ಉದಯಿಸುವ (ಅಸ್ತಮಿಸುವ) ಬಿಂದು ದಿನದಿನಕ್ಕೆ ಬದಲಾಗುತ್ತಿರುವುದು ಖಂಡಿತ

ತಿಳಿಯುತ್ತದೆ. ಅಂದರೆ ಸೂರ್ಯನ ಬೆಳಕು ನಮ್ಮ ಮನೆಯೊಳಗೆ ಪ್ರವೇಶಿಸುವ ದಿಕ್ಕು ದಿನೇ ದಿನೇ ಬದಲಾಯಿಸುತ್ತಿರುತ್ತದೆ. "ಅದೇನು ಮಹಾ, ಬೆಳಗಿನ ಹೊತ್ತು ಪೂರ್ವದ ಕಿಟಕಿಯಲ್ಲಿ ಬಿಸಿಲು ಬಂದರೆ, ಸಂಜೆಯ ಹೊತ್ತು ಪಶ್ಚಿಮದ ಕಿಟಕಿಯಲ್ಲಿ ಬರುತ್ತದೆ" ಎಂದು ಅಲ್ಲಗಳೆಯಬೇಡಿ. ಅನುಭವಸ್ಥ ಗೃಹಿಣಿಯರು ಹಪ್ಪಳ ಸಂಡಿಗೆ ಒಣಗಿಸಲು ಆರಿಸುವ ಸ್ಥಳವನ್ನು ಗಮನಿಸಿ. ಪೂರ್ವವೂ ಅಲ್ಲ, ಪಶ್ಚಿಮವೂ ಅಲ್ಲ—ಅವರಾರಿಸುವ ದಿಕ್ಕು ದಕ್ಷಿಣ.

ಇದು ಹೇಗೆ?

ಇದನ್ನು ತಿಳಿಯಲು ನೀವು ಪ್ರಾಥಮಿಕ ಶಾಲೆಯಲ್ಲಿ ಕಲಿತ ಕೆಲವು ಅಂಶಗಳನ್ನು ನೆನಪಿಗೆ ತಂದುಕೊಳ್ಳಿ. (೧) ಭೂಮಿಯ ಅಕ್ಷ ಇಪ್ಪತ್ತಮೂರೂವರೆ ಡಿಗ್ರಿಗಳಷ್ಟು ಓರೆಯಾಗಿದೆ. (೨) ಈ ಕಾರಣದಿಂದಲೇ ಋತುಮಾನದ ಬದಲಾವಣೆಗಳಾಗುವುವು. ಈಗ ನಿಮ್ಮ ಮುಂದಿರುವ ಪ್ರಶ್ನೆ—ಈ ಇಪ್ಪತ್ತಮೂರೂವರೆ ಡಿಗ್ರಿ ಎಂಬ ಕೋನ ಯಾವುದು?

ಭೂಮಿ ಮತ್ತು ಸೂರ್ಯ ಎರಡೂ ಇರುವ ಒಂದು ತಲವನ್ನು ಕಲ್ಪಿಸಿಕೊಳ್ಳಿ. ಮೇಜಿನ ಮೇಲೆ ತಿರುಗುತ್ತಿರುವ ಒಂದು ಬುಗುರಿಯನ್ನು ಭೂಮಿ ಎಂದುಕೊಳ್ಳಿ. ಇದು ಮೇಜಿನ ಮೇಲೆ ಇರುವ ಒಂದು ಕಕ್ಷೆಯಲ್ಲಿ (ಮೇಜಿನ ಮೇಲೆ ಇರುವ) ಸೂರ್ಯನನ್ನು ಸುತ್ತುತ್ತದೆ. ಆದರೆ ಎಲ್ಲ ಬುಗುರಿಗಳಂತೆ ಇದು ಮೇಜಿನ ತಲಕ್ಕೆ ಲಂಬವಾಗಿ ಆವರ್ತಿಸುವುದಿಲ್ಲ. (ಕಥಕ್ ನೃತ್ಯಗಾರ್ತಿ ನಿಂತಲ್ಲೇ ಹಲವಾರು ಚಕ್ರ ಹೊಡೆಯುವ, ಅಂದರೆ ತನ್ನ ಸುತ್ತ ತಾನೇ ತಿರುಗುವ, ದೃಶ್ಯ ಕಲ್ಪಿಸಿಕೊಳ್ಳಿ. ಈ ಚಲನೆಗೆ ಆವರ್ತನೆ ಎಂದು ಹೆಸರು.) ಬುಗುರಿಯ ಮೊಳೆಯೇ ಆವರ್ತನಾಕ್ಷ. ಇದು ಓರೆಯಾಗಿರುವುದರಿಂದ ಬುಗುರಿಯ ಮೇಲಿನ ಬಣ್ಣದ ಪಟ್ಟಿಗಳೂ ಮೇಜಿನ ತಲಕ್ಕೆ ಓರೆಯಾಗಿವೆ. ಇವುಗಳಲ್ಲೊಂದು ಸಮಭಾಜಕವೃತ್ತ ಎಂದು ಕಲ್ಪಿಸಿಕೊಳ್ಳಿ. ಈ ವೃತ್ತದ ತಲ ಬೇರೆ. ಮೇಜಿನ ತಲದೊಡನೆ ಇದು ಸಂಧಿಸುವುದು ಕೆಲವು ಬಿಂದುಗಳಲ್ಲಿ ಮಾತ್ರ.

ಈಗ ಈ ಎರಡೂ ತಲಗಳನ್ನು ವಿಸ್ತರಿಸಿ. ದಿಗಂತದಾಚೆಗೆ ಇವು ಸಂಧಿಸುವ ನಕ್ಷತ್ರಪುಂಜಗಳು ಬೇರೆ ಬೇರೆ. ಇಪ್ಪತ್ತಮೂರೂವರೆ ಡಿಗ್ರಿಗಳ ವ್ಯತ್ಯಾಸ ಆಕಾಶದ ನಕ್ಷತ್ರಪುಂಜಗಳಲ್ಲಿ ಸ್ಫುಟವಾಗಿ ಎದ್ದು ಕಾಣುತ್ತದೆ. ಸೂರ್ಯ ಈ ನಕ್ಷತ್ರಪುಂಜಗಳಲ್ಲಿ ಕಂಡಾಗ (ನಮಗೆ) ಉತ್ತರದಿಂದ ದಕ್ಷಿಣಕ್ಕೆ ದಕ್ಷಿಣದಿಂದ ಉತ್ತರಕ್ಕೆ ಸರಿದ ಅನುಭವವಾಗುತ್ತದೆ.

ಅಂದರೆ ಪ್ರತಿ ಮಧ್ಯಾಹ್ನ ಸೂರ್ಯ ನಡುನೆತ್ತಿಯಲ್ಲಿರುವುದಿಲ್ಲವೇ? ಇದನ್ನು ನೀವು ಗಮನಿಸಬಹುದು. ಪ್ರತಿ ಮಧ್ಯಾಹ್ನ ಯಾವುದೇ ದೀಪದ ಕಂಬದ ನೆರಳನ್ನು ಅಥವಾ ನಿಮ್ಮದೇ ನೆರಳನ್ನು ಗಮನಿಸಿ. ಪೂರ್ವ ಪಶ್ಚಿಮವಾಗಿ ನೆರಳಿಲ್ಲದಿದ್ದರೂ, ಅದು ಸಂಪೂರ್ಣವಾಗಿ ಮಾಯವಾಗಿರುವುದಿಲ್ಲ. ಉತ್ತರ ದಕ್ಷಿಣವಾಗಿ ನೆರಳಿರುತ್ತದೆ. ವರ್ಷದಲ್ಲಿ ಎರಡು ದಿನ ಮಾತ್ರ ನಡುಮಧ್ಯಾಹ್ನ ನಿಮ್ಮ ನೆರಳು ನಿಮ್ಮ ಕಾಲ ಮೇಲೇ ಬಿದ್ದು ಕಾಣದಂತಾಗುತ್ತದೆ. ಈ ಎರಡು ದಿನಗಳು ಬೆಂಗಳೂರಿಗೇ ಬೇರೆ; ಮೈಸೂರಿಗೇ ಬೇರೆ; ಬೆಳಗಾವಿಗೇ ಬೇರೆ ·

ಭೂಗೋಳದ ಮೇಲೆ ನಿಮ್ಮ ಸ್ಥಾನಕ್ಕನುಗುಣವಾಗಿ ಇದರ ದಿನಾಂಕ ನಿರ್ಧಾರವಾಗುತ್ತದೆ. ನೀವು ಭೂಮಧ್ಯರೇಖೆಯ ಮೇಲಿದ್ದರೆ ಮಾರ್ಚ್ ೨೧ ಹಾಗೂ ಸೆಪ್ಟೆಂಬರ್ ೨೧ರಂದು ಹೀಗೆ ಸೂರ್ಯ ನೆತ್ತಿಯ ಮೇಲಿರುತ್ತನೆ. ಕಾಶ್ಮೀರದಲ್ಲಿ ಇರುವಿರಾದರೆ, ಸೂರ್ಯ ನೆತ್ತಿಯ ಮೇಲೆ ಬರುವುದು ಸಾಧ್ಯವೇ ಇಲ್ಲ. ಬೇಸಿಗೆಯಲ್ಲೂ ಸೂರ್ಯ ನೆತ್ತಿಯಿಂದ ದಕ್ಷಿಣಕ್ಕೇ ಇರುತ್ತದೆ.

ಮಧ್ಯಾಹ್ನದ ನೆರಳು ದಕ್ಷಿಣಕ್ಕಿರುವುದು ಬೇಸಗೆಯಲ್ಲಿ (ಆಗ ಸೂರ್ಯ ನೆತ್ತಿಯಿಂದ ಸ್ವಲ್ಪ ಉತ್ತರಕ್ಕಿರುತ್ತದೆ) ಉತ್ತರಕ್ಕಿರುವುದು ಚಳಿಗಾಲದಲ್ಲಿ (ಆಗ ಸೂರ್ಯ ನೆತ್ತಿಯಿಂದ ಸ್ವಲ್ಪ ದಕ್ಷಿಣಕ್ಕಿರುತ್ತದೆ).

ಹೀಗೆ ದಿನದಿನಕ್ಕೆ ಸರಿಯುವ ಸೂರ್ಯ ದಕ್ಷಿಣದ ಗರಿಷ್ಠವನ್ನು ಮುಟ್ಟುವುದೇ ಡಿಸೆಂಬರ್ ೨೧ರಂದು. (ಆ ದಿನ ಕನಿಷ್ಠ ಹಗಲು ಗರಿಷ್ಠ ಇರುಳಿನ ದಿವಸ ಎಂದು ತಿಳಿದಿದ್ದೀರಲ್ಲವೇ?) ಆನಂತರ ಪುನಃ ಉತ್ತರಕ್ಕೆ ಮರಳುತ್ತದೆ. ಇದೇ ಉತ್ತರಾಯಣ.

ಹೀಗೆಯೇ ಜೂನ್ ೨೨ರಂದು ಉತ್ತರದಿಂದ ದಕ್ಷಿಣಕ್ಕೆ ಹೊರಳುವುದೇ ದಕ್ಷಿಣಾಯನ.

ಆದರೆ ಉತ್ತರಾಯಣ – ಮಕರ ಸಂಕ್ರಮಣ ಎಂಬ ಹಬ್ಬವನ್ನು ಜನವರಿ ೧೪ರಂದು ಆಚರಿಸುತ್ತಾರಲ್ಲವೇ? ಇದು ಹೇಗೆ ಸಾಧ್ಯ?

ಇದನ್ನು ಅರ್ಥಮಾಡಿಕೊಳ್ಳಲು ಭೂಮಿಯ ಇನ್ನೂ ಒಂದು ಚಲನೆಯ ಬಗ್ಗೆ ತಿಳಿಯಬೇಕು—ಇದೇ ಭೂಮಿಯ ಮೂರನೆಯ ಚಲನೆ!

ಭೂಮಿಯ ಎರಡು ಚಲನೆಗಳು ನಿಮಗೆ ತಿಳಿದೇ ಇದೆ. ಮೊದಲನೆಯದು ತನ್ನ ಅಕ್ಷದ ಮೇಲೆ ತಾನು ಸುತ್ತುವ ದೈನಂದಿನ ಚಲನೆ—ಇದೇ ಆವರ್ತನೆ. ಇದರ ಅವಧಿ ೨೪ ಗಂಟೆಗಳು. ಎರಡನೆಯದು ಸೂರ್ಯನನ್ನು ೩೬೫ ದಿನಗಳಿಗೊಮ್ಮೆ ಪ್ರದಕ್ಷಿಣೆ ಹಾಕುವುದು—ಇದು ಪರಿಭ್ರಮಣೆ. ಮೂರನೆಯ ಚಲನೆಯನ್ನು ನೀವು ಸುಲಭವಾಗಿ ಕಲ್ಪಿಸಿಕೊಳ್ಳಲಾರಿರಿ. ಏಕೆಂದರೆ ಇದರ ಅವಧಿ ೨೫,೮೦೦ ವರ್ಷಗಳು. ಹಾಗಾಗಿ ನಮ್ಮ ಜೀವಿತಾವಧಿಯ ೫೦–೬೦ ವರ್ಷಗಳಲ್ಲಿ ಈ ಚಲನೆ ನಮ್ಮ ಅನುಭವಕ್ಕೆ ಬರುವುದೇ ಇಲ್ಲ.

ಆವರ್ತಿಸುತ್ತಿರುವ ಬುಗುರಿಯನ್ನು ಗಮನಿಸಿ. ಅತ್ಯಂತ ವೇಗವಾಗಿ ಆವರ್ತಿಸುತ್ತಿರುವಾಗ ಇದರ ಅಕ್ಷ (ಅಂದರೆ ಮೊಳೆ) ನೆಲಕ್ಕೆ ಲಂಬವಾಗಿ, ನೇರವಾಗಿ ಇರುತ್ತದೆ. ಆದರೆ ಸ್ವಲ್ಪ ವೇಗ ತಗ್ಗಿದಂತೆ ಅಕ್ಷವೇ ಸುತ್ತತೊಡಗುವುದಲ್ಲವೇ? ಬುಗುರಿ ಬೀಳುವುದಕ್ಕೆ ಸ್ವಲ್ಪ ಮುಂಚೆ ಅಕ್ಷವೇ ಒಂದು ಶಂಕುವಿನಾಕಾರದಲ್ಲಿ ತಿರುಗುತ್ತದೆ.

ಭೂಮಿಯ ಅಕ್ಷವೂ ಹೀಗೆಯೇ ವ್ಯತ್ಯಾಸವಾಗುತ್ತದೆ. ಅಂದರೆ ಭೂಮಿಯ ಅಕ್ಷದ ದಿಕ್ಕು ಸ್ಥಿರವಾಗಿಲ್ಲ; ನಿಧಾನವಾಗಿ ಬದಲಿಸುತ್ತಿದೆ ಎಂದಾಯಿತು ಅಂದರೆ ಧ್ರುವನಕ್ಷತ್ರ ಎಂದೆಂದಿಗೂ ಅದೇ ಸ್ಥಳದಲ್ಲಿ (ಉದಯಾಸ್ತರಹಿತವಾಗಿ) ಶಾಶ್ವತವಾಗಿ ಉಳಿಯಲಾರದು ಎಂದಾಯಿತು.

ಈ ದೀರ್ಘಾವಧಿಯ ವ್ಯತ್ಯಾಸವನ್ನು ಗಮನಿಸುವುದು ಸುಲಭವಲ್ಲ. ಆದರೂ

ಕ್ರಿ. ಪೂ. ಎರಡನೆಯ ಶತಮಾನದಲ್ಲೇ ಹಿಪ್ಪಾರ್ಚಸ್ ಎಂಬ ಗ್ರೀಕ್ ತತ್ತ್ವಜ್ಞಾನಿ ಈ ಬಗ್ಗೆ ತಿಳಿದಿದ್ದ. ಇದು ಹೇಗೆ ಸಾಧ್ಯವಾಗಿರಬಹುದು ?

ಹನ್ನೆರಡು ರಾಶಿಗಳಲ್ಲಿ ಸೂರ್ಯನ ಚಲನೆಯನ್ನು ಸೂಕ್ಷ್ಮವಾಗಿ ಗಮನಿಸಬಲ್ಲವರಿಗೆ ಇದೊಂದು ಸವಾಲು.

ಸೂರ್ಯ ಮೇಷ ರಾಶಿಯನ್ನು ಪ್ರವೇಶಿಸಿದಾಗ ನಮ್ಮ ಹೊಸವರ್ಷ ಆರಂಭವಾಗುತ್ತದೆ. ಏಪ್ರಿಲ್ ೧೪ರಂದು ಇದನ್ನು ಮೇಷ ಸಂಕ್ರಮಣ ಎಂದು ಗುರುತಿಸುತ್ತೇವೆ. ಇದು ಇಂದಿನ ಸಂಗತಿ. ಚಳಿಗಾಲದ ರಾತ್ರಿಗಳ ಉದ್ದ ಮೊಟಕಾಗುತ್ತಾ ಬಂದು, ಹಗಲು, ಇರುಳುಗಳ ಅವಧಿ ಸಮವಾಗುವ ದಿನಾಂಕ ಇದು. ಸೂರ್ಯ ಅಂದು ಇರುವ ಬಿಂದುವೇ ವಿಷುವದ್ ಬಿಂದು.

ಧ್ರುವನಕ್ಷತ್ರದ ದಿಕ್ಕು ಅಂದರೆ ಭೂಮಿಯ ಅಕ್ಷದ ದಿಕ್ಕು ಬದಲಾಯಿಸಿದ ಹಾಗೆ ಈ ವಿಷುವದ್ ಬಿಂದು ವ್ಯತ್ಯಾಸವಾಗುತ್ತದೆ. ಅಂದರೆ ಸೂರ್ಯ ಅದನ್ನು ಹಾದು ಹೋಗುವ ದಿನವೂ ಬದಲಾಯಿಸುತ್ತದೆ.

ಹಿಪ್ಪಾರ್ಚಸ್ ತನ್ನ ಹಿಂದಿನವರ ವೀಕ್ಷಣೆಗಳನ್ನೆಲ್ಲಾ ಒಟ್ಟುಗೂಡಿಸಿ ಸಿದ್ಧಿಸಿದ್ದು ಈ ಅಂಶವನ್ನೇ. ಇದನ್ನೇ ವಿಸ್ತರಿಸಿ ಕ್ರಿ.ಶ. ೧೪೦೦೦ದ ಹೊತ್ತಿಗೆ ಧ್ರುವನಕ್ಷತ್ರ ದೂರ ಸರಿದು, ಭೂಮಿಯ ಅಕ್ಷ ವೇಗಾ ಅಭಿಜಿತ್ ಎಂಬ ನಕ್ಷತ್ರದತ್ತ ಸಾಗುತ್ತದೆ ಎಂದೂ ಲೆಕ್ಕಹಾಕಬಹುದು.

ಕ್ರಿ.ಶ. ೧೪೦೦೦ದ ಹೊಸವರ್ಷದ ದಿನ ಮೇಷ ವೃಷಭಗಳಲೆಕ್ಕವೆಲ್ಲಾ ತಿರುಗುಮುರುಗಾಗುತ್ತದೆ.

ವಸಂತಮಾಸವನ್ನು ಹೊಸವರ್ಷ ಎಂದು ಗುರುತಿಸಿದರೆ ಇನ್ನೂ ಕ್ಲಿಷ್ಟವಾದ ಸಮಸ್ಯೆಯಾಗುತ್ತದೆ. ಮೇಷ ಸಂಕ್ರಮಣ, ವಿಷುವದ್ ಬಿಂದುವನ್ನು ದಾಟುವ ದಿನ ಹಾಗೂ ವಸಂತಾರಂಭ—ಇವು ಮೂರೂ ಐಕ್ಯವಾಗಿ ಇರುವುದು ಅಥವಾ ಇದ್ದದ್ದು ತಾತ್ಕಾಲಿಕವಾಗಿ ಮಾತ್ರ.

ಹೀಗೆ ಸೂರ್ಯ ವಿಷುವದ್ ಬಿಂದುವನ್ನು ದಾಟುವ ದಿನ ಕ್ರಮೇಣ ಸರಿಯುತ್ತಿರುವುದು ಪೂರ್ವಕ್ಕೆ. ಆದ್ದರಿಂದ ಇದನ್ನು ವಿಷುವದ್ ಬಿಂದುವಿನ ಪೂರ್ವಾಯನ ಎಂದು ಕರೆಯಬಹುದು.

ಇಂದು ಸೂರ್ಯನ ಚಲನೆಯ ಪ್ರಕಾರ, ಸೂರ್ಯ ವಿಷುವದ್ ಬಿಂದುವನ್ನು ದಾಟುವ ದಿನ ಮಾರ್ಚ್ ೨೧ರಂದು. ಆದರೆ ಮೇಷ ಸಂಕ್ರಮಣ ಏಪ್ರಿಲ್ ೧೪, ಹೀಗೆಯೇ, ವೃಷಭ ಸಂಕ್ರಮಣ ಮೇ ೧೪, ಮಿಥುನ ಸಂಕ್ರಮಣ ಜೂನ್ ೧೪....ಹೀಗೆ ಮಕರಸಂಕ್ರಮಣ ಜನವರಿ ೧೪ ಆಗುತ್ತದೆ (ಅಥವಾ ಆಗುತ್ತಿತ್ತು ಎನ್ನಬಹುದೇ?)

ಎಂದೊ ಒಂದು ದಿನ ವಿಷುವದ್‌ಬಿಂದು, ಮೇಷ ಸಂಕ್ರಮಣ ಮತ್ತು ವಸಂತಾಗಮನ ಮೂರೂ ಒಟ್ಟಿಗೇ ನಡೆದಾಗ ವರ್ಷವನ್ನಾರಂಭಿಸುವ ಪದ್ಧತಿ ಜಾರಿಗೆಬಂದಿತು. ಶತಕಗಳುರುಳಿದಂತೆ ವಿಷುವದ್‌ಬಿಂದು ಪೂರ್ವಕ್ಕೆ ಸರಿಯಿತು. ವಸಂತವೂ ಹಿಂದೆ ಸರಿಯಿತು. ಮೇಷ ಸಂಕ್ರಮಣ ಮತ್ತು ಇವುಗಳ ನಡುವೆ ಅಂತರ ಹೆಚ್ಚುತ್ತಾ ಹೋಯಿತು. ಹಾಗಾಗಿ ಇಂದು ಸೂರ್ಯ ಇನ್ನೂ ಮೀನರಾಶಿಯಲ್ಲಿರುವಾಗಲೇ ವಿಷುವದ್‌ಬಿಂದುವನ್ನು ದಾಟಿ (ಮಾರ್ಚ್ ೨೧ ರಂದು) ವಸಂತಾಗಮನವಾಗುತ್ತದೆ.

ಹೀಗೆ ನಿಧಾನವಾಗಿ ವಿಷುವದ್‌ಬಿಂದು ಹನ್ನೆರಡು ರಾಶಿಗಳನ್ನು ದಾಟಿಬರಲು ೨೫,೮೦೦ ವರ್ಷಗಳು ಬೇಕು. ಅಂದರೆ ಮೇಷದಿಂದ ಮೀನಕ್ಕೆ ಜರುಗಲು ಎಷ್ಟು ವರ್ಷಗಳು ಬೇಕಾಗಬಹುದು ಎಂದು ಲೆಕ್ಕ ಹಾಕಬಹುದಲ್ಲವೆ?

ಸುಮಾರು ೨೦೦೦ ವರ್ಷಗಳು ಬೇಕಾಗುತ್ತವೆ ಎಂದು ಅಂದಾಜಾಗಿ ಹೇಳಬಹುದು.

ಅಂದರೆ ಸುಮಾರು ೨೦೦೦ ವರ್ಷಗಳ ಹಿಂದೆ ಈ ವರ್ಷಾರಂಭದ ಆಚರಣೆ ಜಾರಿಗೆ ಬಂದಿತು ಎಂದು ಹೇಳಬಹುದು.

ಆ ಕಾಲ ಚಾರಿತ್ರಿಕವಾಗಿಯೂ ದಾಖಲಾಗಿದೆ. ಕ್ರಿ.ಪೂ. ೧೫೦ ರಲ್ಲಿ ಈ ಪದ್ಧತಿ ಜಾರಿಗೆ ಬಂದಿತೆಂದು ಇತಿಹಾಸ ತಿಳಿಸುತ್ತದೆ.

ಕ್ರಿ.ಶ. ೧೪೦೦೦ ದ ಹೊತ್ತಿಗೆ ವೇಗಾ ಅಥವಾ ಅಭಿಜಿತ್ ಎಂಬುದು ಧ್ರುವ ನಕ್ಷತ್ರವಾಗಿರುತ್ತದೆ. ಆಗ ವಸಂತಾಗಮನವಾಗುವುದು. ಸೂರ್ಯ ತುಲಾ ಅಥವಾ ವೃಶ್ಚಿಕರಾಶಿಯಲ್ಲಿರುವಾಗ. ಅಂದರೆ ಈಗಿನ ಚಳಿಗಾಲ ಆಗಿನ ಬೇಸಿಗೆಯಾಗುವುದು. ಅಂದರೆ ವೃಶ್ಚಿಕರಾಶಿಯನ್ನು ನಾವು ಸಂಜೆ ನೋಡಬಹುದಾದದ್ದು ಚಳಿಗಾಲದಲ್ಲಿ—ಆಗ. ಈಗ ಬೇಸಿಗೆಯಲ್ಲಿ ಕಾಣುತ್ತೇವಲ್ಲವೇ?

ಆಗ ಹಪ್ಪಳ ಸಂಡಿಗೆಗಳನ್ನು ಉತ್ತರ ದಿಕ್ಕಿನಲ್ಲಿಟ್ಟು ಒಣಗಿಸಬೇಕಾಗುವುದು. ಉತ್ತರಾಯಣ ದಕ್ಷಿಣಾಯನವಾಗುವುದು.

ಉತ್ತರಾಯಣ ಎಂಬುದೂ ಒಂದು ಸಂಕ್ರಮಣವೇ. ಮೇಷದ ಬದಲು ಮಕರ ರಾಶಿ, ಅಷ್ಟೇ. ಇದೂ ಜನವರಿ ೧೪ರಂದು ನಡೆಯುತ್ತಿದ್ದುದು. ಕ್ರಿ. ಪೂ. ೧೫೦ರಲ್ಲಿರಬೇಕು. (ಆಗ ಜನವರಿ, ಫೆಬ್ರವರಿ ಎಂಬ ಗ್ರೆಗೊರಿಯನ್ ಕ್ಯಾಲೆಂಡರ್ ಇರಲಿಲ್ಲವಲ್ಲ—ಬೇರೆ ಇನ್ನೇನೋ ಹೆಸರಿತ್ತು). ಈಗ ಅದು ೨೪ ದಿನಗಳಷ್ಟು ಹಿಂದಕ್ಕೆ ಸರಿದಿದೆ.

ಈಗ ಭೀಷ್ಮರ ಶರಶಯ್ಯೆಯ ಪ್ರಸಂಗವನ್ನು ನೆನಪಿಸಿಕೊಳ್ಳೋಣ. ಆಗ್ಗೆ ಸೂರ್ಯ ಕೃತ್ತಿಕಾ ನಕ್ಷತ್ರದಲ್ಲಿದ್ದಾಗ ವಸಂತಾಗಮನವಾಗುತ್ತಿತ್ತು ಎಂಬುದೊಂದು ಸುಳಿವು ಮಹಾಭಾರತದಲ್ಲಿ ಸಿಗುತ್ತದೆ. ಕೃತ್ತಿಕಾ ಎಂದರೆ ವೃಷಭರಾಶಿ. ಅಂದರೆ ಆಗ ವಿಷುವದ್‌ಬಿಂದು, ವೃಷಭ ರಾಶಿಯಲ್ಲಿತ್ತು ಎನ್ನಬಹುದು. ಈ ಸುಳಿವಿನಿಂದ ವಿಷುವದ್‌ಬಿಂದು ಎಷ್ಟು ಶತಕಗಳ ಹಿಂದೆ ಕೃತ್ತಿಕಾ ನಕ್ಷತ್ರದಲ್ಲಿತ್ತು ಎಂದು ಲೆಕ್ಕಹಾಕಿ ಮಹಾಭಾರತ ಯುದ್ಧದ ಕಾಲವನ್ನು ತಿಳಿಯಬಹುದಲ್ಲವೇ?

ಉತ್ತರ ಇತಿಹಾಸಕಾರರ ಚೌಕಟ್ಟಿನಲ್ಲೇ ಇದೆ. ಕ್ರಿ.ಪೂ. ೩೦೦೦. ಈಗ ಜನವರಿ ೧೪ ಉತ್ತರಾಯಣವಲ್ಲ—ಅದು ಡಿಸೆಂಬರ್ ೨೧; ಕ್ರಿ.ಪೂ. ೧೫೦ ರಲ್ಲಿ ಜನವರಿ ೧೪ ಎಂದಿಟ್ಟುಕೊಂಡರೆ, ಕ್ರಿ.ಪೂ. ೩೦೦೦ ದಲ್ಲಿ (ಜನವರಿ, ಫೆಬ್ರವರಿ ಎಂಬ ಗ್ರೆಗೊರಿಯನ್ ಕ್ಯಾಲೆಂಡರ್ ಅನ್ನೇ ಬಳಸಿದರೆ) ಉತ್ತರಾಯಣವಾಗುತ್ತಿದ್ದುದು ಫೆಬ್ರವರಿ ಮೂರನೆಯ ವಾರ ಎಂದಾಗುತ್ತದೆ.

ಹಾಗಾದರೆ ಎಳ್ಳು, ಕಬ್ಬು, ಬೆಲ್ಲ, ಕಡಲೆ—ಇವು?

ಖಗೋಳಜ್ಞರ ಸಮಸ್ಯೆ ಏನೇ ಇರಲಿ. ಹೊಸ ಫಸಲು ಬಂದಾಗ ಸಂಭ್ರಮ ಆಚರಣೆ, ಅದು ಯಾವ ಸಂಕ್ರಮಣವಾದರೇನು ಅಲ್ಲವೇ?

ಪುಸ್ತಕ ಪರಿಚಯ

ಗೋದಿಯ ತೆನೆಗಳು—ಸುಬ್ಬಣ್ಣ ರಂಗನಾಥ ಎಕ್ಕುಂಡಿ; ನವಕರ್ನಾಟಕ ಪ್ರಕಾಶನ; ಮೊದಲ ಮುದ್ರಣ ೧೯೯೬; ಪುಟಗಳು: ೬೪; ಬೆಲೆ: ರೂ. ೨೮.

ಕಾವ್ಯದೊಳಗೆ ಹೃದಯ ಸಂವಾದ ನಡೆಸುತ್ತಿದ್ದ ಸು.ರಂ. ಎಕ್ಕುಂಡಿಯವರ ಕೊನೆಯ ಸಂಕಲನ 'ಗೋದಿಯ ತೆನೆ'. ಇದರಲ್ಲಿ ೨೭ ಕವಿತೆಗಳು ಸಂಕಲನಗೊಂಡಿವೆ. ತೆನೆಯೊಳಗಿನ ಕಾಳುಗಳು ಇವು. 'ಗೋದಿಯ ತೆನೆ' ಮುಖ್ಯವಾಗಿ ವಿಶ್ವ-ಪ್ರೇಮವನ್ನು ಸಾರುತ್ತದೆ. ತೆನೆಗಳು ನಿಸರ್ಗ ಪ್ರತೀಕವಾದರೆ ಸಕಲ ಜೀವ ಜಂತುಗಳು, ಇಡೀ ಮಾನವ ಸಮುದಾಯವೇ ಕಾಳುಗಳ ಪ್ರತೀಕವಾಗುತ್ತದೆ. ಇಂಥ ಅರ್ಥಪೂರ್ಣ ಪರಿಕಲ್ಪನೆಯಲ್ಲಿ ತಮ್ಮ ಕೊನೆಯ ಕಾಣಿಕೆಯನ್ನು ಕಾವ್ಯ ಪ್ರಿಯರಿಗೆ ಎಕ್ಕುಂಡಿಯವರು ಅರ್ಪಿಸಿದ್ದಾರೆ.

'ಬೆಂಗಾಡಿಗೂ ಉಂಟು ನೆಲದ ತಾಯಿಯ
ಹೃದಯ. ಬಿತ್ತಿರುವ ಬೀಜಗಳ ಹೊತ್ತ
ಬಸಿರು. ಬೆಳೆಯ ಬದುಕಿನ ಕನಸು ಕಂಡ
ಕಂದಮ್ಮಗಳು ಹಾಲುಣ್ಣುವಾಗಲೇ
ನೆಲಕೆ ಹಸಿರು.'

(ಗೋದಿಯ ತೆನೆಗಳು)

ಎನ್ನುವ ಸಾಲುಗಳಲ್ಲಿ ನೆಲಕ್ಕೂ ಮನುಷ್ಯತ್ವಕ್ಕೂ ಇರುವ ಸಂಬಂಧವನ್ನು ಸಮೀಕರಿಸಿದ್ದಾರೆ. ಎಕ್ಕುಂಡಿಯವರಿಗೆ ನೋವು ಮತ್ತು ನಲಿವುಗಳು ಒಂದೇ ನಾಣ್ಯದ ಎರಡು ಮುಖಗಳೆಂಬುದರಲ್ಲಿ ತೀವ್ರ ನಂಬಿಕೆ. ಅವರ ಬಹುಪಾಲು ಕವಿತೆಗಳು ಇದನ್ನೇ ಧ್ವನಿಸುತ್ತವೆ. ಅವರು ನೋವನ್ನಾಗಲೀ ಅಥವಾ ನಲಿವನ್ನಾಗಲೀ ಚಿತ್ರಿಸುವಾಗ ವಿಶ್ವವ್ಯಾಪಿಯಾಗಿ ನೋಡುತ್ತಾರೆಯೇ ವಿನಃ ಸ್ವಂತಿಕೆಯ ನೆಲೆಯಲ್ಲಿ ಸೀಮಿತಗೊಳಿಸುವುದಿಲ್ಲ.

'ನಲಿವುಗಳ ನೋವುಗಳ
ತೋರಣವ ತೂಗಿ
ಹೇಳಿದೆ ಯುಗಾದಿ
ಬಂದಿದೆಯೆಂದು ಕೂಗಿ,'

(ರಥ)

'ನೋವುಗಳ, ನಲಿವುಗಳ ಹಂಚಿ
ಕೊಳಲೆಂದು
ಕಾದಿಹರು ಬಂಧುಗಳ, ಕಾದಿರು
ವರೆಂದು.'

(ಶೈಲು ಕಂಬಿಯವರು)

'ಮೆರೆಯಬೇಕು, ದ್ರೌಪದಿ
ನೊಂದ ಎಲ್ಲ ನೋವನು.'

(ಸೌಗಂಧಿಕ)

ಈ ಮುಂತಾದ ಸಾಲುಗಳಲ್ಲಿ ಅವರ ಸಾರ್ವತ್ರಿಕ ದನಿಯನ್ನು ಗುರುತಿಸಬಹುದು. ಹಾಗೆಯೇ ಈ ಕವಿತೆಗಳಲ್ಲಿ ಮಾರ್ಕ್ಸ್‌ವಾದೀ ಚಿಂತನೆಯಿಂದ ಕವಿ ಮನಸ್ಸು ಸುಪ್ತ ಮನುಷ್ಯ ಸಂಬಂಧದ ಹುಡುಕಾಟ ನಡೆಸುವುದನ್ನು, ಮತ್ತೆ ಮತ್ತೆ ನಿರೀಕ್ಷಿಸುವುದನ್ನು ಕಾಣುತ್ತೇವೆ. 'ಬಂಡಿಗಳು ಕಾಯುತ್ತಿವೆ' ಕವಿತೆಯಲ್ಲಿ ದ್ವೇಷಾಸೂಯೆಗಳು ಹುಟ್ಟುಹಾಕುವ ಗಲಭೆಗಳನ್ನು ಯಾವ ಉಪದೇಶಗಳೂ ಇಲ್ಲದೆ ನಿರಾಕರಿಸುತ್ತಾರೆ. ಎಲ್ಲ ಜನರ ಕೊರಳಿನಲ್ಲಿರುವ ಹಾಡೇ ಕುಡುಗೋಲನ್ನೂ ಎಸೆಯುವಂತೆ ಮಾಡುತ್ತದೆ. ಎಕ್ಕುಂಡಿಯವರ ಕವಿತೆಗಳ ವೈಶಿಷ್ಟ್ಯವೆಂದರೆ ಮನುಷ್ಯನಲ್ಲೇ ಅಡಗಿರುವ ಮಾನವ ಸಂಬಂಧಗಳ ಮೂಲ ಸ್ರೋತವನ್ನು ಮೌನವಾಗಿ ಹುಡುಕುವುದು.

'ಮಾನವರ ಪ್ರಿಯಧ್ವನಿಯು
ಕೇಳುವವರೆಗು, ನಿಲ್ಲದೆ ಮುನ್ನಡೆ.'

(ಹಾಡು)

ಎನ್ನುವುದು ಅವರ ಕರೆ. ಇದಕ್ಕೆ ಅವರು ಸಿದ್ಧಾಂತ ಮತ್ತು ತತ್ತ್ವವನ್ನು ಬಲವಾಗಿ ನಂಬುತ್ತಾರೆ. ಒಂದಕ್ಕೊಂದು ವಿರುದ್ಧವೇನೋ ಎನಿಸುವಂಥ ಮಾರ್ಕ್ಸ್‌ವಾದೀ ಸಿದ್ಧಾಂತ ಮತ್ತು ದ್ವೈತ ತತ್ತ್ವಗಳಲ್ಲಿ ಎಲ್ಲೋ ತಾಳಮೇಳವನ್ನು ಗುರುತಿಸುತ್ತಾರೆ, ವಾಸ್ತವ ಬದುಕಿನಲ್ಲಿ ಅದನ್ನು ಕಾಣುತ್ತಾರೆ.

ಇಲ್ಲಿ ಸಂಗ್ರಹಗೊಂಡಿರುವಂಥವು ಒಟ್ಟಾರೆಯಾಗಿ ಜನಸಾಮಾನ್ಯರ ಕವಿತೆಗಳು. ಮನುಷ್ಯ ಪ್ರೇಮ, ಕರುಣೆ, ಏಕತೆಗಳನ್ನು ಸಾರುವ ಕವಿತೆಗಳು ಇಲ್ಲಿವೆ. ಮಕ್ಕಳಿಂದ ಮುದುಕರವರೆಗೆ ಓದಿ ಆನಂದಿಸಬಹುದಾದ ಅದಕ್ಕಿಂತ ಹೆಚ್ಚಾಗಿ ಅರಿತುಕೊಳ್ಳಬಹುದಾದ ಕವಿತೆಗಳು ಸಂಕಲಿತಗೊಂಡಿವೆ. ಈ ಸಂಕಲನದ ಕವಿತೆಗಳು ಅರ್ಥವಾಗುವುದಕ್ಕೆ ತೀವ್ರವಾದ ಕಾವ್ಯಾಭ್ಯಾಸವಾಗಲಿ, ಕಾವ್ಯಮೀಮಾಂಸೆಯ ಅ. ಆ. ಇ....ಆಗಲಿ ತಿಳಿದಿರಬೇಕಾದ ಅಗತ್ಯವಿಲ್ಲ. ತನ್ನ ಸುತ್ತ ಏನಾಗುತ್ತಿದೆ ಎಂಬುದನ್ನು ಗಮನಿಸುವ ಕನಿಷ್ಠ ಪಕ್ಷ ದಿನ ಪತ್ರಿಕೆಯ ಮೇಲೆ ಕಣ್ಣಾಡಿಸುವ ಅಭ್ಯಾಸ ಇರುವವರು ಓದಿ ಅರ್ಥೈಸಿಕೊಳ್ಳಬಹುದು. ಸಾಮಾನ್ಯರ ನಲಿವು, ನೋವುಗಳು, ಅನುಭವಗಳು. ಚಿಂತನೆಯ ವಿಷಯಗಳೇ ಇಲ್ಲಿ ಕಾವ್ಯವಾಗಿ ಹರಿದಿವೆ.

ಲೋಹಗಳ ಜೊತೆಯಲ್ಲಿ ಲೋಭಗಳ
ಕರಗಿಸಿರಿ, ಮೋಹಗಳ ಕರಗಿಸಿರಿ ಬೆಂ
ಕಿಯಲ್ಲಿ, ಎರಕ ಹೊಯ್ಯಿರಿ ಮತ್ತೆ, ಕರು
ಣೆಯಲಿ, ಸಹನೆಯಲಿ, ಒಲುಮೆಯ
ಲಿ, ಆಗ ನಾನಿರುವೆನಲ್ಲಿ....

(ದಾನ)

ಬುದ್ಧ ಹೇಳುವ ಈ ಕವಿ ಮಾತು ಎಲ್ಲ ಸಿದ್ಧಾಂತ ತತ್ತ್ವಗಳ ಸಾರ ಸಂಗ್ರಹದಂತಿದೆ.

ಮಾನವತೆಯನ್ನು ಜಾಗತಿಕ ಸಿದ್ಧಾಂತ, ತತ್ತ್ವಗಳ ಅಧ್ಯಯನದ ಜೊತೆ ಜೊತೆಗೆ ವಾಸ್ತವ ಬದುಕಿಗೆ ಆರೋಪಿಸುತ್ತ, ಹುಡುಕುತ್ತ, ಕಾವ್ಯ ಕೃಷಿಯ ಮೌನದಲ್ಲಿ ಎಲ್ಲವನ್ನು ಕಂಡಿರಿಸಿದವರು ಎಕ್ಕುಂಡಿ.

ಅವರ ಕಾವ್ಯ ಕೃಷಿಯ ಕಡೆಯ ಫಲ ಗೋದಿಯ ತೆನೆ.

'ದೂರ ಪಯಣಕೆ ಇನ್ನು ಹೊರಡೋಣವೇ? ಬಲುಬೇಗನೆ ಕರಗುವವು ಈಗ ಸಂಜೆ?'

(ರಂಗವಲ್ಲಿ)

ಎಂದು ಕೇಳುತ್ತ ಕಾವ್ಯಪ್ರಿಯರ ಪ್ರೀತಿ ಕರುಣೆಗಳ ಹಸಿವನ್ನು ಇಂಗಿಸಲು 'ಗೋದಿಯ ತೆನೆ'ಯನ್ನು ಕಡೆಯದಾಗಿ ಅರ್ಥಪೂರ್ಣವಾಗಿ ಉಳಿಸಿ ಹೋಗಿದ್ದಾರೆ.

ಶ್ರೀಪಾದ ಭಟ್
೪೦, ದೇವೀರಮ್ಮಣ್ಣಿ ಅಗ್ರಹಾರ
ಖಿಲ್ಲೆ ಮೊಹಲ್ಲ, ಮೈಸೂರು

*   *   *   *   *

ಪಂಚ್-ಕ-ಜಾಯ್—ಕವಿ: ಎಚ್. ಡುಂಡಿರಾಜ್; ಪ್ರಕಾಶನ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್. ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–೫೬೦ ೦೦೧; ಪುಟಗಳು: ೬೪, ಮೊದಲ ಮುದ್ರಣ ೧೯೯೭, ಬೆಲೆ: ೨೨ ರೂ.

ಹನಿಗವನ ಸಂಕಲನ ಪಂಚ್-ಕ-ಜಾಯ್ ಕವನಗಳನ್ನು ಹಿಂಜಿದರೆ, ಹಿಂಡಿದರೆ, ಹಿಗ್ಗಿಸಿದರೆ ಆನಂದ ಉದ್ಭವಿಸುವುದೆಂಬ ಶ್ಲೇಷಾರ್ಥ. ಇದರಲ್ಲಿ ಒಟ್ಟು ೮೩ ಹನಿ–ಕವನಗಳಿವೆ. ಕಚಗುಳಿ ಇಡುತ್ತ ಓದಿಸಿಕೊಂಡು ಹೋಗುತ್ತವೆ.

'ಗಣೇಶ ಮಹಿಮೆ' ಎಂಬ ಪ್ರಾರ್ಥನೆಯೊಂದಿಗೆ ಆರಂಭಗೊಂಡಿದೆ. ಗಣಪತಿ ಲಗ್ನ ಯಾಕೆ ಆಗಲಿಲ್ಲವೆಂದು ನೀವು ಚಿಂತಿಸಿದಿರಾದರೆ ಪುಟಸಂಖ್ಯೆ ೮ ನೋಡಿ ತಿಳಿಯುತ್ತದೆ! ಎಲ್ಲ ವಿಷಯಗಳನ್ನು ಪಂಚ್ ಮಾಡಿದ್ದಾರೆ. ರಾಜಕೀಯ, ಕ್ರೀಡೆ, ಸಂಸಾರ, ಪ್ರೀತಿ, ಪ್ರೇಮ, ಋತು, ಶಿಕ್ಷಣ ಹೀಗೆ ಯಾವುದಿಲ್ಲವೆಂದು ಹುಡುಕುವಂತಿಲ್ಲ. ಕವಿತರಾಗಿ, ಹಾಸ್ಯವಾಗಿ, ಕೆಲವೆಡೆ ತೀಕ್ಷ್ಣವಾಗಿ ಚುರುಕು ಮುಟ್ಟಿಸಿದ್ದಾರೆ.


ಪುಟಗಳರಲ್ಲಿ ಗೊಣಗಾಟ—ಎಂಬ ಕವನ ಯಾಕಾದರೂ ಬರುತ್ತದೊ ಈ ಚಳಿಗಾಲ, ವಿಚ್ಛೇದನದ ಕೇಸುಗಳೇ ಸಿಗುತ್ತಿಲ್ಲ! ಎಂದು ಗೊಣಗುಟ್ಟುವ ವಕೀಲ. ಓದಿದಂತೇ ನಮಗದರ ಹಾಸ್ಯಮಯ ಅರ್ಥ ಸ್ಫುರಿಸುತ್ತದೆ. ಅಲ್ಲಲ್ಲಿ ಹನಿಗವನಕ್ಕೆ ಅರ್ಥಸೂಚಿಸುವ ವ್ಯಂಗ್ಯಚಿತ್ರವೂ ಇರುವುದು ಜಾಯ್ ವೃದ್ಧಿಸಲು ಸಹಾಯಕವಾಗುತ್ತದೆ. ಪುಟ ೧೬ ರಲ್ಲಿ ಕಾರಣ ಎಂಬ ಹನಿಕವನವಿದೆ. ಭಾರತದಲ್ಲಿ ಅತೀ ಹೆಚ್ಚು ಚಳಿ ಮದ್ರಾಸಿನಲ್ಲಿದೆ. ತಿಳಿತಾ? ಅದಕ್ಕೆ ಸದಾ ದಪ್ಪದ ಕೋಟು ಧರಿಸುತ್ತಾರೆ ಜಯಲಲಿತಾ! ಪಕ್ಕದಲ್ಲೇ ಭರ್ಜರಿಯಾದ ಜಯಲಲಿತಾರ ವ್ಯಂಗ್ಯಚಿತ್ರ! ಇಂಥ ಒಂದು ಚಮತ್ಕಾರ ಮಾಧ್ಯಮದ ಕೊರತೆ ಎಂದರೆ ಪುಟ ೨೦ರಲ್ಲಿ ಪ್ರಕಟವಾಗಿರುವ ಸಖಿಯರ ಮಾತು ಎಂಬ

ನೀರಸ ಹನಿ—ಅವರನ್ನು, ಅವ-ರನ್ನು ಅರ್ಥವಾದರೂ ಪರಿಣಾಮಕಾರಿ ಆಗಿಲ್ಲ. ಪಂಚಕಜ್ಜಾಯದಲ್ಲಿ ಮರಳು ಸೇರಿದಂತೆ! ಪುಟ ೨೭ ರಲ್ಲಿ ವ್ಯಾಪಾರ ಎಂಬ ಕವನ ಈಗಿನ ಶಿಕ್ಷಣ ನೀತಿ ವ್ಯಾಪಾರಯುತವಾಗಿದೆ ಎಂಬ ನೈಜ ನಿಲವನ್ನು ತೋರಿಸುತ್ತದೆ.

ಸಾಹಿತಿಯನ್ನು ಬಿಟ್ಟಿಲ್ಲ ದುಂಡಿರಾಜ್ ಪುಟ ೨೫ ರಲ್ಲಿ ಅಭ್ಯಾಸ ಎಂಬ ಕವನ—ಅಭ್ಯಾಸಬಲದಿಂದ ಧಾರೆಮಂಟಪದಲ್ಲಿ ಸಾಹಿತಿ ವರ, ಹಾಕಿದ ಕೂಡಲೇ ತೆಗೆದು ಕೆಳಗಿಟ್ಟ ಮದುವೆಹಾರ! ಇಲ್ಲಿ ನವುರು ಹಾಸ್ಯವಡಗಿದೆ. ಪುಟ ೪೪ ರಲ್ಲಿ ಕನ್ನಡಕ್ಕೆ ಬಂದ ದುರವಸ್ಥೆಯನ್ನು ವ್ಯಂಗ್ಯದಿಂದ, ನೈಜತೆಯಿಂದ ಹನಿಸಿದ್ದಾರೆ.

ಪಂಚ್-ಕ-ಜಾಯ್ ಹನಿಗವನ ಓದುವಾಗ ಪ್ರತ್ಯೇಕವಾದ ಅನುಭವ ಕೊಡುತ್ತದೆ. ಪಂಚಕಜ್ಜಾಯ ಸವಿಯುವಾಗ ಅಲ್ಲಲ್ಲಿ ಮರಳು ಸಿಕ್ಕಿದರೂ ಅದನ್ನು ನಿವಾರಿಸಿ ಸವಿಯಬಹುದು. ಥಂಡಿಯ ವೇಳೆ ದುಂಡಿರಾಜರ ಥಂಡೀ ಹನಿಗಳು ವಂಡರ್‌ಫುಲ್ ಅಂಡ್ ಸೌಂಡ್‌ವೆಲ್!

ರುಕ್ಮಿಣಿಮಾಲಾ
ಮನೆ ಸಂಖ್ಯೆ ೮, 'ಅತ್ರಿ'
ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ, ಮೈಸೂರು–೫೭೦೦೦೯



ದಾನವನ್ನು ಮತ್ತು ಪ್ರಾರ್ಥನೆಯನ್ನು ಗುಟ್ಟಾಗಿ ಮಾಡಬೇಕು.

ಕೇವಲ ಶ್ರೀಮಂತಿಕೆಯಿಂದಲೇ ದೇವರ ಕರುಣೆ ಗಳಿಸುವುದು ಅಸಾಧ್ಯ.

—ಏಸುಕ್ರಿಸ್ತ

ಓದುಗರ ಅನಿಸಿಕೆ

ಮಾನ್ಯರೆ,

ಈಚಿನ ಪುಸ್ತಕ ಪ್ರಪಂಚ ತಲಪಿತು. ಇದರಲ್ಲಿಯ ಎಲ್ಲಾ ಲೇಖನಗಳೂ ಚಿಂತನಶೀಲವಾಗಿವೆ. ಅನೇಕ ವರ್ಷಗಳ ನಂತರ ಈ ಪತ್ರಿಕೆಯನ್ನು ಕಂಡು ಸಂತೋಷವಾಯಿತು. ನಾನು ಬಹಳ ದಿನಗಳ ಹಿಂದೆ ಪುಸ್ತಕ ಪ್ರಪಂಚ ಓದುತ್ತಿದ್ದೆ. ಈಗ ಇದರ ಗುಣಮಟ್ಟ ಚೆನ್ನಾಗಿದೆ. ನಲವತ್ತೇಳು ವಸಂತಗಳನ್ನು ಕನ್ನಡ ಪತ್ರಿಕೆಯೊಂದು ಕಂಡಿರುವುದು ವಿಶೇಷವಲ್ಲವೇ?

ಡಾ|| ಬಿ. ಎಸ್. ಶೈಲಜಾ
ವಿಜ್ಞಾನಿ

ನೆಹರು ತಾರಾಲಯ
ಬೆಂಗಳೂರು

* * * * *

೯೭ನೆಯ ಅಕ್ಟೋಬರ್ ಪುಸ್ತಕ ಪ್ರಪಂಚದಲ್ಲಿನ ಚಿಂತನೆಯಲ್ಲಿ ಸಂತ: ಗಾಂಧೀಜಿ ಮುಖಪುಟವು ವಿಶಿಷ್ಟವಾಗಿದೆ. ಪ್ರೊ|| ಕೆ. ಬಿ. ಪ್ರಭುಪ್ರಸಾದ್ ಅವರು 'ಸಮಾಜವಾದ–ಗಾಂಧಿ ದೃಷ್ಟಿ' ಎಂಬ ಲೇಖನದಲ್ಲಿ ಸಮಾಜವಾದದ ನಿಜವಾದ ಅರ್ಥವನ್ನು ಎಳೆ ಎಳೆಯಾಗಿ ಬಿಡಿಸಿ ತೋರಿಸಿದ್ದಾರೆ. ಇಂದು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರು ಗಾಂಧಿಯುವ ರಲ್ಲಿದ್ದ ನೂರನೆಯ ಒಂದು ಪಾಲಿನಷ್ಟಾದರೂ ತಮ್ಮ ಆಚರಣೆಯಲ್ಲಿ ಅಳವಡಿಸಿಕೊಂಡರೆ ಸಾಕು. ಸ್ವಾರ್ಥಸಾಧಕರ ಕೈಯ್ಯಲ್ಲಿ ಸಿಕ್ಕಿಕೊಂಡಿರುವ 'ಸಮಾಜ ಸೇವೆ' ಎಂಬುದು ಇಂದು ವಿಕೃತವಾಗಿದೆ. ಇಂಥವರು ಸಮಾಜ ಸೇವೆಯಿಂದ ದೂರ ಇದ್ದಷ್ಟೂ ಸಮಾಜಕ್ಕೆ ಕ್ಷೇಮ.

ಮನುಷ್ಯ ತಿಳಿದೋ ತಿಳಿಯದೆಯೋ ತಪ್ಪು ಮಾಡುತ್ತಾನೆ. ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದು ಮತ್ತು ಇನ್ನು ಮುಂದೆ ಈ ತಪ್ಪು ಮಾಡದಿರುವುದು ದೊಡ್ಡವರ ಲಕ್ಷಣ. ಜಿ. ವೈದೇಹಿ ಅವರು ತಮ್ಮ 'ಅಸಾಮಾನ್ಯ ವ್ಯಕ್ತಿ ಗಾಂಧೀಜಿ' ಎಂಬ ಲೇಖನದಲ್ಲಿ ಗಾಂಧಿ ಹೇಗೆ ಅಸಾಮಾನ್ಯ ವ್ಯಕ್ತಿಯಾಗಿ ಬೆಳೆಯುತ್ತಾ ಬಂದರು ಎಂಬುದನ್ನು ನಿದರ್ಶನಗಳ ಮೂಲಕ ನಿರೂಪಿಸಿದ್ದಾರೆ.

ಗಾಂಧೀ ಜಯಂತಿ ಸಂದರ್ಭದಲ್ಲಿ ಈ ಲೇಖನಗಳು ಪ್ರಕಟವಾಗಿರುವುದು ಅರ್ಥಪೂರ್ಣವಾಗಿದೆ. ಇದೇ ರೀತಿ ಲಾಲ್‌ಬಹದ್ದೂರ್ ಶಾಸ್ತ್ರಿ ಅವರನ್ನೂ ಕುರಿತು ಲೇಖನ ಪ್ರಕಟವಾಗಿದ್ದಲ್ಲಿ ಹೆಚ್ಚು ಅರ್ಥಪೂರ್ಣವಾಗುತ್ತಿತ್ತು.

ವಿ. ವಿ. ಹಳಕಟ್ಟಿ

ರಾಣಿಬೆನ್ನೂರು

Reg. No. KRNN.29 / WPP 6

LICENCE No. 21
LICENCED TO POST WITH PAYMENT



ದಿವಂಗತ ಪ್ರೊ|| ಎಚ್. ಎಂ. ಶಂಕರನಾರಾಯಣರಾವ್

Edited by Chandrashekhararadhya, Printed by Papanna
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.

Phone: 512485